ಮಂಗಳವಾರ, ಜನವರಿ 9, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಹನುಮಾನ್
ನಟ ರಾಣಾ ದಗ್ಗುಬಾಟಿ ಮುಂಬೈನಲ್ಲಿ ಸೋಮವಾರ 'ಹನುಮಾನ್' ಸಿನಿಮಾದ ಪತ್ರಿಕಾಗೋಷ್ಠಿಯಲ್ಲಿ ಕಾಣಿಸಿಕೊಂಡಿದ್ದು ಹೀಗೆ – ಪಿಟಿಐ ಚಿತ್ರ

‘ಪ್ರಜಾವಾಣಿ’ ಫೋನ್ ಇನ್ ಕಾರ್ಯಕ್ರಮದಲ್ಲಿ ಮಾಹಿತಿ ನೀಡಿದ ಕೌಶಲಾಭಿವೃದ್ಧಿ ಸಚಿವ ಶರಣ ಪ್ರಕಾಶ ಪಾಟೀಲ

ಯುವನಿಧಿಗೆ ಮೂರೇ ಮಾನದಂಡ

ಪ್ರಜಾವಾಣಿ ಫೋನ್-ಇನ್


ಶರಣ ಪ್ರಕಾಶ ಪಾಟೀಲ

ಬೆಂಗಳೂರು: 2022-23ರಲ್ಲಿ ಪದವಿ, ಡಿಪ್ಲೊಮಾ ಉತ್ತೀರ್ಣರಾಗಿರುವ ಜೊತೆಗೆ, ಮೂರೇ ಮೂರು ಮಾನದಂಡಗಳಿಗೆ ಒಳಪಡುವವರು ರಾಜ್ಯ ಸರ್ಕಾರದ ಪ್ರಸಕ್ತ ಸಾಲಿನ ‘ಯುವನಿಧಿ’ ಯೋಜನೆಗೆ ಅರ್ಹರಾಗುತ್ತಾರೆ.

ಅರ್ಜಿ ಸಲ್ಲಿಸುವವರು ಯಾವುದೇ ಸರ್ಕಾರಿ ಅಥವಾ ಖಾಸಗಿ ಉದ್ಯೋಗಿಯಾಗಿರಬಾರದು, ಸ್ವಯಂ ಉದ್ಯೋಗ ಇರಬಾರದು, ಉನ್ನತ ವಿದ್ಯಾಭ್ಯಾಸ ಮಾಡುತ್ತಿರಬಾರದು– ಇವೇ ಆ ಮೂರು ಮಾನದಂಡಗಳು. ಇವನ್ನು ಬಿಟ್ಟು ಎಪಿಎಲ್, ಬಿಪಿಎಲ್.. ಇಂಥ ಯಾವುದೇ ಮಾನದಂಡಗಳಿರುವುದಿಲ್ಲ.

‘ಪ್ರಜಾವಾಣಿ’ ಕಚೇರಿಯಲ್ಲಿ ಸೋಮವಾರ ನಡೆದ ಫೋನ್-ಇನ್ ಕಾರ್ಯಕ್ರಮದಲ್ಲಿ ಕರೆ ಸ್ವೀಕರಿಸಿ ಮಾತನಾಡಿದ ಕೌಶಲಾಭಿವೃದ್ಧಿ, ಜೀವನೋಪಾಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ ಪಾಟೀಲ ಈ ವಿವರ ನೀಡಿದರು.

ಕರ್ನಾಟಕದಲ್ಲಿ ವಾಸ ಇರುವವರು ಸೇವಾಸಿಂಧು ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಆಯಾ ವಿಶ್ವವಿದ್ಯಾಲಯದವರೇ ನ್ಯಾಷನಲ್ ಅಕಾಡೆಮಿ ಡೆಪಾಸಿಟರಿಯಲ್ಲಿ (ಎನ್‌ಎಡಿ) ಪ್ರಮಾಣ ಪತ್ರಗಳನ್ನು ಡೆಪಾಸಿಟ್ ಮಾಡಬೇಕು ಎಂದು ಮಾಹಿತಿ ನೀಡಿದರು.

ಉಳಿದವರಿಗೆ ಕೌಶಲ ತರಬೇತಿ: 2022–23ಕ್ಕಿಂತ ಮೊದಲು ಉತ್ತೀರ್ಣರಾದವರು ಏನು ಮಾಡಬೇಕು ಎಂಬ ಬಗ್ಗೆ ಹಲವು ಪ್ರಶ್ನೆಗಳು ‘ಫೋನ್ ಇನ್’ನಲ್ಲಿ ಬಂದವು. ಅದಕ್ಕೆ ಸಚಿವರು ಉತ್ತರಿಸಿ, ‘ಅಂಥವರು ಸ್ಕಿಲ್ ಕನೆಕ್ಟ್ ಪೋರ್ಟಲ್‌ನಲ್ಲಿ(https://skillconnect.kaushalkar.com) ನೋಂದಣಿ ಮಾಡಿಕೊಳ್ಳಬೇಕು. ಅವರಿಗೆ ಬೇಕಾದ ತರಬೇತಿಯನ್ನು ಆಯ್ಕೆ ಮಾಡಿಕೊಳ್ಳಲು ಪೋರ್ಟಲ್‌ನಲ್ಲಿ ಅವಕಾಶ ನೀಡಲಾಗಿದೆ’ ಎಂದು ತಿಳಿಸಿದರು.

ನಿರುದ್ಯೋಗಿ ಪದವೀಧರರಿಗೆ ತಿಂಗಳಿಗೆ ₹ 3,000, ಡಿಪ್ಲೊಮಾ ಹೊಂದಿದವರಿಗೆ ₹ 1,500ವನ್ನು 2 ವರ್ಷವರೆಗೆ ನೀಡುವುದು ಯುವನಿಧಿ ಯೋಜನೆ. ಇದರ ಜೊತೆಗೆ ನಿರುದ್ಯೋಗಿಗಳಿಗೆ ಉದ್ಯೋಗ ನೀಡಲು ಬೇಕಾದ ಕ್ರಮ ವಹಿಸುವುದು ಕೂಡ ಸರ್ಕಾರದ ಗುರಿ. ಕೇವಲ ನಿರುದ್ಯೋಗ ಭತ್ಯೆ ನೀಡುವುದು, ತರಬೇತಿ ನೀಡುವುದರಿಂದ ಪ್ರಯೋಜನ ವಾಗುವುದಿಲ್ಲ. ತರಬೇತಿ ಜೊತೆಗೆ ಉದ್ಯೋಗ ನೀಡುವುದು ಮುಖ್ಯವಾಗಬೇಕು ಎಂದು ವಿಶ್ಲೇಷಿಸಿದರು.

ನಿರುದ್ಯೋಗಿಗಳ ವಿದ್ಯಾರ್ಹತೆ ಮತ್ತು ಆಸಕ್ತಿಗೆ ಅನುಗುಣವಾಗಿ ಕೌಶಲ ತರಬೇತಿ ನೀಡಲಾಗುವುದು. ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಉದ್ಯೋಗ-ಮೇಳವನ್ನು ನಡೆಸಲಾಗುವುದು. ಅಲ್ಲಿ ಕಂಪನಿಗಳು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತವೆ ಮತ್ತು ಅವರಿಗೆ ಬೇಕಾದ ತರಬೇತಿಯನ್ನು ಆ ಕಂಪನಿಗಳೇ ನೀಡುತ್ತವೆ. ಸರ್ಕಾರವು ಕಂಪನಿ ಮತ್ತು ನಿರುದ್ಯೋಗಿಗಳ ನಡುವೆ ಸಂಪರ್ಕ ಕೊಂಡಿಯಾಗಿರಲಿದೆ ಎಂದರು.

ಫಲಿತಾಂಶ ತಡವಾಗಿದ್ದರಿಂದ ಗೊಂದಲ: ಕೋವಿಡ್ ಕಾರಣದಿಂದ ಕೆಲವು ವಿಶ್ವವಿದ್ಯಾಲಯಗಳಲ್ಲಿ 2 ವರ್ಷಗಳಲ್ಲಿ ಫಲಿತಾಂಶ ತಡವಾಗಿತ್ತು. 2023ರ ಜನವರಿಯಲ್ಲಿ ಫಲಿತಾಂಶ ಪ್ರಕಟವಾಗಿತ್ತು. ಆ ವರ್ಷದಲ್ಲಿ ಫಲಿತಾಂಶ ಪ್ರಕಟವಾದರೂ, ಅದು 2022–23ನೇ ಸಾಲಿಗೆ ಸೇರುವುದಿಲ್ಲ. ಇಂಥವರು ಸೇವಾ ಸಿಂಧು ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಲು ಹೋದಾಗ ಪೋರ್ಟಲ್ ತೆರೆದುಕೊಳ್ಳುತ್ತಿಲ್ಲ ಎಂದು ಮಾಹಿತಿ ನೀಡಿದರು.

ಹಲವು ಸಮಸ್ಯೆಗಳು

ರಿಮ್ಸ್‌ನಲ್ಲಿ ಕಂಪ್ಯೂಟರ್ ಆಪರೇಟರ್‌ಗಳಿಗೆ ಐದು ತಿಂಗಳಿನಿಂದ ವೇತನ ಆಗದಿರುವ ಬಗ್ಗೆ ಶರಣು, ಗಿರಿಜಾ ರಾಯಚೂರು, ಸ್ಟಾಫ್‌ನರ್ಸ್‌ಗಳಿಗೆ ಕನಿಷ್ಠ ವೇತನ ಇಲ್ಲದಿರುವ ಬಗ್ಗೆ ಸುರನ್ ಕುಮಾರ್, ಅಲ್ಲಿ ಎಂಬಿಬಿಎಸ್ ವಿದ್ಯಾರ್ಥಿಗಳಿರುವ ಹಾಸ್ಟೆಲ್‌ನಲ್ಲಿ ವಿದ್ಯುತ್ ಕೈಕೊಟ್ಟರೆ, ಪರ್ಯಾಯ ವ್ಯವಸ್ಥೆ ಇಲ್ಲದಿರುವ ಬಗ್ಗೆ ಬಾಷಾ ಸಚಿವರ ಗಮನ ಸೆಳೆದರು.

ಹಾಸನ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಸಿಬ್ಬಂದಿ ಕೊರತೆ ಬಗ್ಗೆ ಬಸವರಾಜು ತಿಪಟೂರು ಮತ್ತು ಪಿಜಿ ವಿದ್ಯಾರ್ಥಿ ಪೃಥ್ವಿ, ಯಾದಗಿರಿ ವೈದ್ಯಕೀಯ ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆ ಬಗ್ಗೆ ಸುರಪುರದ ರಾಘವೇಂದ್ರ ಪ್ರಶ್ನಿಸಿದರು. ಐಟಿಐ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕ ಸೇವಾ ಭದ್ರತೆ ಇಲ್ಲದಿರುವ ಬಗ್ಗೆ ಹಾಸನದ ಸಂತೋಷ್ ಅಳಲು ತೋಡಿಕೊಂಡರು.

ಅಂಕಿ ಅಂಶ

5.29 ಲಕ್ಷ — 2022–23ರಲ್ಲಿ ಪದವಿ ಪೂರ್ಣಗೊಳಿಸಿದವರು.

4.12 ಲಕ್ಷ — ವಿವಿಧ ವಿಶ್ವವಿದ್ಯಾಲಯಗಳು ಎನ್‌ಎಡಿಯಲ್ಲಿ ಪ್ರಮಾಣ ಪತ್ರಗಳನ್ನು ಡೆಪಾಸಿಟ್ ಮಾಡಿರುವ ಪ್ರಮಾಣ

50 ಸಾವಿರ — ಯುವನಿಧಿಗೆ ಈಗಾಗಲೇ ನೋಂದಾಯಿಸಿಕೊಂಡವರು.

ಯುವ ನಿಧಿ

ಪ್ರಶ್ನೆಗಳ ಮಹಾಪೂರ

ಫೋನ್ ಇನ್ ಕಾರ್ಯಕ್ರಮದಲ್ಲಿ ಪ್ರಶ್ನೆಗಳ ಮಹಾಪೂರವೇ ಹರಿದು ಬಂತು. ಅದರಲ್ಲಿ ಯುವನಿಧಿಗೆ ಸಂಬಂಧಿಸಿದಂತೆಯೇ ಶಹಪೂರದ ಪೂಜಾ, ರಮೇಶ್, ಕಲಬುರಗಿಯ ಆಕಾಶ್, ರಾಯಚೂರಿನ ಬಸವಲಿಂಗಪ್ಪ, ವಿಜಯಪುರದ ನಿಖಿತಾ ಸಹಿತ ಹಲವು ಮಂದಿ ಪ್ರಶ್ನಿಸಿ ಗೊಂದಲ ಪರಿಹರಿಸಿಕೊಂಡರು.

- **ಜೆಟಿಒ (ಜೂನಿಯರ್ ಟ್ರೈನಿಂಗ್ ಆಫೀಸರ್) ಪರೀಕ್ಷೆ ಬರೆದು ಆರು ವರ್ಷಗಳಾಗಿವೆ. ಸರ್ಕಾರದಿಂದ ಎನ್‌ಎಸಿ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಇನ್ನೂ ಅಂತಿಮ ಆಯ್ಕೆ ಪಟ್ಟಿ ಬಿಡುಗಡೆ ಮಾಡಿಲ್ಲ.**

–**ಸುರೇಶ್,** ಬೆಳಗಾವಿ

ಸಚಿವ: ಪ್ರಕರಣ ಕೋರ್ಟ್‌ನಲ್ಲಿದೆ. ಕೆಪಿಎಸ್‌ಸಿ ಪಟ್ಟಿಯನ್ನು ಅಂತಿಮಗೊಳಿಸಿದೆ. ಮುಂದಿನ ವಿಚಾರಣೆಯಲ್ಲಿ (ಜ.16) ಕೋರ್ಟ್‌ಗೆ ಪಟ್ಟಿಯನ್ನು ಸಲ್ಲಿಸಲಾಗುತ್ತಿದೆ. ಕೋರ್ಟ್ ಅನುಮತಿ ನೀಡಿದ ನಂತರ, ಅಂತಿಮ ಜ್ಯೇಷ್ಠತಾ ಪಟ್ಟಿ ಬಿಡುಗಡೆ ಮಾಡುತ್ತೇವೆ.

- **ನಿಮ್ಹಾನ್ಸ್‌ನಲ್ಲಿ ಪಾರ್ಕಿಂಗ್ ಶುಲ್ಕ ದುಬಾರಿ ಇದೆ. ಇಲ್ಲಿಗೆ ಬಡವರು ಹೆಚ್ಚು ಹೋಗುತ್ತಾರೆ. ಹೊರ ರೋಗಿಗಳ ವಿಭಾಗದಲ್ಲಿ ಮೊದಲು ಬಂದವರಿಗೆ ಮೊದಲು ಚಿಕಿತ್ಸೆ ಸಿಗುತ್ತಿಲ್ಲ.**

ಶಂಕರ್‌ನಾಯಕ್, ಬೆಂಗಳೂರು

ಸಚಿವ: ನಿಮ್ಹಾನ್ಸ್, ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಆದರೂ, ನಾನು ನಿಮ್ಮ ದೂರನ್ನು ನಿಮ್ಹಾನ್ಸ್ ನಿರ್ದೇಶಕರಿಗೆ ಕಳುಹಿಸಿಕೊಡುವೆ. ಒಪಿಡಿಯಲ್ಲಿ ಮೊದಲು ಬಂದವರಿಗೆ ಮೊದಲ ಸೇವೆಯನ್ನು ಅನುಸರಿಸಲು ತಿಳಿಸುವೆ.

- **ಕಾರವಾರದಲ್ಲಿರುವ ವೈದ್ಯಕೀಯ ಕಾಲೇಜಿನಲ್ಲಿ ಬ್ಯಾಕ್‌ಲಾಗ್‌ನ 17 ಹುದ್ದೆಗಳನ್ನು ಬಿಟ್ಟು, 37 ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಿದ್ದಾರೆ. ರೋಸ್ಟರ್ ಪ್ರಕಾರ ಸರಿಯಾಗಿ ಹುದ್ದೆಗಳ ನೇಮಕಾತಿಯಾಗುತ್ತಿಲ್ಲ.**

– **ದೀಪಕ್,** ಕಾರವಾರ

ಸಚಿವ: ವೈದ್ಯಕೀಯ ಇಲಾಖೆಯ ಎಲ್ಲ ನೇಮಕಾತಿಗಳೂ ಮೆರಿಟ್ ಮತ್ತು ರೋಸ್ಟರ್ ಪದ್ಧತಿಯ ಮೂಲಕವೇ ನಡೆಯಲಿವೆ. ಈ ಪ್ರಕರಣವನ್ನು ಪರಿಶೀಲಿಸುತ್ತೇನೆ. ಕಾನೂನು ಬಾಹಿರ ಎಂದು ಕಂಡರೆ ಖಂಡಿತಾ ಕ್ರಮ ಕೈಗೊಳ್ಳುತ್ತೇನೆ.

- **ಹೊಸ ಜಿಲ್ಲೆಯಾಗಿರುವ ವಿಜಯನಗರಕ್ಕೆ ವೈದ್ಯಕೀಯ ಕಾಲೇಜು ಬೇಕು. ಹೈದರಾಬಾದ್– ಕರ್ನಾಟಕದಲ್ಲಿ ತುಂಬಾ ನೇಮಕಾತಿಗಳು ಬಾಕಿ ಇವೆ.**

– **ವಿನಾಯಕ,** ವಿಜಯನಗರ

ಸಚಿವ: ಕಲ್ಯಾಣ ಕರ್ನಾಟಕದಲ್ಲಿ ಬಾಕಿ ಇರುವ ಎಲ್ಲ ಹುದ್ದೆಗಳನ್ನು ಭರ್ತಿ ಮಾಡಲು ಸಚಿವರಾದ ಪ್ರಿಯಾಂಕ್ ಖರ್ಗೆ, ಬೋಸರಾಜು ಅವರೊಂದಿಗೆ ಸಭೆ ನಡೆಸಿದ್ದೇನೆ. 7,000 ಹುದ್ದೆಗಳಿಗೆ ಅರ್ಜಿ ಆಹ್ವಾನಿಸುತ್ತಿದ್ದೇವೆ. ಜಿಲ್ಲೆಗೊಂದು ವೈದ್ಯಕೀಯ ಕಾಲೇಜು ಮಾಡಬೇಕೆಂಬ ವಿಷಯ ಪರಿಶೀಲನೆಯಲ್ಲಿದೆ.

- **ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ವೈದ್ಯರು 12 ಗಂಟೆಯಿಂದ 4 ಗಂಟೆವರೆಗೆ ಲಭ್ಯವಿರುವುದಿಲ್ಲ. ಊಟಕ್ಕೆ ಹೋದವರು ಬರುವುದಿಲ್ಲ. ಹೊರ ರೋಗಿಗಳ ವಿಭಾಗದಲ್ಲೂ ವೈದ್ಯರು ಇರುವುದಿಲ್ಲ. ಪಿ.ಜಿ ವಿದ್ಯಾರ್ಥಿಗಳಷ್ಟೇ ಇರುತ್ತಾರೆ.**

– **ನವೀನ್,** ಮೈಸೂರು

ಸಚಿವ: ಹೊರ ರೋಗಿಗಳ ಪರೀಕ್ಷಿಸುವ ಸಮಯದಲ್ಲಿ ಕಡ್ಡಾಯವಾಗಿ ವೈದ್ಯರು ಇರಬೇಕು. ಈ ಆಸ್ಪತ್ರೆಯ ವಿಷಯವನ್ನು ಪರಿಶೀಲಿಸುತ್ತೇನೆ.

- **ಸೇಡಂ ಸರ್ಕಾರಿ ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆ ಇದೆ. ಕೆಲವು ಪಿಎಚ್‌ಸಿಗಳಲ್ಲಿ ಒಬ್ಬರೇ ವೈದ್ಯರು ಎರಡು ಮೂರು ಕಡೆ ಕೆಲಸ ನಿರ್ವಹಿಸವಂತಾಗಿದೆ.**

– **ವರದಪ್ಪ,** ಸೇಡಂ

ಸಚಿವ: ತಾಲ್ಲೂಕು ಆಸ್ಪತ್ರೆಯಲ್ಲಿ ತಜ್ಞ ವೈದ್ಯರ ಕೊರತೆ ಇಲ್ಲ. ಪಿಎಚ್‌ಸಿಯಲ್ಲಿರುವ ಸಮಸ್ಯೆ ಬಗ್ಗೆ ಡಿಎಚ್‌ಒ ಅವರಿಗೆ ಗಮನ ಹರಿಸಲು ಸೂಚಿಸಿವೆ.

- **ಸರ್ಕಾರಿ ವೈದ್ಯಕೀಯ ಕಾಲೇಜು ನೇಮಕಾತಿಯಲ್ಲಿ ಮೀಸಲಾತಿ ಅನುಸರಿಸುವುದಿಲ್ಲ. ಬ್ಯಾಕ್‌ಲಾಗ್ ಹುದ್ದೆಗಳನ್ನು ಬಹಳ ಕಡಿಮೆ ತೋರಿಸುತ್ತಾರೆ. ಗ್ರೂಪ್ ಬಿ ಮತ್ತು ಸಿ ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಳ್ಳುತ್ತದೆ.**

– **ಶೀತಲ್ ಕಾಂಬ್ಳೆ,** ಬಾಗಲಕೋಟೆ

ಸಚಿವ: ಎಲ್ಲ ವೈದ್ಯಕೀಯ ಕಾಲೇಜುಗಳಲ್ಲಿ ಹುದ್ದೆಗಳನ್ನು ಭರ್ತಿ ಮಾಡುವಾಗ ಮೆರಿಟ್ ಮತ್ತು ರೋಸ್ಟರ್ ಪದ್ಧತಿಯನ್ನೇ ಅನುಸರಿಸಲಾಗುತ್ತದೆ.

ಸುದ್ದಿ 2 ನಿಮಿಷ

ಲೋಕಸಭೆ ಚುನಾವಣೆ: ‘ಕೈ’ ನಾಯಕರ ಜೊತೆ ಚರ್ಚೆ

ಬೆಂಗಳೂರು: ಮುಂಬರುವ ಲೋಕಸಭೆ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಲು ರಾಜ್ಯಕ್ಕೆ ಸೋಮವಾರ ಬಂದಿರುವ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ತಾವು ವಾಸ್ತವ್ಯ ಹೂಡಿರುವ ತಾಜ್ ವೆಸ್ಟೆಂಡ್ ಹೋಟೆಲ್‌ಗೆ ಕೆಲವು ನಾಯಕರನ್ನು ಕರೆಯಿಸಿಕೊಂಡು ಚರ್ಚೆ ನಡೆಸಿದರು.

ಮಂಗಳವಾರವೂ ಕೆಲವು ನಾಯಕರ ಜೊತೆ ಅನೌಪಚಾರಿಕವಾಗಿ ಸಮಾಲೋಚನೆ ನಡೆಸಲಿರುವ ಅವರು, ಸಚಿವರು, ಶಾಸಕರು, ಜಿಲ್ಲಾ ಘಟಕಗಳ ಅಧ್ಯಕ್ಷರು ಮತ್ತು ಇತರ ಪ್ರಮುಖ ನಾಯಕರ ಜೊತೆ ಬುಧವಾರ (ಜ. 10) ಚರ್ಚೆ ನಡೆಸಲಿದ್ದಾರೆ.



‘ನಿಗಮ ಮಂಡಳಿಗಳಿಗೆ ಈಗಾಗಲೇ ಸಿದ್ಧಪಡಿಸಿರುವ ಪಟ್ಟಿಯ ಬಗ್ಗೆ ಕೆಲವು ಶಾಸಕರು ಮತ್ತು ನಿಗಮ ಮಂಡಳಿ ಸ್ಥಾನದ ಮೇಲೆ ಕಣ್ಣಿಟ್ಟಿರುವ ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮುನಿಸು ತಣಿಸುವ ಕೆಲಸವನ್ನು ಸುರ್ಜೇವಾಲ ಮೊದಲು ಮಾಡಲಿದ್ದಾರೆ’ ಎನ್ನಲಾಗಿದೆ.

ಲೋಕಸಭೆ ಚುನಾವಣೆಯಲ್ಲಿ ಕನಿಷ್ಠ 20 ಸೀಟುಗಳನ್ನು ಗೆಲ್ಲಬೇಕೆಂಬ ಗುರಿಯನ್ನು ಪಕ್ಷ ಇಟ್ಟುಕೊಂಡಿದೆ. ಅದಕ್ಕೆ ಪೂರಕವಾಗಿ ಜನವರಿ ಅಂತ್ಯದೊಳಗೆ ಕೆಲವು ಕ್ಷೇತ್ರಗಳ ಅಭ್ಯರ್ಥಿಗಳನ್ನು ಅಂತಿಮಗೊಳಿಸಲು ಕಾಂಗ್ರೆಸ್ ನಾಯಕರು ಮುಂದಾಗಿದ್ದಾರೆ. ಪಕ್ಷ ಸಂಘಟನೆಯ ಜೊತೆಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಬಗ್ಗೆಯೂ ರಾಜ್ಯದ ನಾಯಕರ ಜೊತೆ ಸುರ್ಜೇವಾಲ ಚರ್ಚೆ ನಡೆಸಲಿದ್ದಾರೆ. ಬಹುತೇಕ ಕ್ಷೇತ್ರಗಳಿಗೆ ಎರಡು– ಮೂರು ಸಂಭವನೀಯ ಅಭ್ಯರ್ಥಿಗಳನ್ನು ಗುರುತಿಸಲಾಗಿದೆ.

ಈ ಅಭ್ಯರ್ಥಿಗಳ ಬಗ್ಗೆಯೂ ಸ್ಥಳೀಯ ನಾಯಕರಿಂದ ಅಭಿಪ್ರಾಯ ಸಂಗ್ರಹ ನಡೆಯಲಿದೆ ಎಂದೂ ಮೂಲಗಳು ಹೇಳಿವೆ.

ತರೀಕೆರೆಯಲ್ಲಿ ಮರ ಕಡಿದವರ ಮೇಲೆ ಕ್ರಮ ಏಕಿಲ್ಲ: ಕುಮಾರಸ್ವಾಮಿ ಪ್ರಶ್ನೆ

ಬೆಂಗಳೂರು: ‘ಸಂಸದ ಪ್ರತಾಪ್ ಸಿಂಹ ಅವರ ತಮ್ಮ ವಿಕ್ರಂ ಸಿಂಹರನ್ನು ಬಂಧಿಸಿದ ಅರಣ್ಯ ಇಲಾಖೆ ತರೀಕೆರೆಯಲ್ಲಿ ಮರ ಕಡಿದು ಶಾಸಕರ ಮನೆಗೆ ಸಾಗಿಸಿದವರ ಮೇಲೆ ಏಕೆ ಕ್ರಮ ಜರುಗಿಸಿಲ್ಲ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ತರೀಕೆರೆಯಲ್ಲಿ ಅರಣ್ಯದಲ್ಲಿ ಮರ ಕಡಿತಲೆ ಮಾಡಿದ ಪ್ರಕರಣದಲ್ಲಿ ಎಷ್ಟು ಮಂದಿ ಅಧಿಕಾರಿಗಳು ಶಾಮೀಲಾಗಿದ್ದಾರೆ? ಕಡಿದ ಮರಗಳಲ್ಲಿ ಅರ್ಧದಷ್ಟನ್ನು ಮನೆ ಕಟ್ಟುತ್ತಿದ್ದ ಶಾಸಕನ ಮನೆಗೆ ಸಾಗಿಸಿರುವುದು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ಗೊತ್ತಿಲ್ಲವೆ? ನಾನು ದಾಖಲೆ ಒದಗಿಸುತ್ತೇನೆ. ಅವರು ಕ್ರಮ ಜರುಗಿಸಲು ಸಿದ್ಧವೆ’ ಎಂದರು. .

ಅರಣ್ಯ ಇಲಾಖೆಯಲ್ಲಿ ನಡೆದಿರುವ ಅಕ್ರಮಗಳ ಕುರಿತು ಮಾಹಿತಿ ಒದಗಿಸಿದರೆ ತನಿಖೆ ಮಾಡುವ ದಮ್ಮು, ತಾಕತ್ತು ಸಚಿವರಿಗೆ ಇದೆಯೆ? ವಿಕ್ರಂ ಸಿಂಹ ವಿರುದ್ಧದ ಪ್ರಕರಣಕ್ಕಿಂತಲೂ ಗಂಭೀರವಾದ ಪ್ರಕರಣಗಳ ಮಾಹಿತಿ ಕೊಟ್ಟರೆ ಕ್ರಮ ಜರುಗಿಸುವ ಧೈರ್ಯ ಇದೆಯೆ ಎಂದು ಕೇಳಿದರು.

ಬಸವಣ್ಣರನ್ನು ರಾಜ್ಯದ ಸಾಂಸ್ಕೃತಿಕ ನಾಯಕರನ್ನಾಗಿ ಘೋಷಿಸಲು ಆಗ್ರಹ

ಲಿಂಗಾಯತ ಶ್ರೀಗಳಿಂದ ಸಿ.ಎಂ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವಣ್ಣ ಅವರನ್ನು ರಾಜ್ಯದ ಸಾಂಸ್ಕೃತಿಕ ನಾಯಕ ಎಂದು ಘೋಷಿಸುವಂತೆ ಲಿಂಗಾಯತ ಮಠಾಧೀಶರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದರು.

ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಅಧ್ಯಕ್ಷರಾಗಿರುವ ಭಾಲ್ಕಿ ಹಿರೇಮಠ ಸಂಸ್ಥಾನದ ಬಸವಲಿಂಗ ಪಟ್ಟದೇವರು ಸ್ವಾಮೀಜಿ, ಗದುಗಿನ ತೋಂಟದಾರ್ಯ ಮಠದ ಸಿದ್ದರಾಮ ಸ್ವಾಮೀಜಿ, ಸಾಣೆಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ಮುಖ್ಯಮಂತ್ರಿಯವರನ್ನು ಸೋಮವಾರ ಭೇಟಿಮಾಡಿದ ಲಿಂಗಾಯತ ಹಾಗೂ ವಿವಿಧ ಸಮುದಾಯಗಳ 48 ಮಠಾಧೀಶರ ನಿಯೋಗ, ಈ ಬೇಡಿಕೆ ಮಂಡಿಸಿತು.

‘ಬಸವಾದಿ ಶರಣರ ಆಶಯಗಳೆಲ್ಲವೂ ನಮ್ಮ ಸಂವಿಧಾನದಲ್ಲಿವೆ. ವಚನ ಮತ್ತು ಸಂವಿಧಾನದ ಧ್ಯೇಯೋದ್ದೇಶಗಳು ಒಂದೇ ಆಗಿವೆ. ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಲು ನನ್ನ ತಕರಾರಿಲ್ಲ. ಆದರೆ, ನಾನೊಬ್ಬನೇ ನಿರ್ಧಾರ ಕೈಗೊಳ್ಳಲಾಗದು. ಸಂಪುಟದಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಸಿದ್ದರಾಮಯ್ಯ ನಿಯೋಗಕ್ಕೆ ಭರವಸೆ ನೀಡಿದರು.

ಫಕೀರ ದಿಂಗಾಲೇಶ್ವರ ಸ್ವಾಮೀಜಿ, ರಾಜಶೇಖರ ಶಿವಾಚಾರ್ಯ ಸ್ವಾಮೀಜಿರು, ಚನ್ನಬಸವಾನಂದ ಸ್ವಾಮೀಜಿ, ವೀರಭದ್ರ ಶಿವಾಚಾರ್ಯ ಸ್ವಾಮೀಜಿ ಕಡಕಂಚಿ, ಅಕ್ಕ ಅನ್ನಪೂರ್ಣತಾಯಿ, ಮೈಸೂರು ಉರಿಲಿಂಗ ಪೆದ್ದಿಮಠದ ಜ್ಞಾನ ಪ್ರಕಾಶ ಸ್ವಾಮೀಜಿ, ಡಾ.ಗಂಗಾಬಿಕೆ ಅಕ್ಕ, ಚಿತ್ರದುರ್ಗದ ಮಾದಾರ ಚನ್ನಯ್ಯ ಸ್ವಾಮೀಜಿ ನಿಯೋಗದಲ್ಲಿದ್ದರು. ಸಚಿವರಾದ ಎಂ.ಬಿ. ಪಾಟೀಲ, ಈಶ್ವರ ಖಂಡ್ರೆ, ಬಸವ ಸಮಿತಿ ಅಧ್ಯಕ್ಷರಾದ ಅರವಿಂದ ಜತ್ತಿ, ಸಾಹಿತಿಗಳಾದ ಎಸ್.ಜಿ.ಸಿದ್ದರಾಮಯ್ಯ, ಬಂಜಗೆರೆ ಜಯಪ್ರಕಾಶ್ ನಿಯೋಗದ ಜತೆಗಿದ್ದರು.


ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಪದಾಧಿಕಾರಿಗಳು ಹಾಗೂ ವಿವಿಧ ಸಮುದಾಯದ ಸ್ವಾಮೀಜಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಸೋಮವಾರ ಭೇಟಿಯಾಗಿ ಬಸವಣ್ಣನವರ ಭಾವಚಿತ್ರವನ್ನು ನೀಡಿ ಗೌರವಿಸಿದರು.

ಕಾಂತರಾಜ ವರದಿಗೆ ವಿರೋಧವಿಲ್ಲ: ಪಾಟೀಲ


ಬೆಂಗಳೂರು: ‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಜನಗಣತಿ) ವರದಿಗೆ ನಮ್ಮ ವಿರೋಧವೇನೂ ಇಲ್ಲ. ಆದರೆ, ಅದನ್ನು ಸ್ವಲ್ಪ ಮಟ್ಟಿಗೆ ಸರಿಪಡಿಸುವಂತೆ ಮುಖ್ಯಮಂತ್ರಿ ಅವರಲ್ಲಿ ಕೇಳಿಕೊಂಡಿದ್ದೇವೆ’ ಎಂದು ವೀರಶೈವ ಲಿಂಗಾಯತ ಸಮುದಾಯದ ಪ್ರಮುಖರೂ ಆಗಿರುವ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಸ್ಪಷ್ಟಪಡಿಸಿದರು.

ಹಿಂದುಳಿದ ವರ್ಗಗಳ ಸ್ವಾಮೀಜಿಗಳ ತಂಡವೊಂದು ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಕಾಂತರಾಜ ವರದಿ ಸ್ವೀಕರಿಸಲು ಆಗ್ರಹಿಸಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಈಗಿನ ನಿಯಮಗಳ ಪ್ರಕಾರ, ಜಾತಿ ನಮೂದಿಸುವಾಗ ಲಿಂಗಾಯತ ಉಪ ಪಂಗಡಗಳ ಹೆಸರನ್ನು ನಮೂದಿಸಿದರೆ ಸಮುದಾಯದ ಉಪಪಂಗಡಗಳಿಗೆ ಸೇರಿದವರಿಗೆ ಮೀಸಲಾತಿ ಸಿಗುವುದಿಲ್ಲ. ಆದ್ದರಿಂದ, ಸಮುದಾಯಕ್ಕೆ ಸೇರಿದವರು ಜಾತಿ ನಮೂದಿಸುವಾಗ ಲಿಂಗಾಯತ ಉಪಪಂಗಡದ ಹೆಸರು ಹಾಕುತ್ತಿಲ್ಲ. ಅದನ್ನು ಸರಿಪಡಿಸಿದರೆ, ಜಾತಿ ನಮೂದಿಸುವಾಗ ಲಿಂಗಾಯತ ಉಪಪಂಗಡಗಳ ಹೆಸರು ನಮೂದಿಸಲು ಸಾಧ್ಯವಾಗುತ್ತದೆ. ಹೀಗಾದಾಗ, ಲಿಂಗಾಯತ ಸಮುದಾಯದ ಜನಸಂಖ್ಯೆ ಶೇ 22ರವರೆಗೆ ಹೆಚ್ಚಾಗುವ ಸಂಭವವಿದೆ’ ಎಂದು ವಿವರಿಸಿದರು.

ರಹೀಂಖಾನ್ ಹೇಳಿಕೆ ತಪ್ಪೇನಿದೆ: ‘ರಹೀಂ ಖಾನ್ ಅವರು ಮುಸ್ಲಿಂ ಸಮುದಾಯಕ್ಕೆ ಉಪ ಮುಖ್ಯಮಂತ್ರಿ ಹುದ್ದೆ ಕೇಳಿರುವುದರಲ್ಲಿ ತಪ್ಪೇನಿದೆ’ ಎಂದು ಪಾಟೀಲ ಹೇಳಿದರು.

‘ಜನ ಸಂಪರ್ಕ ಬಿಟ್ಟಿದ್ದು ನನ್ನದೇ ತಪ್ಪು’

ಯಲ್ಲಾಪುರ (ಉತ್ತರ ಕನ್ನಡ): ‘ಜನರ ಸಂಪರ್ಕದಿಂದ ದೂರ ಇದ್ದಿದ್ದು ನನ್ನದೇ ತಪ್ಪು. ಕಾರ್ಯಕರ್ತರ ಆಗ್ರಹದ ಮೇರೆಗೆ ಮತ್ತೆ ಸಾರ್ವಜನಿಕವಾಗಿ ಸಭೆ, ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೇನೆ’ ಎಂದು ಸಂಸದ ಅನಂತಕುಮಾರ ಹೆಗಡೆ ಹೇಳಿದರು.


ಅನಂತಕುಮಾರ ಹೆಗಡೆ

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ಕಾರ್ಯಕರ್ತರ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿ, ‘ಈ ಹಿಂದೆ ನನ್ನನ್ನು ಜನರು ಯಾವ ರೀತಿ ಆಶೀರ್ವದಿಸಿದ್ದರೋ ಈ ಬಾರಿಯೂ ಆಶೀರ್ವದಿಸುತ್ತಾರೆ ಎಂಬ ನಂಬಿಕೆ ಇದೆ’ ಎಂದರು.

‘ಲೋಕಸಭಾ ಚುನಾವಣೆ ಮಹಾಸಂಗ್ರಾಮದ ಸಿದ್ಧತೆ ಆರಂಭವಾಗಿದೆ. ಹಲವಾರು ಸುತ್ತಿನ ಸಭೆ, ಸಂಘಟನಾತ್ಮಕ ಕೆಲಸಗಳು ನಡೆದಿವೆ. ಈ ಬಾರಿಯ ಗೆಲುವು ಐತಿಹಾಸಿಕ ಆಗಬೇಕು. ಲೋಕಸಭಾ ಚುನಾವಣೆಯಲ್ಲಿ ದಕ್ಷಿಣ ಭಾರತದಲ್ಲಿ ಬಿಜೆಪಿ ಹಿಂದೆಂದಿಗಿಂತ ಹೆಚ್ಚಿನ ಸ್ಥಾನ ಗೆಲ್ಲಬೇಕು. ಇದಕ್ಕಾಗಿ ತಯಾರಿ ನಡೆಯಬೇಕು’ ಎಂದರು. ಶಿರಸಿಯಲ್ಲಿಯೂ ಸಂಸದರು ತಮ್ಮ ಮನೆಯಲ್ಲಿ ಅಭಿಮಾನಿಗಳು ಹಾಗೂ ಬಿಜೆಪಿ ಕಾರ್ಯಕರ್ತರ ಸಭೆಯನ್ನು ಈಗಾಗಲೇ ನಡೆಸಿದ್ದಾರೆ.

ಆನ್‌ಲೈನ್ ಸೇವೆ: ಭೌತಿಕ ದಾಖಲೆ ಕೇಳದಂತೆ ಸೂಚನೆ

ಬೆಂಗಳೂರು: ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿರುವ ಬಾಪೂಜಿ ಸೇವಾ ಕೇಂದ್ರ ಮತ್ತು ನಾಡ ಕಚೇರಿಗಳಲ್ಲಿರುವ ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ಆನ್‌ಲೈನ್ ಸೇವೆಗಳನ್ನು ಕೋರಿ ಅರ್ಜಿ ಸಲ್ಲಿಸುವವರಿಂದ ಭೌತಿಕ ರೂಪದ ದಾಖಲೆಗಳನ್ನು ಕೇಳಬಾರದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ ನೀಡಿದ್ದಾರೆ.

44 ಸೇವೆಗಳನ್ನು ಆನ್‌ಲೈನ್ ಮೂಲಕ ಒದಗಿಸಲು ಬಾಪೂಜಿ ಸೇವಾ ಕೇಂದ್ರ ಮತ್ತು ಅಟಲ್‌ಜಿ ಜನಸ್ನೇಹಿ ಕೇಂದ್ರಗಳ ಜತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಂಚತಂತ್ರ 2.0 ತಂತ್ರಾಂಶವನ್ನು ಜೋಡಿಸಲಾಗಿದೆ. ಸಾರ್ವಜನಿಕರು ಸಲ್ಲಿಸುವ ಅರ್ಜಿಗಳನ್ನು ತಂತ್ರಾಂಶದ ಮೂಲಕವೇ ವಿಲೇವಾರಿ ಮಾಡಬೇಕು. ನಿಗದಿತ ಅವಧಿಯೊಳಗೆ ಸೇವೆ ಒದಗಿಸಬೇಕು ಎಂಬ ಸೂಚನೆಯನ್ನು ಅಧಿಕಾರಿಗಳಿಗೆ ನೀಡಲಾಗಿದೆ ಎಂದು ಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಆನ್‌ಲೈನ್ ಮೂಲಕ ಸೇವೆಗಳನ್ನು ಕೋರಿ ಅರ್ಜಿ ಸಲ್ಲಿಸುವವರಿಗೆ ಭೌತಿಕವಾಗಿ ದಾಖಲೆ ಸಲ್ಲಿಸುವಂತೆ ಅಧಿಕಾರಿಗಳು ಸೂಚನೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದರಿಂದ ಸಾವಿರಾರು ಮಂದಿ ನಾಗರಿಕರು ನಾಡ ಕಚೇರಿ, ಗ್ರಾಮ ಪಂಚಾಯಿತಿ ಕಚೇರಿಗಳಿಗೆ ಹೋಗಬೇಕಾಗಿದೆ. ನಿಗದಿತ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಅರ್ಜಿ ಸಲ್ಲಿಸಿದವರಿಂದ ಮತ್ತೆ ಭೌತಿಕ ರೂಪದ ದಾಖಲೆ ಕೇಳುವಂತಿಲ್ಲ’ ಎಂದು ಹೇಳಿದ್ದಾರೆ.

ನಾಡ ಕಚೇರಿಗಳ ಅಟಲ್‌ಜಿ ಜನಸ್ನೇಹಿ ಕೇಂದ್ರಗಳ ಮೂಲಕ ನೀಡುತ್ತಿರುವ ಆದಾಯ ಪ್ರಮಾಣಪತ್ರ, ಜಾತಿ ಪ್ರಮಾಣಪತ್ರ, ವಾಸಸ್ಥಳ ಪ್ರಮಾಣಪತ್ರಗಳನ್ನು ಗ್ರಾಮ ಪಂಚಾಯಿತಿಗಳಲ್ಲಿರುವ ಬಾಪೂಜಿ ಸೇವಾ ಕೇಂದ್ರಗಳ ಮೂಲಕ ವಿತರಿಸಲು ನಿರ್ಧರಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

‘ರಾಮನ ನಿಜ ಭಕ್ತರು ನಾವೇ’

ಗೋಣಿಕೊಪ್ಪಲು (ಕೊಡಗು ಜಿಲ್ಲೆ): ‘ರಾಮ, ಬೀರಮ್ಮನ ನಿಜವಾದ ಭಕ್ತರು ನಾವೇ. ಹಿಂದುತ್ವ ಎಂದು ಹೇಳಿಕೊಂಡು ಹೋಗುವವರು ನಕಲಿ ಹಿಂದೂಗಳು, ಸ್ವಾರ್ಥಿಗಳು. ಮಾನವೀಯತೆಯಿಂದ ಎಲ್ಲ ಧರ್ಮದವರನ್ನೂ ಗೌರವಿಸುವವರೇ ನಿಜವಾದ ಹಿಂದೂಗಳು. ಇದನ್ನು ಬಿಜೆಪಿಯವರು ಕಲಿಯಬೇಕಾಗುತ್ತದೆ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಖಾತೆ ಸಚಿವ ಮಧು ಬಂಗಾರಪ್ಪ ಪ್ರತಿಪಾದಿಸಿದರು.

ಇಲ್ಲಿಗೆ ಸಮೀಪದ ಪೊನ್ನಂಪೇಟೆಯಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಹಿಂದೂಗಳಿಗೆ ರಾಮನಷ್ಟೇ ಇರುವುದಾ? ಕೃಷ್ಣ, ಚೌಡಮ್ಮ, ಬೀರಮ್ಮ ಇಲ್ಲವೇ? ಚುನಾವಣೆ ಬಂದಾಗ ಮಾತ್ರ ಬಿಜೆಪಿಯವರಿಗೆ ರಾಮ ನೆನಪಾಗುತ್ತಾನೆ. ಇಲ್ಲಿಂದಲೇ ನಾವು ರಾಮನಿಗೆ ನಮಸ್ಕರಿಸುತ್ತೇವೆ. ಬಿಜೆಪಿಯವರು ದುರಾಸೆಯಿಂದ ಅಲ್ಲಿಗೆ ಹೋದರೆ ಶಾಪ ಕೊಡುತ್ತಾನೆ. ನಾವು ಇಲ್ಲಿಂದ ಕೇಳಿದರೆ ಸಂಪೂರ್ಣ ಬೆಂಬಲಿಸುತ್ತಾನೆ’ ಎಂದರು.

‘ವರಿಷ್ಠರಿಗೆ ವಾಸ್ತವ ಮನವರಿಕೆ’

ಪ್ರಜಾವಾಣಿ ವಾರ್ತೆ

ವಿಜಯಪುರ: ‘ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಮತ್ತು ರಾಧಾಮೋಹನ್ ಅಗರವಾಲ್ ಅವರನ್ನು ಭೇಟಿಯಾಗಿ ಕರ್ನಾಟಕದಲ್ಲಿ ನಡೆದಿರುವ ಹೊಂದಾಣಿಕೆ ಮತ್ತು ಕೆಟ್ಟ ರಾಜಕೀಯ ವ್ಯವಸ್ಥೆಯ ವಾಸ್ತವ ಚಿತ್ರಣವನ್ನು ಮನವರಿಕೆ ಮಾಡಿ ಬಂದಿದ್ದೇನೆ. ದೆಹಲಿ ಭೇಟಿ ಅತ್ಯಂತ ಯಶಸ್ವಿಯಾಗಿದೆ, ಸಂತೃಪ್ತಿ ನೀಡಿದೆ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು.


ಬಸನಗೌಡ

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನಡೆದ ಕೋವಿಡ್ ಹಗರಣದ ಬಗ್ಗೆ ವರಿಷ್ಠರಿಗೆ ವಿವರವಾಗಿ ತಿಳಿಸಿದ್ದೇನೆ. ನಡ್ಡಾ ಮತ್ತು ಅಮಿತ್ ಶಾ ಅವರು ಅತ್ಯಂತ ಗೌರವಯುತವಾಗಿ ನನ್ನ ಮಾತುಗಳನ್ನು ಕೇಳಿಸಿಕೊಂಡಿದ್ದಾರೆ. ನಾನು ಬಹಿರಂಗವಾಗಿ ಆರೋಪ ಮಾಡಿರುವುದಕ್ಕೆ ಯಾವುದೇ ಎಚ್ಚರಿಕೆಯನ್ನಾಗಲಿ, ಕ್ರಮಕೈಗೊಳ್ಳುವುದಾಗಲಿ ಹೇಳಿಲ್ಲ. ಭ್ರಷ್ಟಾಚಾರದ ವಿರುದ್ಧ ನನ್ನ ಹೋರಾಟದಲ್ಲಿ ಯಾವುದೇ ರಾಜೀ ಇಲ್ಲ’ ಎಂದರು.

‘ದೆಹಲಿ ಭೇಟಿ ಸಂದರ್ಭದಲ್ಲಿ, ರಾಜ್ಯ ಬಿಜೆಪಿಯಲ್ಲಿ ಭವಿಷ್ಯದಲ್ಲಿ ನಡೆಯುವ ಬದಲಾವಣೆ ಬಗ್ಗೆಯೂ ವರಿಷ್ಠರು ತಿಳಿಸಿದ್ದಾರೆ. ಆದರೆ, ವಿಜಯೇಂದ್ರ, ಯತ್ನಾಳಗೆ ವರಿಷ್ಠರಿಂದ ಶಿಸ್ತು ಕ್ರಮದ ಎಚ್ಚರಿಕೆ, ಪಕ್ಷದಿಂದ ಉಚ್ಚಾಟಿಸುವುದಾಗಿ ಸೂಚನೆ ಎಂದೆಲ್ಲ ಜಾಲ ತಾಣದಲ್ಲಿ ಸುಳ್ಳು ಸುದ್ದಿ ಹರಿಬಿಡುತ್ತಿದ್ದಾರೆ’ ಎಂದು ಆರೋಪಿಸಿದ ಅವರು, ‘ಯಾವ ರಾಜಾಹುಲಿ, ಮರಿಹುಲಿಗೂ ಅಂಜಿ ಗುಹೆ ಸೇರುವ ಮಗಾ ನಾನಲ್ಲ’ ಎಂದು ಗುಡುಗಿದರು.

‘ಕರ್ನಾಟಕದ ಯಾವೊಬ್ಬ ಬಿಜೆಪಿ ನಾಯಕರೂ ಈ ಹಿಂದೆ ನನ್ನನ್ನು ಮರಳಿ ಪಕ್ಷಕ್ಕೆ ಸೇರಿಸಿ ಕೊಂಡಿರಲಿಲ್ಲ. ಯಡಿಯೂರಪ್ಪ, ಸದಾನಂದಗೌಡ ಸೇರಿದಂತೆ ಯಾರ ಉಪಕಾರವೂ ಇಲ್ಲ. ಅಂದಿನ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಅಮಿತ್ ಶಾ ಅವರೇ ನೇರವಾಗಿ ನನ್ನೊಂದಿಗೆ ಮಾತನಾಡಿ ಪಕ್ಷಕ್ಕೆ ಸೇರಿಸಿಕೊಂಡಿದ್ದರು’ ಎಂದು ಸ್ಪಷ್ಟಪಡಿಸಿದರು.

‘ಈ ದೇಶದ ಸುರಕ್ಷತೆಗಾಗಿ ಹಾಗೂ ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿಯನ್ನಾಗಿ ಮಾಡಲು ಲೋಕಸಭಾ ಚುನಾವಣೆಯನ್ನು ರಾಜ್ಯದಲ್ಲಿ ಒಗ್ಗಟ್ಟಾಗಿ ಎದುರಿಸಲಾಗುವುದು’ ಎಂದರು.

ರಾಜ್ಯದಲ್ಲಿ ಪಾಕಿಸ್ತಾನಿ ಸರ್ಕಾರ: ‘ಹಿಂದೂಗಳ ಮೇಲೆ ದೌರ್ಜನ್ಯ ನಡೆಸುತ್ತಿರುವ ರಾಜ್ಯ ಸರ್ಕಾರ ಪಾಕಿಸ್ತಾನ ಸರ್ಕಾರದಂತಾಗಿದೆ’ ಎಂದು ಯತ್ನಾಳ ಆರೋಪಿಸಿದರು.

ಸೋಮಣ್ಣ ದೆಹಲಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿಯ ಮಾಜಿ ಸಚಿವ ವಿ.ಸೋಮಣ್ಣ ಅವರು ನವದೆಹಲಿಗೆ ಸೋಮವಾರ ಬಂದಿದ್ದಾರೆ. ಅವರು ಪಕ್ಷದ ವರಿಷ್ಠರನ್ನು ಮಂಗಳವಾರ ಭೇಟಿ ಮಾಡುವ ಸಾಧ್ಯತೆ ಇದೆ.

ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಸೋತ ನಂತರ ಪಕ್ಷದ ಕೆಲವು ನಾಯಕರ ವಿರುದ್ಧ ಸೋಮಣ್ಣ ಮುನಿಸಿಕೊಂಡಿದ್ದರು. ಅವರು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯೂ ಆಗಿದ್ದರು. ಪಕ್ಷದ ವರಿಷ್ಠರನ್ನು ಭೇಟಿ ಮಾಡಿದ ಬಳಿಕ ಮುಂದಿನ ತೀರ್ಮಾನ ಕೈಗೊಳ್ಳುವುದಾಗಿ ಸೋಮಣ್ಣ ತಿಳಿಸಿದ್ದರು.

‘ನನ್ನ ಸೋಲಿಗೆ ಕಾರಣವಾದವರ ವಿರುದ್ಧ ಕ್ರಮ ಜರುಗಿಸುವುದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಕರ್ತವ್ಯ. ಆ ಕೆಲಸ ಮಾಡದಿದ್ದರೆ ಸಿಡಿದೇಳುವೆ’ ಎಂದೂ ಅವರು ಎಚ್ಚರಿಸಿದ್ದರು. ಇದೀಗ ಸೋಮಣ್ಣ ಅಸಮಾಧಾನ ಶಮನ ಮಾಡಲು ರಾಷ್ಟ್ರೀಯ ನಾಯಕರು ಮುಂದಾಗಿದ್ದಾರೆ. ನವದೆಹಲಿಗೆ ಬರುವಂತೆ ರಾಷ್ಟ್ರೀಯ ನಾಯಕರು ಭಾನುವಾರ ಕರೆ ಮಾಡಿದ್ದರು ಎಂದು ಮೂಲಗಳು ಹೇಳಿವೆ.


ವಿ.ಸೋಮಣ್ಣ

ಸೋಮಣ್ಣ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಮಂಗಳವಾರ ಭೇಟಿ ಮಾಡಿ ಸಮಾಲೋಚಿಸುವ ಸಾಧ್ಯತೆ ಇದೆ.

ಅವಕಾಶ ನೀಡಬಾರದೆಂಬ ಮನವಿ ತಳ್ಳಿಹಾಕಿದ ಹೈಕೋರ್ಟ್

ಸುಗುಣೇಂದ್ರ ತೀರ್ಥರ ಪರ್ಯಾಯಕ್ಕೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉಡುಪಿ ಅಷ್ಟ ಮಠದ ಪರ್ಯಾಯ ಮಹೋತ್ಸವದಲ್ಲಿ ಪಾಲ್ಗೊಳ್ಳದಂತೆ ಪುತ್ತಿಗೆ ಮಠದ ಪೀಠಾಧಿಪತಿ ಸುಗುಣೇಂದ್ರ ತೀರ್ಥ ಅವರನ್ನು ತಡೆಯಬೇಕು’ ಎಂಬ ಮನವಿಯನ್ನು ಹೈಕೋರ್ಟ್ ಸಾರಾಸಗಟಾಗಿ ತಳ್ಳಿ ಹಾಕಿದೆ.

‘ಉಡುಪಿ ಅಷ್ಟ ಮಠದ ಪರ್ಯಾಯ ಮಹೋತ್ಸವ ಆಯೋಜನೆಗೆ ಮಾರ್ಗಸೂಚಿ ಅಥವಾ ಬೈ–ಲಾ ರೂಪಿಸಲು ಸಮಿತಿ ರಚಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ಸೋದೆ ಮತ್ತು ಕೃಷ್ಣಾಪುರ ಮಠದ ಭಕ್ತರೂ ಆದ ದಕ್ಷಿಣ ಕನ್ನಡ ಜಿಲ್ಲೆ ಸುರತ್ಕಲ್‌ನ ಕುಳಾಯಿ ಹೊಸಬೆಟ್ಟು ಗ್ರಾಮದ ಗುರುರಾಜ ಜೀವನ ರಾವ್ ಸಲ್ಲಿಸಿದ್ದ ಅರ್ಜಿಯಲ್ಲಿ ಮಧ್ಯ ಪ್ರವೇಶಿಸಲು ನಿರಾಕರಿಸಿದೆ.

ಈ ಕುರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸೋಮವಾರ ವಿಚಾರಣೆ ನಡೆಸಿ, ವಜಾಗೊಳಿಸಿದ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ, ‘ಜ್ಞಾನ ಸಂಪಾದನೆ ಹಾಗೂ ಪ್ರಸಾರಕ್ಕೆ ವಿದೇಶ ಪ್ರಯಾಣ ಬೆಳೆಸಿದರೆ ಅಥವಾ ಸಮುದ್ರೋಲ್ಲಂಘನ ಮಾಡಿದರೆ ತಪ್ಪೇನು’ ಎಂದು ಪ್ರಶ್ನಿಸಿದೆ.

> **ನಮ್ಮ ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಅವರು ಜ್ಞಾನ ಸಂಪಾದನೆಗಾಗಿ ವಿದೇಶಕ್ಕೆ ಹೋಗಿರಲಿಲ್ಲವೇ? ನಾವೀಗ 21ನೇ ಶತಮಾನದಲ್ಲಿದ್ದೇವೆ.**
>
> **ಪಿ.ಬಿ.ವರಾಳೆ** ಮುಖ್ಯ ನ್ಯಾಯಮೂರ್ತಿ

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಇದೇ 8ರಿಂದ 18ರವರೆಗೆ ನಡೆಯಲಿರುವ ಅಷ್ಟ ಮಠದ ಪರ್ಯಾಯದಲ್ಲಿ ಪುತ್ತಿಗೆ ಮಠದ ಪೀಠಾಧಿಪತಿ ಸುಗಣೇಂದ್ರರು ಪಾಲ್ಗೊಳ್ಳುವುದಕ್ಕೆ ನಿರ್ಬಂಧ ವಿಧಿಸಬೇಕು. ಪರ್ಯಾಯಕ್ಕೆ ಮಾರ್ಗಸೂಚಿ, ಬೈ–ಲಾ ರೂಪಿಸಲು ಸಮಿತಿ ರಚಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿದರು.

ಈ ಮನವಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ನ್ಯಾಯಪೀಠ, ‘ಸ್ವಾಮಿ ವಿವೇಕಾನಂದರು ವಿದೇಶದಲ್ಲಿ ಜ್ಞಾನದ ಪ್ರಸಾರ ಮಾಡಿಲ್ಲವೇ? ಸಾಮ್ರಾಟ್ ಅಶೋಕ ತನ್ನ ಮಕ್ಕಳಾದ ಮಹೇಂದ್ರ ಮತ್ತು ಸಂಘಮಿತ್ರೆಯನ್ನು ಬೌದ್ಧ ಧರ್ಮದ ಪ್ರಚಾರಕ್ಕಾಗಿ ವಿದೇಶಕ್ಕೆ ಕಳುಹಿಸಲಿಲ್ಲವೇ? ಇಷ್ಟೆಲ್ಲಾ ಇತಿಹಾಸ ಇರುವಾಗ ನೀವ್ಯಾಕೆ ಇನ್ನೂ 18ನೇ ಶತಮಾನದ ಮಾತುಗಳನ್ನಾಡುತ್ತಿದ್ದೀರಿ. ಈ ವಿಚಾರದಲ್ಲಿ ನಿರ್ಬಂಧ ವಿಧಿಸುವುದಕ್ಕಾದರೂ ಅವಕಾಶ ಎಲ್ಲಿದೆ’ ಎಂದು ಪ್ರಶ್ನಿಸಿತು.

ಪುತ್ತಿಗೆ ಶ್ರೀಗಳ ಅದ್ದೂರಿ ಪುರಪ್ರವೇಶ


ಪ್ರಜಾವಾಣಿ ವಾರ್ತೆ

ಉಡುಪಿ: ಪುತ್ತಿಗೆ ಮಠದ ಯತಿಗಳಾದ ಸುಗುಣೇಂದ್ರ ತೀರ್ಥ ಸ್ವಾಮೀಜಿ ಹಾಗೂ ಕಿರಿಯ ಯತಿ ಸುಶ್ರೀಂದ್ರ ತೀರ್ಥ ಸ್ವಾಮೀಜಿ ಅವರ ಪುರಪ್ರವೇಶ ಸೋಮವಾರ ಅದ್ದೂರಿಯಾಗಿ ನೆರವೇರಿತು.

ಸಂಪ್ರದಾಯದಂತೆ ತೀರ್ಥ ಕ್ಷೇತ್ರಗಳ ದರ್ಶನ ಮುಗಿಸಿ ಉಡುಪಿಯ ಜೋಡುಕಟ್ಟೆಗೆ ಆಗಮಿಸಿದ ಉಭಯ ಯತಿಗಳಿಗೆ ಭಕ್ತರು ಜಯಘೋಷಗಳೊಂದಿಗೆ ಸ್ವಾಗತ ಕೋರಿದರು. ಬಳಿಕ ಜೋಡುಕಟ್ಟೆಯ ಮಂದಿರದಲ್ಲಿ ಪಟ್ಟದ ದೇವರಿಗೆ ಪೂಜೆ ಸಲ್ಲಿಸಿದ ಯತಿಗಳು ಪುರಪ್ರವೇಶ ಮೆರವಣಿಗೆಯ ವೈಭವವನ್ನು ವೀಕ್ಷಿಸಿದರು.

ಈ ಸಂದರ್ಭ ಜಿಲ್ಲಾಧಿಕಾರಿ ವಿದ್ಯಾಕುಮಾರಿ, ಎಸ್‌ಪಿ ಡಾ.ಕೆ. ಅರುಣ್, ಪೌರಾಯುಕ್ತ ರಾಯಪ್ಪ, ಜನಪ್ರತಿನಿಧಿಗಳು ಹಾಗೂ ಗಣ್ಯರು ಸ್ವಾಮೀಜಿಗೆ ಹೂಮಾಲೆ ಹಾಕಿ ಸ್ವಾಗತ ಕೋರಿದರು.

ಬಳಿಕ ಹಂಸ ಅಲಂಕೃತ ವಾಹನದಲ್ಲಿ ಕುಳಿತ ಉಭಯ ಯತಿಗಳನ್ನು ಮೆರವಣಿಗೆ ಮೂಲಕ ಕೃಷ್ಣಮಠದ ರಥಬೀದಿಗೆ ಕರೆತರಲಾಯಿತು.


ಪುತ್ತಿಗೆ ಮಠದ ಯತಿಗಳಾದ ಸುಗುಣೇಂದ್ರ ತೀರ್ಥ ಸ್ವಾಮೀಜಿ ಹಾಗೂ ಸುಶ್ರೀಂದ್ರ ತೀರ್ಥ ಸ್ವಾಮೀಜಿ ಅವರ ಪುರಪ್ರವೇಶ ಸೋಮವಾರ ನೆರವೇರಿತು

ಮಂಗಳವಾರ, ಜನವರಿ 9, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 9 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಸಂಧಿಕಾಲದ ವ್ಯಾಧಿ ಬಾರದಿರಲು ಏನು ಮಾಡಬಹುದು?



ಆಳ-ಅಗಲ
ಗುಜರಾತ್ ಸರ್ಕಾರಕ್ಕೆ ಅಧಿಕಾರ ಇರಲಿಲ್ಲವೇಕೆ...

ಪ್ರಧಾನಿ-ಯುಎಇ ಅಧ್ಯಕ್ಷರ ರೋಡ್ ಶೋ ಇಂದು 9

ಹಳ್ಳಿಗೂ ಜನೌಷಧ ಕೇಂದ್ರ ವಿಸ್ತರಣೆ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,355 ▼	21,513 ▼	₹64,450 (ಬೆಂಗಳೂರು) ▼	₹73,700 (ಬೆಂಗಳೂರು) ▼	83.14 ▲

ಬಿಲ್ಕಿಸ್ ಪ್ರಕರಣ: ಗುಜರಾತ್ ಸರ್ಕಾರ ನೀಡಿದ್ದ ಕ್ಷಮಾದಾನ ರದ್ದು ಮಾಡಿದ ಸುಪ್ರೀಂ ಕೋರ್ಟ್

ಅಪರಾಧಿಗಳು ಮತ್ತೆ ಜೈಲಿಗೆ

ನವದೆಹಲಿ (ಪಿಟಿಐ): ಬಿಲ್ಕಿಸ್ ಬಾನು ಅವರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಅವರ ಕುಟುಂಬದ ಏಳು ಮಂದಿಯನ್ನು ಹತ್ಯೆಗೈದ ಪ್ರಕರಣದ 11 ಮಂದಿ ಅಪರಾಧಿಗಳಿಗೆ ಕ್ಷಮಾದಾನ ನೀಡಿದ್ದ ಗುಜರಾತ್ ಸರ್ಕಾರದ ಕ್ರಮವನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದೆ.

ಕ್ಷಮಾದಾನ ನೀಡುವ ಪ್ರಕ್ರಿಯೆಯಲ್ಲಿ ಗುಜರಾತ್ ಸರ್ಕಾರವು ತನ್ನ ವಿವೇಚನಾ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ಕಟು ಮಾತುಗಳಲ್ಲಿ ಹೇಳಿದೆ. ಕ್ಷಮಾದಾನ ನೀಡುವ ವಿಷಯದಲ್ಲಿ ಗುಜರಾತ್ ಸರ್ಕಾರವು ಅಪರಾಧಿಯೊಬ್ಬನ ಜೊತೆ 'ಶಾಮೀಲಾಗಿತ್ತು' ಎಂದು ಹೇಳಿರುವ ಕೋರ್ಟ್, ಅಪರಾಧಿಗಳನ್ನು ಎರಡು ವಾರಗಳಲ್ಲಿ ಜೈಲಿಗೆ ಕಳುಹಿಸಬೇಕು ಎಂದು ಸೋಮವಾರ ಸೂಚಿಸಿದೆ.

ಕ್ಷಮಾದಾನ ನೀಡುವ ವಿಚಾರದಲ್ಲಿ ಗುಜರಾತ್ ಸರ್ಕಾರವು ಮಹಾರಾಷ್ಟ್ರ ಸರ್ಕಾರದ ಅಧಿಕಾರವನ್ನು ಕಿತ್ತುಕೊಳ್ಳುವ ಕೆಲಸ ಮಾಡಿದೆ ಎಂದು ತೀಕ್ಷ್ಣವಾಗಿ ಹೇಳಿದೆ. ಬಿಲ್ಕಿಸ್ ಪ್ರಕರಣದ ಅಪರಾಧಿಗಳಿಗೆ ಕ್ಷಮಾದಾನ ನೀಡಿದ ಕ್ರಮ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರವಾಗಿ ಕೋರ್ಟ್ ನೀಡಿರುವ ಈ ತೀರ್ಪು ಗುಜರಾತ್ ಸರ್ಕಾರಕ್ಕೆ ಆಗಿರುವ ಭಾರಿ ಹಿನ್ನಡೆ ಎಂದು ವಿಶ್ಲೇಷಿಸಲಾಗಿದೆ.

ಮಹಿಳೆಯ ನಂಬಿಕೆಗಳು ಏನೇ ಇದ್ದಿರಲಿ, ಆಕೆಯ ಮತ ಯಾವುದೇ ಆಗಿರಲಿ, 'ಮಹಿಳೆಯರನ್ನು ಗುರಿಯಾಗಿಸಿ ಹೇಯ ಅಪರಾಧ ಎಸಗಿದವರು ಕ್ಷಮಾದಾನಕ್ಕೆ ಅರ್ಹರೇ' ಎಂಬ ಪ್ರಶ್ನೆಯನ್ನು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಉಜ್ಜಲ್ ಭುಯಿಯಾಂ ಅವರು ಇದ್ದ ವಿಭಾಗೀಯ ಪೀಠ ಕೇಳಿದೆ. ಗುಜರಾತ್ ಸರ್ಕಾರವು ಸೂಕ್ತ ರೀತಿಯಲ್ಲಿ ಆಲೋಚನೆಯನ್ನೇ ಮಾಡದೆ ಅವರಿಗೆ ಕ್ಷಮಾದಾನ ನೀಡಿತ್ತು ಎಂದು ಹೇಳಿದೆ.

ಅತ್ಯಾಚಾರಕ್ಕೆ ಗುರಿಯಾದಾಗ ಬಿಲ್ಕಿಸ್ ಅವರಿಗೆ 21 ವರ್ಷ ವಯಸ್ಸು. ಹತ್ಯೆಯಾದ ಏಳು ಮಂದಿ ಪೈಕಿ ಬಿಲ್ಕಿಸ್ ಅವರ ಮೂರು ವರ್ಷ ವಯಸ್ಸಿನ ಮಗಳೂ ಒಬ್ಬಳು. 11 ಮಂದಿ ಅಪರಾಧಿ ಗಳನ್ನು ಗುಜರಾತ್ ಸರ್ಕಾರವು 2022ರ ಆಗಸ್ಟ್ 15ರಂದು ಬಿಡುಗಡೆ ಮಾಡಿತ್ತು.

9ನೇ ಪುಟ ನೋಡಿ

ಪ್ರಮುಖ ಘಟನಾವಳಿಗಳು...

- 2002 ಮಾರ್ಚ್ 3: ಗುಜರಾತ್ ಅಹಮದಾಬಾದ್‌ನ ರಂಧಿಕ್‌ಪುರ ಗ್ರಾಮದಲ್ಲಿ 21 ವರ್ಷ ವಯಸ್ಸಿನ ಬಿಲ್ಕಿಸ್ ಬಾನು ಮೇಲೆ ಸಾಮೂಹಿಕ ಅತ್ಯಾಚಾರ, ಅವರ ಕುಟುಂಬದ ಏಳು ಮಂದಿಯ ಹತ್ಯೆ
- 2003 ಡಿಸೆಂಬರ್: ಬಿಲ್ಕಿಸ್ ಬಾನು ಪ್ರಕರಣದ ತನಿಖೆ ನಡೆಸಲು ಸಿಬಿಐಗೆ ಸುಪ್ರೀಂ ಕೋರ್ಟ್ ನಿರ್ದೇಶನ
- 2008 ಜನವರಿ 21: ಅತ್ಯಾಚಾರ ಮತ್ತು ಹತ್ಯೆ ಪ್ರಕರಣದಲ್ಲಿ 11 ಮಂದಿಯ ಅಪರಾಧ ಸಾಬೀತುಪಡಿಸಿ, ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿದ ವಿಶೇಷ ನ್ಯಾಯಾಲಯ
- 2017 ಮೇ: ಅಪರಾಧಿಗಳ ಜೀವಾವಧಿ ಶಿಕ್ಷೆ ಎತ್ತಿಹಿಡಿದ ಬಾಂಬೆ ಹೈಕೋರ್ಟ್
- 2022 ಮೇ 13: ಅವಧಿಗೂ ಮುನ್ನ ಬಿಡುಗಡೆಗೊಳಿಸಬೇಕು ಎಂದು ಕೋರಿ ಅಪರಾಧಿಗಳಲ್ಲಿ ಒಬ್ಬರು ಸಲ್ಲಿಸಿದ್ದ ಅರ್ಜಿಯನ್ನು 1992ರ ಗುಜರಾತ್ ಕ್ಷಮಾಪಣೆ ನೀತಿ ಅಡಿಯಲ್ಲಿ ಪರಿಗಣಿಸಲು ಗುಜರಾತ್ ಸರ್ಕಾರಕ್ಕೆ ಸುಪ್ರೀಂ ಕೋರ್ಟ್‌ನಿಂದ ನಿರ್ದೇಶನ
- 2022 ಆಗಸ್ಟ್ 15: ಗುಜರಾತ್ ಸರ್ಕಾರದ ಕ್ಷಮಾಪಣೆ ನೀತಿ ಅಡಿ 11 ಮಂದಿ ದೋಷಿಗಳನ್ನು ಬಿಡುಗಡೆಗೊಳಿಸಿದ ಗೋಧ್ರಾ ಉಪ ಕಾರಾಗೃಹ
- 2022 ನವೆಂಬರ್ 30: ಗುಜರಾತ್ ಸರ್ಕಾರದ ನಿರ್ಧಾರವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ ಬಿಲ್ಕಿಸ್ ಬಾನು
- 2023 ಆಗಸ್ಟ್ 7: ಅವಧಿಪೂರ್ವ ಬಿಡುಗಡೆ ಮಾಡಿದ ಗುಜರಾತ್ ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಕೆಯಾದ ಅರ್ಜಿಗಳ ಅಂತಿಮ ವಿಚಾರಣೆ ಆರಂಭಿಸಿದ್ದ ಸುಪ್ರೀಂ ಕೋರ್ಟ್





ಪರ್ವತದಷ್ಟು ದೊಡ್ಡದಾದ ಕಲ್ಲೊಂದನ್ನು ನನ್ನ ಎದೆಯ ಮೇಲಿನಿಂದ ಎತ್ತಿ ಪಕ್ಕಕ್ಕೆ ಇರಿಸಿದಂತೆ, ನಾನು ಮತ್ತೆ ಉಸಿರಾಡಬಹುದು ಎಂಬಂತೆ ಅನಿಸುತ್ತಿದೆ. ನ್ಯಾಯವು ಈ ಬಗೆಯಲ್ಲಿ ನನ್ನ ಅನುಭವಕ್ಕೆ ಬರುತ್ತಿದೆ...
ಬಿಲ್ಕಿಸ್ ಬಾನು, ಸಂತ್ರಸ್ತೆ

ಅರ್ಜಿ ಯಾರಿಂದ?

ಬಿಲ್ಕಿಸ್ ಬಾನು ಪ್ರಕರಣದ ಅಪರಾಧಿಗಳಿಗೆ ಕ್ಷಮಾದಾನ ನೀಡಿದ ಕ್ರಮವನ್ನು ಪ್ರಶ್ನಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಕೂಡ ಸಲ್ಲಿಸಲಾಗಿತ್ತು. ಸಿಪಿಎಂ ನಾಯಕಿ ಸುಭಾಷಿಣಿ ಅಲಿ, ಪತ್ರಕರ್ತೆ ರೇವತಿ ಲೌಲ್, ಲಖನೌ ವಿ.ವಿ ಮಾಜಿ ಕುಲಪತಿ ರೂಪ್ ರೇಖಾ ವರ್ಮ, ಟಿಎಂಸಿ ನಾಯಕಿ ಮಹುವಾ ಮೊಯಿತ್ರಾ ಅವರು ಕೂಡ ಅರ್ಜಿದಾರರಾಗಿದ್ದರು.

ಕ್ಷಮಾದಾನ ಪಡೆದಿದ್ದವರು

ಬಾಕಾಭಾಯ್ ವೊಹಾನಿಯಾ, ಬಿಪಿನ್ ಚಂದ್ರ ಜೋಷಿ, ಕೇಸರ್‌ಭಾಯ್ ವೊಹಾನಿಯಾ, ಗೋವಿಂದ ನಾಯ್, ಜಸ್ವಂತ ನಾಯ್, ಮಿತೇಶ್ ಭಟ್, ಪ್ರದೀಪ್ ಮೊರ್ಧಿಯಾ, ರಾಧೇಶ್ಯಾಮ್ ಶಾ, ರಾಜುಭಾಯ್ ಸೋನಿ, ರಮೇಶ್ ಚಂದನ, ಶೈಲೇಶ್ ಭಟ್



ಸಮಾಜವು ಮಹಿಳೆಯೊಬ್ಬಳನ್ನು ಎಷ್ಟೇ ಮೇಲ್ಮಟ್ಟದಲ್ಲಿ ಇರಿಸಲಿ ಅಥವಾ ಎಷ್ಟೇ ಕೆಳಮಟ್ಟದಲ್ಲಿ ಇರಿಸಲಿ, ಆಕೆ ಯಾವುದೇ ನಂಬಿಕೆಯನ್ನು ಹೊಂದಿರಲಿ, ಆಕೆ ಯಾವುದೇ ಮತಕ್ಕೆ ಸೇರಿದವಳಾಗಿರಲಿ, ಆಕೆ ಗೌರವಕ್ಕೆ ಅರ್ಹಳು.
ಬಿ.ವಿ. ನಾಗರತ್ನ, ನ್ಯಾಯಮೂರ್ತಿ



ವಿಕಸಿತ ಭಾರತ ಸಂಕಲ್ಪ ಯಾತ್ರೆಯ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಮಾಡಿದ ಭಾಷಣದ ಲೈವ್ ಅನ್ನು ಯಲಹಂಕ ಸಮೀಪದ ದಿಬ್ಬೂರು ಗ್ರಾಮದಲ್ಲಿ ವೀಕ್ಷಿಸಿದ ಬಿಜೆಪಿಯ ಅರುಣ್ ಸಿಂಗ್, ಬಿ.ಎಸ್. ಯಡಿಯೂರಪ್ಪ, ಬಿ.ವೈ. ವಿಜಯೇಂದ್ರ, ಪ್ರಲ್ಹಾದ ಜೋಶಿ (ಮೊದಲ ಸಾಲು)

28 ಲೋಕಸಭಾ ಕ್ಷೇತ್ರಗಳಲ್ಲೂ ಗೆಲುವಿನ ಗುರಿ

ನೂರು ದಿನ ಬಿಜೆಪಿ ಪ್ರಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಎಲ್ಲ 28 ಲೋಕಸಭಾ ಕ್ಷೇತ್ರಗಳಲ್ಲೂ ಗೆಲುವಿನ ಗುರಿಯೊಂದಿಗೆ ಐದು ಹಂತಗಳ 100 ದಿನಗಳ ಪ್ರಚಾರ ಆರಂಭಿಸಲು ಸೋಮವಾರ ನಡೆದ ಬಿಜೆಪಿ ಚಿಂತನ–ಮಂಥನ ಸಭೆಯಲ್ಲಿ ನಿರ್ಧರಿಸಲಾಗಿದೆ. ನಗರದ ಹೊರ ವಲಯದ ರಮಾಡ ರೆಸಾರ್ಟ್‌ನಲ್ಲಿ ನಡೆದ ಸಭೆಯಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯ ಉಸ್ತುವಾರಿಯಾಗಿರುವ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ 40ಕ್ಕೂ ಹೆಚ್ಚು ಮುಖಂಡರು ಪಾಲ್ಗೊಂಡಿದ್ದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ, ಸಂಸದ ಡಿ.ವಿ. ಸದಾನಂದಗೌಡ, ಶಾಸಕ ಬಸವರಾಜ ಬೊಮ್ಮಾಯಿ ಹಾಗೂ ಪಕ್ಷದ ಹಲವು ಹಿರಿಯ ಮುಖಂಡರು ಸಭೆಯಲ್ಲಿದ್ದರು. ಬಿಜೆಪಿ ರಾಜ್ಯ ಘಟಕದ ನೂತನ ಪ್ರಧಾನ ಕಾರ್ಯದರ್ಶಿಗಳೂ ಭಾಗವಹಿಸಿದ್ದರು.

ಬಿಜೆಪಿ–ಜೆಡಿಎಸ್ ಮೈತ್ರಿಕೂಟವು ಎಲ್ಲ ಲೋಕಸಭಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವುದಕ್ಕೆ ಅನುಕೂಲವಾಗುವಂತೆ ತ್ವರಿತವಾಗಿ ಚುನಾವಣಾ ಪ್ರಚಾರ ಆರಂಭಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. ಎಲ್ಲ ಪ್ರಮುಖ ನಾಯಕರನ್ನು ಒಳಗೊಂಡ ಹಲವು ತಂಡಗಳ ಪ್ರವಾಸಕ್ಕೂ ನಿರ್ಧರಿಸಲಾಗಿದೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಮಾಜಿ ಸಚಿವ ಸಿ.ಟಿ. ರವಿ, '100 ದಿನಗಳ ಚುನಾವಣಾ ಪ್ರಚಾರ ಯೋಜನೆಯೊಂದನ್ನು ಸಭೆಯಲ್ಲಿ ಅಂತಿಮಗೊಳಿಸಲಾಗಿದೆ. ಪಕ್ಷದ ಒಳಗೆ ಮತ್ತು ಸಾರ್ವಜನಿಕವಾಗಿ ನಿರಂತರ ಚಟುವಟಿಕೆಗಳನ್ನು ನಡೆಸುವುದು ಈ ಯೋಜನೆಯ ಗುರಿ' ಎಂದರು.

ಐದು ಹಂತದಲ್ಲಿ ಸಿದ್ಧತೆ: ಮತಗಟ್ಟೆ, ಮಂಡಲ, ಲೋಕಸಭಾ ಕ್ಷೇತ್ರ, ಮೂರರಿಂದ ನಾಲ್ಕು ಲೋಕಸಭಾ ಕ್ಷೇತ್ರಗಳನ್ನು ಒಳಗೊಂಡ ವಿಭಾಗ ಮತ್ತು ರಾಜ್ಯ ಮಟ್ಟದಲ್ಲಿ ಚುನಾವಣಾ ಸಿದ್ಧತೆ ಆರಂಭಿಸುವ ಯೋಜನೆಯನ್ನು ಬಿಜೆಪಿ ಅಂತಿಮಗೊಳಿಸಿದೆ.

5ನೇ ಪುಟ ನೋಡಿ

ಅಭ್ಯರ್ಥಿ ಆಯ್ಕೆ: ಜ.10–13ಕ್ಕೆ ಸಭೆ

ಲೋಕಸಭಾ ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆಮಾಡಲು ಸಂಭವನೀಯರ ಪಟ್ಟಿಯನ್ನು ಅಂತಿಮಗೊಳಿಸುವುದಕ್ಕಾಗಿ ಇದೇ 10 ಮತ್ತು 13ರಂದು ಕ್ಷೇತ್ರವಾರು ಮುಖಂಡರ ಸಭೆ ನಡೆಸಲು ಬಿಜೆಪಿ ನಿರ್ಧರಿಸಿದೆ.

'ಪಕ್ಷದ ವರಿಷ್ಠರ ನಿರ್ಣಯಕ್ಕೆ ಬದ್ಧರಾಗಿರಬೇಕು ಎಂಬ ಷರತ್ತಿನೊಂದಿಗೆ ಎಲ್ಲ ಲೋಕಸಭಾ ಕ್ಷೇತ್ರಗಳ ಟಿಕೆಟ್ ಆಕಾಂಕ್ಷಿಗಳು, ಮಾಜಿ ಸಚಿವರು, ಶಾಸಕರು, ಮಾಜಿ ಶಾಸಕರು ಮತ್ತು ಪ್ರಮುಖ ಮುಖಂಡರ ಅಭಿಪ್ರಾಯ ಸಂಗ್ರಹಿಸಲಾಗುತ್ತದೆ. ಬಳಿಕ ಕ್ಷೇತ್ರವಾರು ವರದಿಗಳನ್ನು ಪಕ್ಷದ ವರಿಷ್ಠರಿಗೆ ರವಾನಿಸಲಾಗುವುದು' ಎಂದು ಪಕ್ಷದ ಮುಖಂಡರೊಬ್ಬರು ತಿಳಿಸಿದರು.

ಮಾಲ್ದೀವ್ಸ್: ಕಳವಳ ತಿಳಿಸಿದ ಭಾರತ

ದ್ವೀಪ ರಾಷ್ಟ್ರದ ರಾಯಭಾರಿ ಜೊತೆ ಮಾತುಕತೆ ನಡೆಸಿದ ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ಭಾರತದಲ್ಲಿನ ಮಾಲ್ದೀವ್ಸ್ ರಾಯಭಾರಿಯನ್ನು ಕರೆಸಿಕೊಂಡ ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವಾಲಯವು, ಮಾಲ್ದೀವ್ಸ್‌ನ ಕೆಲವು ಉಪ ಸಚಿವರು ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಜಾಲತಾಣಗಳಲ್ಲಿ ಆಡಿರುವ ಮಾತುಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದೆ ಎಂದು ಮೂಲಗಳು ತಿಳಿಸಿವೆ. ಉಪ ಸಚಿವರನ್ನು ಮಾಲ್ದೀವ್ಸ್ ಸರ್ಕಾರವು ಭಾನುವಾರ ಅಮಾನತು ಮಾಡಿದೆ.

ಉಪ ಸಚಿವರಾಗಿದ್ದ ಮರಿಯಂ ಶಿವ್ನ, ಮಾಲ್ಶಾ ಶರೀಫ್ ಮತ್ತು ಅಬ್ದುಲ್ಲಾ ಎಂ. ಮಜಿದ್ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಎಕ್ಸ್ ವೇದಿಕೆಯಲ್ಲಿ ಅಸಭ್ಯವಾದ ಮಾತುಗಳನ್ನು ಆಡಿದ್ದರು. ಮೋದಿ ಅವರು ತಾವು ಲಕ್ಷದ್ವೀಪಕ್ಕೆ ಭೇಟಿ ನೀಡಿದ್ದ ಕೆಲವು ಚಿತ್ರಗಳನ್ನು ಎಕ್ಸ್ ಮೂಲಕ ಹಂಚಿಕೊಂಡಿದ್ದರು. ಇದು ಲಕ್ಷದ್ವೀಪವನ್ನು ಮಾಲ್ದೀವ್ಸ್‌ಗೆ ಪರ್ಯಾಯ ಎಂಬಂತೆ ಬಿಂಬಿಸುವ ಯತ್ನವೆಂದು ಈ ಮೂವರು ಭಾವಿಸಿದ್ದರು.

ಮಾಲ್ದೀವ್ಸ್‌ನಲ್ಲಿನ ಭಾರತೀಯ ರಾಯಭಾರ ಕಚೇರಿಯು, ಉಪ ಸಚಿವರ ಮಾತುಗಳ ಬಗ್ಗೆ ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿತ್ತು ಎಂದು ಮೂಲಗಳು ಭಾನುವಾರ ತಿಳಿಸಿದ್ದವು. ಈ ನಡುವೆ, ಮಾಲ್ದೀವ್ಸ್‌ನಲ್ಲಿ ಭಾರತದ ಹೈಕಮಿಷನರ್ ಆಗಿರುವ ಮುನು ಮುಹವ್ವರ್ ಅವರು ಮಾಲ್ದೀವ್ಸ್‌ನ ಹಿರಿಯ ರಾಜತಾಂತ್ರಿಕ ಅಧಿಕಾರಿಯೊಬ್ಬರ ಜೊತೆ ಪೂರ್ವ ನಿಗದಿತ ಸಭೆ ನಡೆಸಿದ್ದಾರೆ. ಎರಡು ದೇಶಗಳ ನಡುವಿನ ದ್ವಿಪಕ್ಷೀಯ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚೆಯಾಗಿದೆ ಎಂದು ಭಾರತದ ರಾಯಭಾರ ಕಚೇರಿಯು ಎಕ್ಸ್ ಮೂಲಕ ತಿಳಿಸಿದೆ.

ಅಮಾನತಿನಲ್ಲಿ ಇರುವ ಉಪ ಸಚಿವರು ಆಡಿರುವ ಮಾತುಗಳು ಸರ್ಕಾರದ ನಿಲುವು ಅಲ್ಲ ಎಂಬುದನ್ನು ಮುನು ಮುಹವ್ವರ್ ಅವರಿಗೆ ಮಾಲ್ದೀವ್ಸ್ ಸರ್ಕಾರವು ಸೋಮವಾರ ಸ್ಪಷ್ಟಪಡಿಸಿದೆ ಎಂದು ಮಾಲ್ದೀವ್ಸ್‌ನ ಮಾಧ್ಯಮವೊಂದು ವರದಿ ಮಾಡಿದೆ.

ಮೂವರು ಉಪ ಸಚಿವರು ಆಡಿದ ಮಾತುಗಳಿಗೆ ಭಾರತದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ. ಭಾರತದ ಹಲವು ಸೆಲೆಬ್ರಿಟಿಗಳು, ಭಾರತದ ಜನರು ಮಾಲ್ದೀವ್ಸ್‌ನ ಬದಲು ದೇಶಿ ಪ್ರವಾಸಿ ತಾಣಗಳ ಕಡೆ ಗಮನ ಹರಿಸಬೇಕು ಎಂದು ಕರೆ ನೀಡಿದ್ದಾರೆ.

9ನೇ ಪುಟ ನೋಡಿ

ಭಾರತವು ಮಾಲ್ದೀವ್ಸ್‌ಗೆ ಮಿತ್ರರಾಷ್ಟ್ರ ವಾಗಿದ್ದು ಇಂತಹ ಸಂವೇದನಾ ರಹಿತ ಹೇಳಿಕೆಗಳಿಗೆ ಅವಕಾಶ ನೀಡಬಾರದು. ಇದು ಉಭಯ ರಾಷ್ಟ್ರಗಳ ಬಾಂಧವ್ಯದ ಮೇಲೆ ನಕಾರಾತ್ಮಕವಾಗಿ ಪರಿಣಾಮ ಬೀರುತ್ತದೆ
ಇಬ್ರಾಹಿಂ ಮೊಹಮ್ಮದ್ ಸಾಲಿಹ್, ಮಾಲ್ದೀವ್ಸ್‌ನ ಮಾಜಿ ಅಧ್ಯಕ್ಷ

ಮಾಲ್ದೀವ್ಸ್ ಜೊತೆ ವಾಣಿಜ್ಯ ವ್ಯವಹಾರ ನಡೆಸುವುದರಿಂದ ಹಿಂದೆ ಸರಿಯಬೇಕು ಎಂದು ವರ್ತಕರನ್ನು ಮತ್ತು ರಫ್ತುದಾರರನ್ನು ಒತ್ತಾಯಿಸಲಾಗಿದೆ.
ಪ್ರವೀಣ್ ಖಾಂಡೇಲ್‌ವಾಲ್, ಅಖಿಲ ಭಾರತ ವರ್ತಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ

ಚೀನಾಕ್ಕೆ ಮುಯಿಜು

ಬೀಜಿಂಗ್ (ಪಿಟಿಐ): ಮಾಲ್ದೀವ್ಸ್‌ನ ಅಧ್ಯಕ್ಷ ಮೊಹಮ್ಮದ್ ಮುಯಿಜು ಅವರು ಸೋಮವಾರ ಚೀನಾಕ್ಕೆ ಭೇಟಿ ನೀಡಿದ್ದಾರೆ.

ಐದು ದಿನಗಳ ಭೇಟಿಯ ಸಂದರ್ಭದಲ್ಲಿ ಮುಯಿಜು ಅವರು ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ಜೊತೆ ಮಾತುಕತೆ ನಡೆಸಲಿದ್ದಾರೆ, ಎರಡು ದೇಶಗಳ ನಡುವಿನ ಸಂಬಂಧ ಬಲವರ್ಧನೆಯ ಉದ್ದೇಶದ ಒಪ್ಪಂದಗಳಿಗೆ ಸಹಿ ಹಾಕಲಿದ್ದಾರೆ.

ಮಂಗನ ಕಾಯಿಲೆ ಯುವತಿ ಸಾವು

ಶಿವಮೊಗ್ಗ: ಮಂಗನ ಕಾಯಿಲೆಯಿಂದ (ಕ್ಯಾಸನೂರು ಫಾರೆಸ್ಟ್ ಡಿಸೀಸ್- ಕೆಎಫ್‌ಡಿ) ಬಳಲುತ್ತಿದ್ದ ಹೊಸನಗರ ತಾಲ್ಲೂಕಿನ ಅರಮನೆ ಕೊಪ್ಪ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮವೊಂದರ ಯುವತಿಯೊಬ್ಬರು (18) ಸೋಮವಾರ ಮಣಿಪಾಲದ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಯುವತಿಗೆ ವಾರದ ಹಿಂದೆ ಜ್ವರ ಕಾಣಿಸಿಕೊಂಡಿತ್ತು. ಜ್ವರ ಉಲ್ಬಣಗೊಂಡ ಕಾರಣ ಇಲ್ಲಿನ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಕೆಎಫ್‌ಡಿ ದೃಢಪಟ್ಟಿತ್ತು. ಶುಕ್ರವಾರ ಮಣಿಪಾಲದ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಸೋತ ಸಚಿವ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಜೈಪುರ: ರಾಜಸ್ಥಾನದ ಕರಣ್‌ಪುರ ವಿಧಾನಸಭೆ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದ ಸಚಿವ ಸುರೇಂದ್ರ ಪಾಲ್ ಸಿಂಗ್ ಟಿ.ಟಿ ಅವರು ಕಾಂಗ್ರೆಸ್ ಅಭ್ಯರ್ಥಿ ರೂಪಿಂದರ್ ಸಿಂಗ್ ಕೂನರ್ ವಿರುದ್ಧ ಪರಾಭವಗೊಂಡಿದ್ದು, ಆಡಳಿತಾರೂಢ ಬಿಜೆಪಿಗೆ ಭಾರಿ ಮುಜುಗರವಾಗಿದೆ.

ಫಲಿತಾಂಶದ ಬೆನ್ನಲ್ಲೇ ಸುರೇಂದ್ರ ಪಾಲ್ ಸಿಂಗ್ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಸೋಮವಾರ ಮತ ಎಣಿಕೆ ನಡೆದು, ರೂಪಿಂದರ್ ಸಿಂಗ್ ಅವರು ಸುರೇಂದ್ರ ಪಾಲ್ ಸಿಂಗ್ ಅವರನ್ನು 12,570 ಮತಗಳ ಅಂತರದಿಂದ ಸೋಲಿಸಿದ್ದಾರೆ. ಜ.5ರಂದು ಮತದಾನ ನಡೆದಿತ್ತು. ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ ಅವರಿಗೆ, ಉಪಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯ ಸೋಲು ಭಾರಿ ಹಿನ್ನಡೆ ಎಂದೇ ವಿಶ್ಲೇಷಿಸಲಾಗುತ್ತಿದೆ. ಸಿಂಗ್ ಪರ ಕ್ಷೇತ್ರದಲ್ಲಿ ಪ್ರಚಾರ ನಡೆಸಿದ್ದ ಮುಖ್ಯಮಂತ್ರಿ ಶರ್ಮಾ, 'ಡಬಲ್ ಎಂಜಿನ್ ಸರ್ಕಾರ ಇದ್ದರೆ ಅಭಿವೃದ್ಧಿಗೆ ಹೆಚ್ಚು ಅನುಕೂಲ' ಎಂದಿದ್ದರಲ್ಲದೇ, ಸಚಿವ ಸ್ಥಾನ ನೀಡಿದ್ದಾಗಿಯೂ ಹೇಳಿದ್ದರು.

ಚುನಾಯಿತರಾಗುವುದಕ್ಕೂ ಮೊದಲೇ ಸುರೇಂದ್ರ ಪಾಲ್ ಸಿಂಗ್ ಅವರನ್ನು ಸಚಿವರನ್ನಾಗಿ ಮಾಡಿದ್ದಕ್ಕೆ ವಿರೋಧಿಸಿದ್ದ ಕಾಂಗ್ರೆಸ್, ಚುನಾವಣಾ ಆಯೋಗಕ್ಕೆ ದೂರು ನೀಡಿತ್ತು. ಕರಣ್‌ಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಗುರ್ಮೀತ್ ಸಿಂಗ್ ಕೂನರ್ ಅವರು, ನ.15ರಂದು ನಿಧನರಾದ ಹಿನ್ನೆಲೆಯಲ್ಲಿ ಉಪಚುನಾವಣೆ ನಡೆದಿತ್ತು. ಗುರ್ಮೀತ್ ಸಿಂಗ್ ಅವರ ಪುತ್ರ ರೂಪಿಂದರ್ ಸಿಂಗ್ ಅವರನ್ನೇ ಕಾಂಗ್ರೆಸ್ ಕಣಕ್ಕಿಳಿಸಿತ್ತು.

ಹೂಡಿಕೆದಾರರಿಗೆ ₹2.91 ಲಕ್ಷ ಕೋಟಿ ನಷ್ಟ 08

ಚಿನಕುರಳಿ

ಪ್ರಕಾಶ್ ಶೆಟ್ಟಿ



ಪಾರ್ಟಿಯಲ್ಲಿ ಪಾಲ್ಗೊಂಡಿದ್ದ ಡಾಲಿ, ಅಭಿಷೇಕ್

ದರ್ಶನ್ ಸೇರಿ 8 ಮಂದಿಗೆ ನೋಟಿಸ್


ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಟೇರ ಸಿನಿಮಾದ ಯಶಸ್ಸು ಸಂಭ್ರಮಿಸಲು ಇಲ್ಲಿನ ಮೈಸೂರು ಸ್ಯಾಂಡಲ್‌ಸೋಪ್ ಫ್ಯಾಕ್ಟರಿ ಬಳಿಯ ಒರಾಯನ್ ಮಾಲ್ ಎದುರಿನ 'ಜೆಟ್‌ಲ್ಯಾಗ್ ಪಬ್'ನಲ್ಲಿ ನಿಯಮ ಉಲ್ಲಂಘಿಸಿ, ಮುಂಜಾನೆವರೆಗೆ ಪಾರ್ಟಿ ಆಯೋಜಿಸಿದ್ದ ಚಿತ್ರರಂಗದ 8 ಮಂದಿಗೆ ಸುಬ್ರಹ್ಮಣ್ಯ ನಗರ ಠಾಣೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.

ನಟ ದರ್ಶನ್, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ಸಂಗೀತ ನಿರ್ದೇಶಕ ವಿ.ಹರಿಕೃಷ್ಣ, ನಿರ್ದೇಶಕ ತರುಣ್ ಸುಧೀರ್, ನಟ 'ನಿನಾಸಂ' ಸತೀಶ್, ಡಾಲಿ ಧನಂಜಯ, ಚಿಕ್ಕಣ್ಣ, ಅಭಿಷೇಕ್ ಅಂಬರೀಷ್ ಅವರಿಗೆ ವಿಚಾರಣೆಗೆ ಹಾಜರಾಗಲು ನೋಟಿಸ್ ಜಾರಿ ಮಾಡಲಾಗಿದೆ. ನೋಟಿಸ್ ತಲುಪಿದ ಕೂಡಲೇ ವಿಚಾರಣೆಗೆ ಹಾಜರಾಗಬೇಕು ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.



ದರ್ಶನ್



ರಾಕ್‌ಲೈನ್ ವೆಂಕಟೇಶ್

ವಿದೇಶಕ್ಕೆ ತೆರಳಿದ ದರ್ಶನ್: ಜ.8ರಂದು ಬೆಳಿಗ್ಗೆ 11 ಗಂಟೆಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್‌ನಲ್ಲಿ ತಿಳಿಸಲಾಗಿತ್ತು. ಆದರೆ, ದರ್ಶನ್ ಹಾಗೂ ತರುಣ್ ಸುಧೀರ್ ಸಿನಿಮಾದ ಪ್ರಚಾರಕ್ಕೆ ಜ.4ರಂದೇ ದುಬೈಗೆ ತೆರಳಿದ್ದು, ವಿಚಾರಣೆಗೆ ಹಾಜರಾಗಿಲ್ಲ. ರಾಜರಾಜೇಶ್ವರಿ ನಗರದ ದರ್ಶನ್ ಅವರ ಮನೆಗೆ ನೋಟಿಸ್ ತಲುಪಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ನಿಯಮ ಉಲ್ಲಂಘನೆ: 'ಜ.3ರಂದು ಒರಿಯನ್ ಮಾಲ್‌ನಲ್ಲಿ ಚಿತ್ರರಂಗದ ಗಣ್ಯರಿಗೆ ಸಿನಿಮಾದ ವಿಶೇಷ ಪ್ರದರ್ಶನ ಆಯೋಜಿಸಲಾಗಿತ್ತು. ಅದಾದ ಮೇಲೆ ನಿರ್ಮಾಪಕ ಸೌಂದರ್ಯ ಜಗದೀಶ್ ಪತ್ನಿ ಶಶಿರೇಖಾ ಜಗದೀಶ್ ಮಾಲೀಕತ್ವದ ಜೆಟ್‌ಲ್ಯಾಗ್ ಪಬ್‌ನಲ್ಲಿ ಪಾರ್ಟಿ ಆಯೋಜನೆಗೊಂಡಿತ್ತು. ರಾತ್ರಿ 1 ಗಂಟೆವರೆಗೆ ಮಾತ್ರ ಪಾರ್ಟಿಗೆ ಅವಕಾಶವಿತ್ತು. ಆದರೆ, ರಾತ್ರಿ 8 ಗಂಟೆಗೆ ಆರಂಭವಾದ ಪಾರ್ಟಿ ಜ.4ರ ಮುಂಜಾನೆ 3.30ರವರೆಗೆ ನಡೆದಿತ್ತು. ಮುಂಜಾನೆವರೆಗೆ ಮದ್ಯ ಹಾಗೂ ಊಟದ ವ್ಯವಸ್ಥೆ ಮಾಡಲಾಗಿತ್ತು' ಎಂದು ಪೊಲೀಸರು ಹೇಳಿದರು.

5ನೇ ಪುಟ ನೋಡಿ

ನಟ ಯಶ್ ಜನ್ಮದಿನಕ್ಕೆ ಕಟೌಟ್ ನಿಲ್ಲಿಸುವ ವೇಳೆ ದುರಂತ

ವಿದ್ಯುತ್ ಪ್ರವಹಿಸಿ ಮೂವರು ಸಾವು

ಪ್ರಜಾವಾಣಿ ವಾರ್ತೆ

ಲಕ್ಷ್ಮೇಶ್ವರ (ಗದಗ ಜಿಲ್ಲೆ): ನಟ ಯಶ್ ಜನ್ಮದಿನದ ಅಂಗವಾಗಿ ಅವರ ಅಭಿಮಾನಿಗಳು ತಾಲ್ಲೂಕಿನ ಸೂರಣಗಿ ಗ್ರಾಮದ ಅಂಬೇಡ್ಕರ್ ನಗರದಲ್ಲಿ ಬೃಹತ್ ಕಟೌಟ್ ನಿಲ್ಲಿಸಲು ಸಿದ್ಧತೆ ನಡೆಸಿದ್ದ ವೇಳೆ ವಿದ್ಯುತ್ ಪ್ರವಹಿಸಿ ಮೂವರು ಯುವಕರು ಭಾನುವಾರ ರಾತ್ರಿ ಮೃತಪಟ್ಟಿದ್ದಾರೆ.

ಯಶ್ ಅಭಿಮಾನಿಗಳಾದ ಮುರಳಿ ನಡುವಿನಮನೆ (20), ನವೀನ ಗಾಜಿ (19) ಹಾಗೂ ಹನುಮಂತಪ್ಪ ಹರಿಜನ (21) ಮೃತರು.

ಯಶ್ ಅವರ ಚಿತ್ರವಿದ್ದ 20 ಅಡಿ ಎತ್ತರದ ಬ್ಯಾನರ್ ಅನ್ನು ಮೆಟಲ್ ಫ್ರೇಮ್‌ನಿಂದ ಬಿಗಿಗೊಳಿಸಲಾಗಿತ್ತು. ಬಳಿಕ ಅದನ್ನು ಎರಡು ದೊಡ್ಡ ಮರದ ಕಂಬಗಳಿಗೆ ಕಟ್ಟಿ ಮೇಲೆತ್ತಿ ನಿಲ್ಲಿಸುವ ಸಂದರ್ಭದಲ್ಲಿ ವಿದ್ಯುತ್ ತಂತಿಗೆ ಮೆಟಲ್ ಫ್ರೇಮ್ ತಾಗಿ ಅವಘಡ ಸಂಭವಿಸಿದೆ. ಈ ಘಟನೆಯಲ್ಲಿ ಇತರ ಮೂವರು ಯುವಕರಿಗೂ ಗಂಭೀರ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಅಭಿಮಾನಿಗಳ ಸಾವಿನ ಸುದ್ದಿ ಕೇಳಿ ಆಘಾತಕ್ಕೆ ಒಳಗಾದ ನಟ ಯಶ್ ಪ್ರವಾಸ ರದ್ದುಗೊಳಿಸಿ, ಸೋಮ ವಾರ ಸಾಯಂಕಾಲ ಸೂರಣಗಿ ಗ್ರಾಮಕ್ಕೆ ಬಂದರು. ಯಶ್ ಅವರನ್ನು ನೋಡಿದ ತಕ್ಷಣ ಕುಟುಂಬಸ್ಥರ ದುಃಖದ ಕಟ್ಟೆಯೊಡೆಯಿತು. ಆಘಾತಕ್ಕೆ ಒಳಗಾಗಿದ್ದ ಪೋಷಕರನ್ನು ಕಂಡು ಯಶ್ ಕೂಡ ಭಾವುಕರಾದರು.


5ನೇ ಪುಟ ನೋಡಿ



ಗದಗ ಜಿಲ್ಲೆ ಲಕ್ಷ್ಮೇಶ್ವರ ತಾಲ್ಲೂಕಿನ ಸೂರಣಗಿ ಗ್ರಾಮಕ್ಕೆ ನಟ ಯಶ್ ಅವರು ಸೋಮವಾರ ಭೇಟಿ ನೀಡಿ ಮೃತ ಯುವಕ ಹನುಮಂತಪ್ಪ ಅವರ ಪೋಷಕರಿಗೆ ಸಾಂತ್ವನ ಹೇಳಿದರು



ನವೀನ ಗಾಜಿ



ಹನಮಂತ ಹರಿಜನ



ಮುರುಳಿ ನಡುವಿನಮನಿ

ಯಾರೇ ಆಗಲಿ ಅಭಿಮಾನ ತೋರಿಸಲು ಹೋಗಿ ಜೀವಕ್ಕೆ ಅಪಾಯ ಮಾಡಿಕೊಳ್ಳಬೇಡಿ. ಕಟೌಟ್, ಬ್ಯಾನರ್ ಬೇಡವೇ ಬೇಡ.
ಯಶ್, ಚಿತ್ರನಟ

'ಬರ್ತ್‌ಡೇ ಅಂದರೆ ಭಯ ಶುರುವಾಗಿದೆ'

'ಬರ್ತ್‌ಡೇ ಅಂದರೆ ನನಗೀಗ ಭಯ ಶುರು ಆಗುತ್ತಿದೆ. ನಿಜ ಹೇಳಬೇಕು ಅಂದರೆ, ನನ್ನ ಬಗ್ಗೆ ನನಗೆ ಅಸಹ್ಯ ಆಗಿ ಬಿಟ್ಟಿದೆ. ನನ್ನ ಅಭಿಮಾನಿಗಳು ಬ್ಯಾನರ್, ಕಟೌಟ್ ನಿಲ್ಲಿಸಿ ಅಭಿಮಾನ ವ್ಯಕ್ತಪಡಿಸಬೇಕು ಎಂದು ನಾನೂ ಯಾವತ್ತೂ ಇಷ್ಟಪಡುವುದಿಲ್ಲ' ಎಂದು ನಟ ಯಶ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

5ನೇ ಪುಟ ನೋಡಿ

ರಾಮಚಂದ್ರನ್ ಬಿಎಂಟಿಸಿ ಎಂ.ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವಿಶೇಷ ಆಯುಕ್ತ (ಚುನಾವಣೆ) ಆರ್. ರಾಮಚಂದ್ರನ್ ಅವರನ್ನು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಜಿ. ಸತ್ಯವತಿ ಅವರಿಗೆ ಯಾವುದೇ ಹುದ್ದೆಯನ್ನು ತೋರಿಸಿಲ್ಲ.

‘ಬಿಬಿಎಂಪಿ ಶಾಲೆ ಶಿಕ್ಷಕರು ಶಿಕ್ಷಣ ಇಲಾಖೆಗೆ ವರ್ಗವಾಗಲು ತೊಡಕು’

‘ಶೇ 20ರಷ್ಟು ಶಿಕ್ಷಕರು ಅರ್ಹರಲ್ಲ’

ಪ್ರಜಾವಾಣಿ ವಾರ್ತೆ



ಬಿಬಿಎಂಪಿ ಹೊರಗುತ್ತಿಗೆ ಶಿಕ್ಷಕರು ‘ನಮ್ಮನ್ನೇ ಮುಂದುವರಿಸಬೇಕು’ ಎಂದು ಕೇಂದ್ರ ಕಚೇರಿಯಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು

ಬೆಂಗಳೂರು: ‘ಬಿಬಿಎಂಪಿ ಶಾಲೆಗಳಲ್ಲಿ ಬೋಧಿಸುತ್ತಿರುವ ಶಿಕ್ಷಕರಲ್ಲಿ ಶೇ 15 ರಿಂದ ಶೇ 20ರಷ್ಟು ಜನರಿಗೆ ಸೂಕ್ತ ವಿದ್ಯಾರ್ಹತೆ ಇಲ್ಲ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

‘ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಬಿಬಿಎಂಪಿ ಶಾಲೆಗಳಿಗೆ ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರನ್ನು ಒದಗಿಸುತ್ತದೆ. ನಮ್ಮಲ್ಲಿ ಕಾಯಂ ಶಿಕ್ಷಕರ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆ ಆಗುತ್ತಿದೆ. ಹೊರಗುತ್ತಿಗೆಯಲ್ಲಿರುವ ಎಲ್ಲ ಶಿಕ್ಷಕರೂ ಮುಂದುವರಿಯುವ ಅರ್ಹತೆ ಹೊಂದಿಲ್ಲ’ ಎಂದು ಸುದ್ದಿಗಾರರಿಗೆ ಸೋಮವಾರ ಮಾಹಿತಿ ನೀಡಿದರು.

‘ನಮ್ಮಲ್ಲಿ ಬೋಧಿಸುತ್ತಿರುವ ಶಿಕ್ಷಕರನ್ನು ಶಿಕ್ಷಣ ಇಲಾಖೆಗೆ ವರ್ಗಾಯಿಸುವ ಸಂದರ್ಭದಲ್ಲಿ ಯಾರು ವಿದ್ಯಾರ್ಹತೆ ಹೊಂದಿಲ್ಲವೋ ಅವರನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದೇವೆ. ನಾವು ಎರಡು ವರ್ಷಗಳಿಂದ ವಿದ್ಯಾರ್ಹತೆ ಇಲ್ಲದ ಶಿಕ್ಷಕರಿಗೆ ವಿನಾಯಿತಿ ನೀಡುತ್ತಿದ್ದೆವು. ಅಂಥವರು ಇಲ್ಲಿ ಬೋಧಿಸುತ್ತಿದ್ದರು. ಇನ್ನು ಮುಂದೆ ಅದು ಸಾಧ್ಯವಿಲ್ಲ’ ಎಂದು ಹೇಳಿದರು.

‘25, 30 ವರ್ಷಗಳವರೆಗೆ ಬೋಧನೆ ಮಾಡಿದ್ದೇವೆ. ವಿದ್ಯಾರ್ಹತೆಯೊಂದೇ ಮಾನದಂಡವಾಗ ಬಾರದು ಎಂದು ಕೆಲವರು ಹೇಳುತ್ತಿದ್ದಾರೆ. ಆದರೆ ಶಿಕ್ಷಣ ಇಲಾಖೆಯವರು ಬಿ.ಇಡಿ ಮಾಡಿದವರಿಗೆ ಮಾತ್ರ ಮನ್ನಣೆ ನೀಡುವುದಾಗಿ ಹೇಳಿದ್ದಾರೆ’ ಎಂದರು.

‘ಶಿಕ್ಷಕರು ಬೋಧನೆಯನ್ನು ತಿಳಿದುಕೊಳ್ಳದಿದ್ದರೆ ಅವರಿಂದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗುವುದಿಲ್ಲ. ಹೀಗಾಗಿ ಶೈಕ್ಷಣಿಕ ಅರ್ಹತೆ ಇಲ್ಲದ ಹೊರಗುತ್ತಿಗೆ ಶಿಕ್ಷಕರನ್ನು ಮುಂದುವರಿಸಲು ಸಾಧ್ಯವಿಲ್ಲ’ ಎಂದು ಹೇಳಿದರು.

‘ಪಾಲಿಕೆಯ ಶಾಲೆಗಳಲ್ಲಿರುವ ಶೇ 15ರಿಂದ ಶೇ 20ರಷ್ಟು ಶಿಕ್ಷಕರನ್ನು ಮುಂದುವರಿಸಲಾಗುತ್ತಿಲ್ಲ. ಇಷ್ಟು ಶಿಕ್ಷಕರನ್ನು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್‌ಡಿಎಂಸಿ) ಮೂಲಕ ತೆಗೆದುಕೊಳ್ಳಲಾಗುತ್ತದೆ. ಬಿಬಿಎಂಪಿ ಶಾಲೆಗಳಲ್ಲಿ ಬೋಧನೆ ಮಾಡುತ್ತಿರುವ ಶಿಕ್ಷಕರಲ್ಲಿ ಯಾರಿಗೆ ವಿದ್ಯಾರ್ಹತೆ ಇದೆಯೋ ಅವರನ್ನು ತೆಗೆಯುವುದು ಬೇಡ ಎಂದು ಎಸ್‌ಡಿಎಂಸಿಗೆ ನಿರ್ದೇಶನ ನೀಡುತ್ತೇವೆ. ಎಸ್‌ಡಿಎಂಸಿ ಮೂಲಕ ಅತಿಥಿ ಶಿಕ್ಷಕರೂ ಬರುವುದರಿಂದ ಅವರೆಲ್ಲ ನಮ್ಮ ಹತೋಟಿಗೆ ಬರುತ್ತಾರೆ. ನರ್ಸರಿ ಶಿಕ್ಷಕರು ಎಂದಿನಂತೆಯೇ ಮುಂದುವರಿಯಲಿದ್ದಾರೆ’ ಎಂದರು.

‘ಬಿಬಿಎಂಪಿ ಪದವಿ ಕಾಲೇಜುಗಳ ಬೋಧಕರನ್ನೂ ಉನ್ನತ ಶಿಕ್ಷಣ ಇಲಾಖೆಯಿಂದ ಒದಗಿಸುವ ಬಗ್ಗೆ ಇಲಾಖೆಯೊಂದಿಗೆ ಶೀಘ್ರವೇ ಚರ್ಚೆ ನಡೆಸಲಾಗುತ್ತದೆ’ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ಹೊರಗುತ್ತಿಗೆ ಶಿಕ್ಷಕರನ್ನೇ ಮುಂದುವರಿಸಿ

‘ಬಿಬಿಎಂಪಿ ಶಾಲೆಗಳಲ್ಲಿರುವ ಹೊರಗುತ್ತಿಗೆಯ 764 ಶಿಕ್ಷಕರನ್ನು ಕರ್ತವ್ಯದಲ್ಲಿ ಮುಂದುವರಿಸಿ, ಸೇವಾಭದ್ರತೆ ನೀಡಬೇಕು’ ಎಂದು ಬಿಬಿಎಂಪಿ ಹೊರಗುತ್ತಿಗೆ ಶಿಕ್ಷಕರ ಸಂಘದ ಸದಸ್ಯರು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಮನವಿ ಸಲ್ಲಿಸಿದರು.

‘ಕೇಂದ್ರ ಕಚೇರಿಯಲ್ಲಿ ಸೋಮವಾರ ಬೆಳಿಗ್ಗೆ ಪ್ರತಿಭಟನೆ ನಡೆಸಿದ ಶಿಕ್ಷಕರು, ‘ಶಿಕ್ಷಣ ವಿಭಾಗದ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಕೈಗೊಂಡ ತೀರ್ಮಾನದಿಂದ 764 ಶಿಕ್ಷಕರ ಕುಟುಂಬದವರು ಬೀದಿಗೆ ಬರುತ್ತಾರೆ’ ಎಂದು ಅಳಲು ತೋಡಿಕೊಂಡರು.

ಗುಂಡಿಮಯ ರಸ್ತೆ: ಸಾಹಸ ಪಯಣ

ಶಿವಾನಂದನಗರದಿಂದ ಗಂಗೇನಪುರದವರೆಗಿನ ಸ್ಥಿತಿ ಅಧ್ವಾನ

ಪ್ರಜಾವಾಣಿ ವಾರ್ತೆ



ಶಿವಾನಂದನಗರ–ಗಂಗೇನಪುರ ರಸ್ತೆಯಲ್ಲಿ ಗುಂಡಿ ಬಿದ್ದಿರುವ ಚಿತ್ರಣ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕು ಸೋಂಪುರ ಹೋಬಳಿಯಲ್ಲಿ ಶಿವಗಂಗೆ-ಕುದೂರು ಸಂಪರ್ಕ ರಸ್ತೆಯು ಶಿವಾನಂದ ನಗರದಿಂದ ಗಂಗೇನಪುರದವರೆಗೆ ಅಧ್ವಾನವಾಗಿದೆ.

ಈ ರಸ್ತೆ ದಾಬಸ್ ಪೇಟೆ-ಶಿವಗಂಗೆ ಪಟ್ಟಣದ ಮೂಲಕ ಮಾಗಡಿ ತಾಲ್ಲೂಕಿನ ರೇಷ್ಮೆ ನಗರಿ ಕುದೂರು ಹಾಗೂ ಮಂಗಳೂರು ರಾಷ್ಟ್ರೀಯ ಹೆದ್ದಾರಿ ಸಂಪರ್ಕಿಸುತ್ತದೆ.

ಶಿವಾನಂದ ನಗರದಿಂದ ಮಾಗಡಿ ತಾಲ್ಲೂಕು ಗಡಿಯವರೆಗೆ ಒಂದೂವರೆ ಕಿ.ಮೀ ಉದ್ದಕ್ಕೂ ರಸ್ತೆ ಕಿತ್ತು ಹೋಗಿದೆ. ಅಲ್ಲಲ್ಲಿ ಗುಂಡಿಗಳಾಗಿ ಓಡಾಡುವುದಕ್ಕೆ ತೊಂದರೆಯಾಗಿದೆ.

ಗಂಗೇನಪುರ ಬಳಿ ಅಲ್ಲಲ್ಲೇ ಆಳವಾದ ಗುಂಡಿಗಳಾಗಿವೆ. ಮಳೆ ಬಿದ್ದಾಗ ನೀರು ನಿಂತು ರಸ್ತೆ ಯಾವುದು ಎಂಬುದು ಗೊತ್ತಾಗದೇ ದ್ವಿಚಕ್ರವಾಹನಗಳು ಬಿದ್ದು ಸವಾರರು ಗಾಯಗೊಂಡಿದ್ದಾರೆ. ಗುಂಡಿ ಬಿದ್ದು ತಿಂಗಳುಗಳೇ ಕಳೆದಿವೆ. ದುರಸ್ತಿಪಡಿಸದೇ ಇರುವುದರಿಂದ ಗುಂಡಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ ಎಂದು ಸ್ಥಳೀಯ ನಿವಾಸಿ ರುದ್ರೇಶ್ ದೂರಿದರು.

‘ಇದೇ ರಸ್ತೆಯಲ್ಲಿ ಮಂಗಳೂರು ಹೆದ್ದಾರಿಗೆ ಹೋಗುವ ವಾಹನಗಳು ಸಂಚರಿಸುತ್ತವೆ. ರಸ್ತೆ ಹಾಳಾಗಿರುವುದರಿಂದ ಸ್ಥಳೀಯರು, ಪ್ರವಾಸಿಗರು ತೊಂದರೆ ಅನುಭವಿಸುತ್ತಿದ್ದಾರೆ. ಗುಂಡಿಗಳಿಗೆ ಕನಿಷ್ಠ ಮಣ್ಣು ಹಾಕಿ ಮುಚ್ಚಿ ಅನುಕೂಲ ಮಾಡಿಕೊಡುವ ಪ್ರಯತ್ನ ಮಾಡಿಲ್ಲ’ಎಂದು ಚಾಲಕ ಮರಿಸ್ವಾಮಿ ಸಹಿತ ಗ್ರಾಮಸ್ಥರು ಬೇಸರ ವ್ಯಕ್ತಪಡಿಸಿದರು.

ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ

ಬೆಂಗಳೂರು: ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ದಿ ಮಿಥಿಕ್ ಸೊಸೈಟಿ ವತಿಯಿಂದ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿದೆ.

ಪದವಿ ಮತ್ತು ಸ್ನಾತಕೋತ್ತರ ಪದವಿ ಓದುತ್ತಿರುವ ವಿದ್ಯಾರ್ಥಿಗಳು ಈ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ‘ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಭಾರತ’ ಎಂಬ ವಿಷಯದ ಕುರಿತು ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ 2,500 ಪದಗಳ ಮಿತಿಯಲ್ಲಿ ಪ್ರಬಂಧವನ್ನು ತಮ್ಮದೇ ಕೈ ಬರಹದಲ್ಲಿ ಬರೆದು ಫೆ.10ರೊಳಗೆ ಕಳುಹಿಸಿಕೊಡಬೇಕು.

ಪ್ರಥಮ ಬಹುಮಾನ ₹10,000, ದ್ವಿತೀಯ ₹7,500, ತೃತೀಯ ₹5 ಸಾವಿರ, ಹಾಗೂ ತಲಾ ₹ 1ಸಾವಿರದಂತೆ 20 ಸಮಾಧಾನಕರ ಬಹುಮಾನ ನೀಡಲಾಗುವುದು. ವಿಳಾಸ: ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ, ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಕೆ.ಆರ್. ವೃತ್ತದ ಬಳಿ ಬೆಂಗಳೂರು–560001, ಮಾಹಿತಿಗೆ: 8722552497, 9483150527ಗೆ ಸಂಪರ್ಕಿಸಬಹುದು.

‘ವಿದ್ಯಾರ್ಥಿ ಸಂಘಟನೆಗಳ ಅಹವಾಲು ಆಲಿಸಿ’

ಬೆಂಗಳೂರು: ರಾಜ್ಯ ಶಿಕ್ಷಣ ನೀತಿ ರೂಪಿಸಲು ಇದೇ 10 ರಂದು ಕರೆದಿರುವ ಶಿಕ್ಷಣ ತಜ್ಞರ ಸಭೆಗೆ ವಿದ್ಯಾರ್ಥಿ ಸಂಘಟನೆಗಳಿಗೆ ಆಹ್ವಾನ ನೀಡದಿರುವುದನ್ನು ವಿವಿಧ ವಿದ್ಯಾರ್ಥಿ ಸಂಘಟನೆಗಳು ಖಂಡಿಸಿವೆ.

‘ಸಭೆಗೆ ಯಾವುದೇ ವಿದ್ಯಾರ್ಥಿ ಸಂಘಟನೆಗಳ ಪ್ರತಿನಿಧಿಗಳಿಗೆ ಆಹ್ವಾನಿಸಿಲ್ಲ. ಶಿಕ್ಷಣದ ವಿಚಾರದಲ್ಲಿ ಅತಿ ಮುಖ್ಯ ಭಾಗಿದಾರರೆನಿಸಿರುವ ಶಿಕ್ಷಕರು, ವಿದ್ಯಾರ್ಥಿಗಳ ಪೋಷಕರು ಹಾಗೂ ಶಿಕ್ಷಕರ ಸಂಘಟನೆಗಳೊಂದಿಗೆ ಯಾವುದೇ ಸಮಾಲೋಚನೆ ನಡೆಸಿಲ್ಲ’ ಎಂದು ಆರೋಪಿಸಿವೆ.

‘ಹೊಸ ರಾಜ್ಯ ಶಿಕ್ಷಣ ನೀತಿ ರೂಪಿಸುವ ಸಂದರ್ಭದಲ್ಲಿ ಶಿಕ್ಷಣದ ಮೂಲಭಾಗಿದಾರರೊಂದಿಗೆ ವಿಸ್ತೃತ ಚರ್ಚೆ, ಸಂವಾದ ಮತ್ತು ಸಮಾಲೋಚನೆ ನಡೆಸಬೇಕು’ ಎಂದು ಸಂಘಟನೆಗಳು ಒತ್ತಾಯಿಸಿವೆ.

‘ವಿದ್ಯಾರ್ಥಿಗಳು ಹಾಗೂ ಯುವಜನರನ್ನು ಒಳಗೊಂಡು ನೀತಿಯ ಕರಡನ್ನು ಇನ್ನಷ್ಟು ವಿಸ್ತೃತವಾದ ಚರ್ಚೆಗಳಿಂದ ರೂಪಿಸಿ ಸಾರ್ವಜನಿಕ ಚರ್ಚೆಗೆ ಒಳಪಡಿಸಿದ ನಂತರವೇ ನೀತಿಯನ್ನು ಅಂತಿಮಗೊಳಿಸಬೇಕು’ ಎಂದು ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಸೇಷನ್ ಝೀಶಾನ್ ಆಖಿಲ್ ಸಿದ್ದಿಕ್, ದಲಿತ ವಿದ್ಯಾರ್ಥಿ ಪರಿಷತ್‌ನ ಅಜಿತ್ ಬೆಳ್ಳಿಬಟ್ಲು, ಆಲ್ ಇಂಡಿಯಾ ಸ್ಟೂಡೆಂಟ್ ಅಸೋಸಿಯೇಷನ್‌ನ ಆರತ್ರಿಕ, ಕರ್ನಾಟಕ ವಿದ್ಯಾರ್ಥಿ ಸಂಘಟನೆಯ ಸರೋವರ ಬೆಂಕಿಕೆರೆ, ಆಲ್ ಇಂಡಿಯಾ ಸ್ಟೂಡೆಂಟ್ ಫೆಡರೇಷನ್‌ನ ವೀಣಾ ಆಗ್ರಹಿಸಿದ್ದಾರೆ.

ಖಾಸಗಿ ಬಸ್ ಪಲ್ಟಿ 40 ಮಂದಿಗೆ ಗಾಯ

ಹೊಸಕೋಟೆ: ತಾಲ್ಲೂಕಿನ ಚಿಂತಾಮಣಿ- ಹೊಸಕೋಟೆ ಹೆದ್ದಾರಿಯ ಬನಹಳ್ಳಿ ಸಮೀಪ ಖಾಸಗಿ ಬಸ್‌ವೊಂದು ಸೋಮವಾರ ಪಲ್ಟಿಯಾಗಿ 40ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದಾರೆ.

ಬೆಂಗಳೂರಿನಿಂದ ಚಿಂತಾಮಣಿ ಕಡೆಗೆ ಹೊರಟಿದ್ದ ಖಾಸಗಿ ಬಸ್‌ನಲ್ಲಿ 60ಕ್ಕೂ ಹೆಚ್ಚು ಮಂದಿ ಪ್ರಯಾಣಿಸುತ್ತಿದ್ದರು. ಅತಿ ವೇಗ ಹಾಗೂ ಅಜಾಗರೂಕ ಚಾಲನೆಯಿಂದ ಅಪಘಾತ ಸಂಭವಿಸಿದೆ. ಚಾಲಕ ರಸ್ತೆ ಉಬ್ಬು ಗಮನಿಸದ ಕಾರಣ ಬಸ್ ಪಲ್ಟಿಯಾಗಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಬಸ್ ಉರುಳಿ ಬೀಳುತ್ತಿದ್ದಂತೆ ಪ್ರಯಾಣಿಕರು ಬಸ್‌ನಿಂದ ಹೊರಬರಲು ಸಾಹಸ ನಡೆಸಿದರು. ಸ್ಥಳೀಯರು ಬಸ್‌ನ ಕಿಟಕಿಯ ಗಾಜು ಒಡೆದು ಪ್ರಯಾಣಿಕರನ್ನು ರಕ್ಷಿಸಿದರು.

ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದು, 35 ಮಂದಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಗಾಯಾಳುಗಳನ್ನು ಹೊಸಕೋಟೆಯ ಆಸ್ಪತ್ರೆಗಳಿಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಬಸ್ ಪಲ್ಟಿಯಾದ ಸ್ಥಳದಲ್ಲಿ ವಿದ್ಯುತ್ ತಂತಿ ಹಾದು ಹೋಗಿದ್ದು, ಒಂದು ವೇಳೆ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದ್ದರೆ ಹೆಚ್ಚಿನ ಪ್ರಾಣ ಹಾನಿ ಸಂಭವಿಸುವ ಸಾಧ್ಯತೆ ಇತ್ತು. ಅದೃಷ್ಟವಶಾತ್ ವಿದ್ಯುತ್ ಕಂಬಕ್ಕೆ ತಾಗುವುದು ಕೊಂಚದರಲ್ಲಿ ತಪ್ಪಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ನಂದಗುಡಿ ಹಾಗೂ ಹೊಸಕೋಟೆ ಪೊಲೀಸರು ಸ್ಥಳಕ್ಕೆ ಭೇಟಿ ಪರಿಶೀಲನೆ ನಡೆಸಿದರು.

‘ಫೆ. 24ರಿಂದ ಸಂವಿಧಾನ, ರಾಷ್ಟ್ರೀಯ ಏಕತಾ ಸಮಾವೇಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂವಿಧಾನ ಜಾರಿಗೆ ಬಂದ 75ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ (ಐಸೆಕ್) ಮತ್ತು ರಾಷ್ಟ್ರೀಯ ಕಾನೂನು ಶಾಲೆಯ ಸಹಯೋಗದಲ್ಲಿ ನಗರದ ಅರಮನೆ ಮೈದಾನದಲ್ಲಿ ಫೆಬ್ರುವರಿ 24 ಮತ್ತು 25ರಂದು ‘ಸಂವಿಧಾನ ಮತ್ತು ರಾಷ್ಟ್ರೀಯ ಏಕತೆ ಸಮಾವೇಶ’ ಆಯೋಜಿಸಲಾಗಿದೆ.

ಈ ಸಮಾವೇಶದಲ್ಲಿ ವಿಚಾರ ಸಂಕಿರಣ ಹಾಗೂ ಕ್ರೈಸ್ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಂದ ವಿಜ್ಞಾನ ವಸ್ತುಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಸಮಾವೇಶದ ಪೂರ್ವಭಾವಿ ಸಿದ್ಧತೆಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ಸಭೆ ನಡೆಯಿತು.

‘ಸಮಾವೇಶಕ್ಕೆ ಪೂರ್ವಭಾವಿಯಾಗಿ ಇದೇ 26ರಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ‘ಸಂವಿಧಾನ ಜಾಗೃತಿ ಜಾಥಾ’ ಆಯೋಜಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

‘ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಒಂದು ಲಕ್ಷ ಜನರು ಭಾಗವಹಿಸುವ ನಿರೀಕ್ಷೆಯಿದೆ. ವಿವಿಧ ವಿಷಯಗಳ ಕುರಿತ ಪರಿಣತರ ಚರ್ಚೆಯನ್ನು ಆಧರಿಸಿ, ನಿರ್ಣಯಗಳನ್ನು ಕೈಗೊಳ್ಳಲಾಗುವುದು’ ಎಂದು ಹೇಳಿದರು.

‘ಇಂದಿನ ಸಮಾಜ ಎದುರಿಸುತ್ತಿರುವ ಎಲ್ಲ ಸಮಸ್ಯೆ, ಸವಾಲುಗಳಿಗೆ ಸಂವಿಧಾನದಲ್ಲಿ ಉತ್ತರವಿದೆ. ಈ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶ. ಸಮಾವೇಶದಲ್ಲಿ ಅತ್ಯುತ್ತಮ ಸಂಪನ್ಮೂಲ ವ್ಯಕ್ತಿಗಳು ಹಾಗೂ ಅತಿಥಿಗಳನ್ನು ಆಹ್ವಾನಿಸಿ, ಅತ್ಯುತ್ತಮ ಚರ್ಚಾಗೋಷ್ಠಿಗಳನ್ನು ಆಯೋಜಿಸುವಂತೆ ಮುಖ್ಯಮಂತ್ರಿ ಸೂಚಿಸಿದರು.

ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ, ಸಚಿವರಾದ ಎಚ್‌.ಕೆ. ಪಾಟೀಲ, ಕೆ. ಎಚ್‌. ಮುನಿಯಪ್ಪ, ದಿನೇಶ್ ಗುಂಡೂರಾವ್, ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್‌.ಕೆ. ಅತೀಕ್, ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮೇಜರ್ ಪಿ. ಮಣಿವಣ್ಣನ್ ಸಭೆಯಲ್ಲಿ ಭಾಗವಹಿಸಿದ್ದರು.

ಬಿಜೆಪಿ ಜತೆ ಸಮನ್ವಯಕ್ಕೆ ಸೂಚನೆ

ಬೆಂಗಳೂರು: ರಾಜ್ಯದ ಎಲ್ಲ ಲೋಕಸಭಾ ಕ್ಷೇತ್ರಗಳಲ್ಲಿ ಮತಗಟ್ಟೆ ಹಂತದಿಂದ ಬಿಜೆಪಿ ಕಾರ್ಯಕರ್ತರ ಜತೆ ಸಮನ್ವಯ ಸಾಧಿಸಿಕೊಂಡು ಚುನಾವಣಾ ಸಿದ್ಧತೆ ಆರಂಭಿಸುವಂತೆ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಿಗೆ ಸೂಚಿಸಿದರು.

ಪಕ್ಷದ ಜಿಲ್ಲಾ ಘಟಕಗಳ ಅಧ್ಯಕ್ಷರು, ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು, ಪದಾಧಿಕಾರಿಗಳ ಜತೆ ಸೋಮವಾರ ಸಭೆ ನಡೆಸಿದ ಅವರು, ಮಿತ್ರಪಕ್ಷದ ಜತೆ ಸಮನ್ವಯದೊಂದಿಗೆ ಚುನಾವಣಾ ಸಿದ್ಧತೆ ಆರಂಭಿಸುವಂತೆ ಸೂಚನೆ ನೀಡಿದರು.

‘ಬಿಜೆಪಿ ಮತ್ತು ಜೆಡಿಎಸ್ ಮಧ್ಯೆ ಕ್ಷೇತ್ರಗಳ ಹಂಚಿಕೆ ಇನ್ನೂ ಆಗಿಲ್ಲ. ಆದರೆ, 28 ಕ್ಷೇತ್ರಗಳಲ್ಲಿ ಪಕ್ಷದ ಕಾರ್ಯಕರ್ತರು, ಮುಖಂಡರು ಬಿಜೆಪಿ ಜತೆ ಸಮನ್ವಯ ಸಾಧಿಸಬೇಕು’ ಎಂದರು.



ಭಾರತದ ಚೊಚ್ಚಲ ಸೌರ ಮಿಷನ್ ಆದಿತ್ಯ-ಎಲ್1 ಅನುಕೂಲಕರ ಸ್ಥಾನ ತಲುಪಿದೆ!

‘ನಮ್ಮ ಹೆಬ್ಬಗೋಡಿ ನಮ್ಮ ಅಸ್ಮಿತೆ’ ಹೋರಾಟ

ಹೆಬ್ಬಗೋಡಿ ಮೆಟ್ರೊ ನಿಲ್ದಾಣಕ್ಕೆ ಬಯೋಕಾನ್ ಹೆಸರು: ವಿರೋಧ

ಪ್ರಜಾವಾಣಿ ವಾರ್ತೆ

ಆನೇಕಲ್: ಹೆಬ್ಬಗೋಡಿಯ ಮೆಟ್ರೊ ನಿಲ್ದಾಣಕ್ಕೆ ‘ಬಯೋಕಾನ್ ಹೆಬ್ಬಗೋಡಿ’ ಎಂದು ನಾಮಕರಣ ಮಾಡುವ ನಿರ್ಧಾರ ವಿರೋಧಿಸಿ ಸ್ಥಳೀಯರು ಬಿಎಂಆರ್‌ಸಿಎಲ್ ವಿರುದ್ಧ ಸೋಮವಾರ ಪ್ರತಿಭಟನೆ ನಡೆಸಿದರು.

ಹೆಬ್ಬಗೋಡಿ ನಗರಸಭೆ ವ್ಯಾಪ್ತಿಯ ನೂರಾರು ಸಾರ್ವಜನಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

‘ಮೆಟ್ರೊ ನಿಲ್ದಾಣಕ್ಕೆ ಹೆಬ್ಬಗೋಡಿ ಬದಲು ಖಾಸಗಿ ಕಂಪನಿಯೊಂದರ ಹೆಸರು ಇಡಲು ಹೊರಟಿರುವ ಬಿಎಂಆರ್‌ಸಿಎಲ್, ಹೆಬ್ಬಗೋಡಿ ಜನತೆಯ ಸ್ವಾಭಿಮಾನಕ್ಕೆ ಧಕ್ಕೆ ತರುವ ಕೆಲಸ ಮಾಡುತ್ತಿದೆ. ಹೀಗಾಗಿ ‘ನಮ್ಮ ಹೆಬ್ಬಗೋಡಿ ನಮ್ಮ ಅಸ್ಮಿತೆ’ ಹೆಸರಿನಡಿಯಲ್ಲಿ ಹೋರಾಟ ಆರಂಭಿಸಿದ್ದೇವೆ’ ಎಂದು ಹೆಬ್ಬಗೋಡಿ ನಗರಸಭೆ ಸದಸ್ಯ ಮುನಿಕೃಷ್ಣ ಒತ್ತಾಯಿಸಿದರು.

ಹೆಬ್ಬಗೋಡಿಗೆ ತನ್ನದೇ ಆದ ಇತಿಹಾಸವಿದೆ. ಹೆಸರಿನ ಬದಲಾವಣೆಯ ಮೂಲಕ ಇಲ್ಲಿನ ನಾಗರಿಕರಿಗೆ ಅವಮಾನ ಮಾಡಲಾಗುತ್ತಿದೆ. ಬಿಎಂಆರ್‌ಸಿಎಲ್ ಸಂಸ್ಥೆಯು ಇಲ್ಲಿನ ನಗರಸಭೆ ಮತ್ತು ಸಾರ್ವಜನಿಕರಿಗೆ ಯಾವುದೇ ಮಾಹಿತಿ ನೀಡದೇ ಏಕಪಕ್ಷೀಯ ನಿರ್ಧಾರ ಕೈಗೊಂಡಿರುವುದು ಉತ್ತಮ ಬೆಳವಣಿಗೆಯಲ್ಲ ಎಂದು ಹೆಬ್ಬಗೋಡಿ ಮಂಜುನಾಥ್ ಅಸಮಾಧಾನ ವ್ಯಕ್ತಪಡಿಸಿದರು.

ಕಮ್ಮಸಂದ್ರ, ವೀರಸಂದ್ರ, ಸಂಪಿಗೆ ನಗರ ವಾರ್ಡ್‌ಗಳಿಗೆ ಹೆಚ್ಚಿನ ಸಮಸ್ಯೆಯಾಗಿದೆ. ಶಾಲಾ–ಕಾಲೇಜುಗಳಿವೆ. ಹೀಗಾಗಿ ಹೆಬ್ಬಗೋಡಿ ನಗರಸಭೆ ವ್ಯಾಪ್ತಿಯಲ್ಲಿ ಸ್ಕೈವಾಕ್ ನಿರ್ಮಿಸಬೇಕು. ಬಿಎಂಆರ್‌ಸಿಎಲ್ ಈಗಲೇ ಸೂಕ್ತ ಕ್ರಮ ಕೈಗೊಂಡು ಸಾರ್ವಜನಿಕರಿಗೆ ಅಗತ್ಯ ಸೌಲಭ್ಯ ನೀಡಬೇಕು. ಬಯೋಕಾನ್ ಹೆಸರನ್ನು ತೆಗೆಯುವವರೆಗೂ ಹೋರಾಟ ಮುಂದುವರೆಯಲಿದೆ ಎಂದು ತಿಳಿಸಿದರು.

ಬಯೋಕಾನ್ ಹೆಸರನ್ನು ಮೆಟ್ರೊ ನಿಲ್ದಾಣಕ್ಕೆ ಇಟ್ಟಿರುವುದರಿಂದ ಸ್ಥಳೀಯರ ಭಾವನೆಗಳಿಗೆ ಧಕ್ಕೆಯಾಗಿದೆ. ಹೆಬ್ಬಗೋಡಿಯಲ್ಲಿ ವಿವಿಧ ರಾಜ್ಯಗಳ ಜನರು ವಾಸವಾಗಿದ್ದಾರೆ. ಹೆಬ್ಬಗೋಡಿಯು ಆನೇಕಲ್ ತಾಲ್ಲೂಕಿನ ಏಕೈಕ ನಗರಸಭೆಯಾಗಿದೆ. ಆದರೆ ವಾಣಿಜ್ಯ ಕಾರಣಕ್ಕೆ ಬಯೋಕಾನ್ ಹೆಬ್ಬಗೋಡಿ ಎಂದು ನಾಮಕರಣ ಮಾಡುತ್ತಿರುವುದು ಸರಿಯಲ್ಲ ಎಂದು ಕರವೇ ಕಾರ್ಮಿಕ ಘಟಕದ ಅಧ್ಯಕ್ಷ ಹೆಬ್ಬಗೋಡಿ ಅಂಬರೀಷ್ ಆಕ್ಷೇಪ ವ್ಯಕ್ತಪಡಿಸಿದರು.

ಬಿಎಸ್‌ಪಿ ರಾಜ್ಯ ಖಜಾಂಚಿ ಚಿನ್ನಪ್ಪ ವೈ.ಚಿಕ್ಕಹಾಗಡೆ, ನಗರಸಭೆ ಸದಸ್ಯರಾದ ರಾಮಚಂದ್ರ, ರಾಮಣ್ಣ, ಅರುಣ್, ಸವಿತಾ ರಮೇಶ್, ಕೇಶವರೆಡ್ಡಿ, ಗಾಯತ್ರಿ, ಮಂಜುಳ, ಜಯರಾಮ್, ನಾರಾಯಣಸ್ವಾಮಿ, ಮುರಳಿ, ಕಬಡ್ಡಿ ಮಂಜು, ಕಿರಣ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಆನೇಕಲ್ ತಾಲ್ಲೂಕಿನ ಹೆಬ್ಬಗೋಡಿಯಲ್ಲಿ ಮೆಟ್ರೊ ನಿಲ್ದಾಣದ ಹೆಸರನ್ನು ಬಯೋಕಾನ್ ಹೆಬ್ಬಗೋಡಿ ಎಂದು ನಾಮಕರಣ ಮಾಡಿರುವುದನ್ನು ವಿರೋಧಿಸಿ ಸಾರ್ವಜನಿಕರು ಪ್ರತಿಭಟನೆ ನಡೆಸಿದರು

ಅಗ್ನಿಶಾಮಕ ದಳದ ಬಲವರ್ಧನೆಗೆ ಕ್ರಿಯಾಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ 15ನೇ ಹಣಕಾಸು ಆಯೋಗದ ಅನುದಾನದಲ್ಲಿ ₹ 329 ಕೋಟಿ ವೆಚ್ಚದಲ್ಲಿ 17 ಅಗ್ನಿಶಾಮಕ ಠಾಣೆಗಳನ್ನು ಆರಂಭಿಸುವುದೂ ಸೇರಿದಂತೆ ಅಗ್ನಿಶಾಮಕ ದಳದ ಬಲವರ್ಧನೆಗೆ ಗೃಹ ಇಲಾಖೆಯು ಕಂದಾಯ ಇಲಾಖೆಗೆ ಸೋಮವಾರ ಕ್ರಿಯಾಯೋಜನೆ ಸಲ್ಲಿಸಿದೆ.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಅಗ್ನಿಶಾಮಕ ದಳದ ಪೊಲೀಸ್ ಮಹಾನಿರ್ದೇಶಕ ಕಮಲ್ ಪಂತ್ ಅವರು ಕ್ರಿಯಾಯೋಜನೆಯನ್ನು ಮಂಡಿಸಿದರು. ಕಂದಾಯ ಇಲಾಖೆಯ ಅನುಮೋದನೆ ಬಳಿಕ ಪ್ರಸ್ತಾವವೂ ಕೇಂದ್ರ ಗೃಹ ಸಚಿವಾಲಯಕ್ಕೆ ರವಾನೆಯಾಗಲಿದೆ.

ಅಗ್ನಿಶಾಮಕ ಠಾಣೆಗಳ ಕಟ್ಟಡಗಳ ನಿರ್ಮಾಣಕ್ಕೆ ₹ 98.97 ಕೋಟಿ, ರಾಜ್ಯ ತರಬೇತಿ ಕೇಂದ್ರದ ಉನ್ನತೀಕರಣಕ್ಕೆ ₹ 16.49 ಕೋಟಿ, ಆಧುನಿಕ ಉಪಕರಣಗಳ ಖರೀದಿಗೆ ₹ 148.45 ಕೋಟಿ ಮತ್ತು ನಗರ ಪ್ರದೇಶಗಳಲ್ಲಿ ಅಗ್ನಿಶಾಮಕ ದಳ ಬಲಪಡಿಸಲು ₹ 16.50 ಕೋಟಿ ವೆಚ್ಚದ ಪ್ರಸ್ತಾವ ಕ್ರಿಯಾಯೋಜನೆಯಲ್ಲಿದೆ.

‘ಕೇಂದ್ರ ಸರ್ಕಾರವು ಒದಗಿಸಿರುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಯೋಜನೆ ರೂಪಿಸಿದೆ. ಅಗ್ನಿ ಅವಘಡಗಳನ್ನು ತಡೆಯುವಲ್ಲಿ ಈ ಯೋಜನೆಯು ಸಹಕಾರಿಯಾಗಲಿದೆ. ಅಗ್ನಿಶಾಮಕ ಠಾಣೆಗಳಿಗೆ ಅತ್ಯಾಧುನಿಕ ಯಂತ್ರೋಪಕರಣಗಳ ಅಗತ್ಯವಿದ್ದರೆ ಖರೀದಿಗೆ ಸರ್ಕಾರವು ಅನುದಾನ ಒದಗಿಸಲಿದೆ’ ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ಮಾದಕ ವಸ್ತುಗಳ ಪೂರೈಕೆಗೆ ಪೆಡ್ಲರ್‌ಗಳಿಂದ ಹೊಸ ಮಾರ್ಗ • 'ಡಾರ್ಕ್‌ನೆಟ್' ಮೂಲಕ ಡ್ರಗ್ಸ್ ದಂಧೆ

ಸಿಲಿಕಾನ್ ಸಿಟಿ: ಡ್ರಗ್ಸ್ ಮಾಫಿಯಾ ವ್ಯಾಪಕ

• ಆದಿತ್ಯ ಕೆ.ಎ.

ಬೆಂಗಳೂರು: 'ಸಿಲಿಕಾನ್ ಸಿಟಿ'ಯಲ್ಲಿ ಡ್ರಗ್ಸ್ ಮಾಫಿಯಾಕ್ಕೆ ಕಡಿವಾಣ ಬಿದ್ದಿಲ್ಲ. ಮಾದಕ ವಸ್ತುಗಳ ಮಾರಾಟ, ಪೂರೈಕೆ ಜಾಲವು ವಿಸ್ತಾರಗೊಳ್ಳುತ್ತಿದೆ.

ಆರೋಪಿಗಳು, ಮಾದಕ ವಸ್ತುಗಳನ್ನು ಗ್ರಾಹಕರು ಹಾಗೂ ಪಾರ್ಟಿ ನಡೆಯುವ ಸ್ಥಳಕ್ಕೆ ಪೂರೈಸುತ್ತಿದ್ದಾರೆ. ಕಳೆದ ವರ್ಷ ವಿಮಾನ, ಬಸ್ ಹಾಗೂ ರೈಲುಗಳ ಮೂಲಕ ಡ್ರಗ್ಸ್ ಪೂರೈಕೆಯಾಗಿದ್ದನ್ನು ಪೊಲೀಸರು ಕಾರ್ಯಾಚರಣೆ ವೇಳೆ ಪತ್ತೆ ಹಚ್ಚಿದ್ದರು.

2021ರಲ್ಲಿ ವಿವಿಧ ಮಾದರಿಯ ₹60 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿಕೊಂಡಿದ್ದರು. ಅದೇ 2023ರಲ್ಲಿ ಸಿಸಿಬಿ ಸೇರಿದಂತೆ ಎಂಟು ವಲಯಗಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ₹103 ಕೋಟಿ ಮೊತ್ತದ ಮಾದಕ ವಸ್ತುಗಳನ್ನು ಜಪ್ತಿ ಮಾಡಿಕೊಳ್ಳಲಾಗಿತ್ತು. ಎರಡು ವರ್ಷಗಳ ಅವಧಿಯಲ್ಲೇ ಡ್ರಗ್ಸ್ ಜಾಲ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ.

ಹೊಸ ವರ್ಷದ ಆಸುಪಾಸಿನಲ್ಲಿ ನಗರಕ್ಕೆ ನೂರಾರು ಕೆ.ಜಿ ಗಾಂಜಾ, ಸಿಂಥೆಟಿಕ್ ಹಾಗೂ ಸೆಮಿ ಸಿಂಥೆಟಿಕ್ ಡ್ರಗ್ಸ್ ಪೂರೈಕೆಯಾಗಿತ್ತು. ಡಿಸೆಂಬರ್‌ನಲ್ಲಿ ಕಾರ್ಯಾಚರಣೆ ನಡೆಸಿದ್ದ ಪೊಲೀಸರು, 9 ವಿದೇಶಿ ಪ್ರಜೆಗಳು ಸೇರಿ 56 ಮಂದಿಯನ್ನು ಬಂಧಿಸಿದ್ದರು. ಅವರಿಂದ 99.85 ಕೆ.ಜಿ ಡ್ರಗ್ಸ್ ಜಪ್ತಿ ಮಾಡಿಕೊಂಡಿದ್ದರು.

ಪೆಡ್ಲರ್‌ಗಳು ಹೊಸ ಹೊಸ ಮಾರ್ಗಗಳನ್ನು ಕಂಡುಕೊಂಡು ಡ್ರಗ್ಸ್ ಅನ್ನು ಗ್ರಾಹಕರಿಗೆ ಪೂರೈಸುತ್ತಿರುವುದು ಕಂಡುಬಂದಿದೆ. ಚೂಡಿದಾರ್, ಚಾಕೊಲೇಟ್, ಸೋಪ್, ಬಿಸ್ಕೆಟ್ ಹಾಗೂ ಇತರೆ ವಸ್ತುಗಳ ಬಾಕ್ಸ್‌ಗಳಲ್ಲಿ ಡ್ರಗ್ಸ್ ಬಚ್ಚಿಟ್ಟು ನಗರಕ್ಕೆ ಸಾಗಿಸಿರುವುದು ಕಳೆದ ವರ್ಷ ಪತ್ತೆಯಾಗಿತ್ತು. ಅಲ್ಲದೇ ವಾಟ್ಸ್‌ಆ್ಯಪ್ ಮೂಲಕ ಗ್ರಾಹಕರನ್ನು ಸಂಪರ್ಕಿಸಿ ಮಾದಕ ವಸ್ತುಗಳನ್ನು ಪೂರೈಸುವ ಜಾಲವೂ ಬೃಹತ್ ಆಗಿ ಬೆಳೆದಿದೆ.

ಮೊಬೈಲ್, ದೂರವಾಣಿ, ಇ–ಮೇಲ್, ಆ್ಯಪ್, ಸಾಮಾಜಿಕ ಮಾಧ್ಯಮಗಳ ಜತೆಗೆ 'ಡಾರ್ಕ್‌ನೆಟ್' ಮೂಲಕ ಡ್ರಗ್ಸ್ ದಂಧೆ ನಡೆಯುತ್ತಿದೆ ಎಂದು ಪೊಲೀಸರು ಹೇಳುತ್ತಾರೆ.


ಬೆಂಗಳೂರಿಗೆ ನೈಸರ್ಗಿಕವಾಗಿ ಬೆಳೆಯುವ ಗಾಂಜಾ, ಅಫೀಮು ಜೊತೆಯಲ್ಲೇ ಇತ್ತೀಚಿನ ದಿನಗಳಲ್ಲಿ 'ಸಿಂಥೆಟಿಕ್' ಡ್ರಗ್ಸ್ ವ್ಯಾಪಕವಾಗಿ ಪೂರೈಕೆಯಾಗುತ್ತಿದೆ ಎಂಬುದನ್ನು ಪೊಲೀಸ್ ಇಲಾಖೆಯ ಅಂಕಿಅಂಶಗಳೇ ಹೇಳುತ್ತಿವೆ.

ಕಳೆದ ವರ್ಷ ಪೊಲೀಸರು 5,252 ಕೆ.ಜಿ ಗಾಂಜಾ ಜಪ್ತಿ ಮಾಡಿಕೊಂಡು, 4,059 ಆರೋಪಿಗಳನ್ನು ಬಂಧಿಸಿದ್ದರು. ಜಪ್ತಿ ಮಾಡಿಕೊಂಡ ಗಾಂಜಾದ ಮೌಲ್ಯವೇ ₹29.62 ಕೋಟಿ ಆಗಿದೆ. ನೈಸರ್ಗಿಕ ಡ್ರಗ್ಸ್ ಜೊತೆಗೆ ರಾಸಾಯನಿಕ ವಸ್ತು ಮಿಶ್ರಣ ಮಾಡಿ ತಯಾರಿಸುವ ಸೆಮಿ ಸಿಂಥೆಟಿಕ್ ಡ್ರಗ್ಸ್ (ಮಾರ್ಫಿನ್, ಹೆರಾಯಿನ್, ಕೊಡೈನ್) ನಗರಕ್ಕೆ ಪೂರೈಕೆ ಆಗುತ್ತಿದೆ. ರಾಸಾಯನಿಕವನ್ನೇ ಬಳಸಿ ಸಿದ್ಧಪಡಿಸಿದ್ದ ಸಿಂಥೆಟಿಕ್ ಡ್ರಗ್ಸ್‌ಗಳಾದ ಎಂಡಿಎಂಎ, ಎಲ್‌ಎಸ್‌ಡಿ ಪೇಪರ್, ಕೆಟಾಮಿನ್, ಕೊಕೇನ್ ಅನ್ನೂ ಕಳೆದ ವರ್ಷ ವಿದೇಶ ಹಾಗೂ ಹೊರ ರಾಜ್ಯಗಳಿಂದ ಪೆಡ್ಲರ್‌ಗಳು ನಗರದ ಗ್ರಾಹಕರಿಗೆ ಪೂರೈಸಿದ್ದಾರೆ. ಇದು ಕಾರ್ಯಾಚರಣೆಯಲ್ಲಿ ಪತ್ತೆಯಾಗಿತ್ತು ಎಂದು ಪೊಲೀಸರು ಹೇಳಿದರು.



ಪೊಲೀಸರು ಜಪ್ತಿ ಮಾಡಿಕೊಂಡಿದ್ದ ಡ್ರಗ್ಸ್

ವರ್ಷವಾರು ವಿವರ



8 ವಿಭಾಗಗಳಲ್ಲೂ ಜಾಗೃತಿ ಜಾಥಾ

ಡ್ರಗ್ಸ್ ಮಾರಾಟ ದಂಧೆಗೆ ಕಡಿವಾಣ ಹಾಕಲು ಮುಂದಾಗಿರುವ ನಗರ ಪೊಲೀಸರು, ಆರಂಭಿಕವಾಗಿ ಡ್ರಗ್ಸ್ ಸೇವನೆ ದುಷ್ಪರಿಣಾಮ ಕುರಿತು ಜಾಗೃತಿ ಮೂಡಿಸಲು ಮುಂದಾಗಿದ್ದಾರೆ. ಈ ಜಾಗೃತಿ ಅಭಿಯಾನಕ್ಕೆ ಚಲನಚಿತ್ರ ನಟ–ನಟಿಯರು ಬೆಂಬಲ ನೀಡುತ್ತಿದ್ದಾರೆ. ಪೂರ್ವ ವಿಭಾಗದಿಂದ ನಡೆದ ಮಾದಕ ವ್ಯಸನ ಮುಕ್ತ ನಡಿಗೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ನಟ ಡಾಲಿ ಧನಂಜಯ್, ನಟಿ ಸಂಜನಾ ಆನಂದ್ ಸಹ ಭಾಗಿಯಾಗಿದ್ದರು.

ಬೆಂಗಳೂರು ಜಿಲ್ಲಾ ಪೊಲೀಸ್ ವತಿಯಿಂದ ನಡೆದ ಡ್ರಗ್ಸ್ ವ್ಯಸನ ಮುಕ್ತ ನಡಿಗೆಯಲ್ಲಿ ನಟಿ ಸಪ್ತಮಿಗೌಡ ಪಾಲ್ಗೊಂಡಿದ್ದರು. ಪಶ್ಚಿಮ ವಲಯದ ವತಿಯಿಂದ ಸೋಮವಾರ ನಡೆದ ನಡಿಗೆಗೆ ನಟ ಗಣೇಶ್ ಚಾಲನೆ ನೀಡಿದರು.

'ಈ ಜಾಗೃತಿ ಅಭಿಯಾನ ಮುಂದುವರಿಯಲಿದೆ. ಇನ್ನೂ ಹಲವು ನಟ–ನಟಿಯರು ಭಾಗಿಯಾಗಲಿದ್ದಾರೆ. ಮೊದಲು ಜಾಗೃತಿ ಮೂಡಿಸುವ ಕೆಲಸ ಮಾಡುತ್ತೇವೆ. ಡ್ರಗ್ಸ್ ಖರೀದಿಸುವುದನ್ನು ಬಿಟ್ಟರೆ ಪೂರೈಕೆ ಸಹ ತಾನಾಗಿಯೇ ಇಳಿಕೆ ಆಗಲಿದೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಡ್ರಗ್ಸ್ ಪೂರೈಕೆ ಪ್ರಮಾಣ

ಮಾದರಿ	ಪ್ರಕರಣ	ಪ್ರಮಾಣ (ಕೆ.ಜಿ)	ಬಂಧಿತರು	ಮೊತ್ತ
ಗಾಂಜಾ	3,114	5,252	4,059	₹29.62 ಕೋಟಿ
ಅಫೀಮು	11	63	13	₹85 ಲಕ್ಷ
ಹ್ಯಾಶಿಶ್ ಆಯಿಲ್	7	11	12	₹9.62 ಕೋಟಿ
ಕೊಕೇನ್	16	2.53	20	₹9.95 ಕೋಟಿ
ಎಂಡಿಎಂಎ, ಎಂಡಿಎಸ್ ಪೌಡರ್–ಮಾತ್ರೆಗಳು	164	55.22	240	₹48.02 ಕೋಟಿ
ಎಲ್‌ಎಸ್‌ಡಿ ಪೇಪರ್	6	870 ಸ್ಟ್ರಿಪ್ಸ್	13	₹48 ಲಕ್ಷ



ಚೆಸ್ ಪಂದ್ಯಾವಳಿಯನ್ನು ವೀಕ್ಷಿಸಿದ ಉಪೇಂದ್ರ ಶೆಟ್ಟಿ ಮತ್ತು ಸುದರ್ಶನ ಚನ್ನಂಗಿಹಳ್ಳಿ

ಮಕ್ಕಳ ಚೆಸ್ ಪಂದ್ಯಾವಳಿ

ಬೆಂಗಳೂರು: ಯುನಿವರ್ಸಲ್ ಫಸ್ಟ್ ಏಜ್ ರಾಜ್ಯಮಟ್ಟದ ಮಕ್ಕಳ ಚೆಸ್ ಪಂದ್ಯಾವಳಿ ಭಾನುವಾರ ನಡೆಯಿತು.

ರಾಮೋಹಳ್ಳಿಯ ಗುರುರಾಯನಪುರದ ಬಳಿ ಇರುವ ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್ ಕಾಲೇಜಿನಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್ ಅಧ್ಯಕ್ಷ ಆರ್. ಉಪೇಂದ್ರ ಶೆಟ್ಟಿ ಮಾತನಾಡಿ 'ಜೂನ್–ಜುಲೈ ತಿಂಗಳಲ್ಲಿ ಅಂತರ-ರಾಷ್ಟ್ರೀಯ ಮಕ್ಕಳ ಚೆಸ್ ಪಂದ್ಯಾವಳಿ ಆಯೋಜಿಸುವ ಉದ್ದೇಶವಿದೆ' ಎಂದು ತಿಳಿಸಿದರು. ಪತ್ರಕರ್ತ ಸುದರ್ಶನ ಚನ್ನಂಗಿಹಳ್ಳಿ ಮಾತನಾಡಿದರು.

ಕರ್ನಾಟಕ ರಾಜ್ಯ ಚೆಸ್ ಸಂಸ್ಥೆಯ ಅರವಿಂದ ಶಾಸ್ತ್ರಿ, ಕೆಡಿಸಿಎ ಸಂಸ್ಥಾಪಕ ಅಧ್ಯಕ್ಷ ಜಯಪಾಲ ಚಂದಾಡಿ, ಜಿಲ್ಲಾ ಚೆಸ್ ಅಸೋಸಿಯೇಷನ್ ಅಧ್ಯಕ್ಷೆ ಸೌಮ್ಯ ಎಂ.ವಿ., ಭಾಗವಹಿಸಿದ್ದರು.

ಮನೆ ಕೆಲಸದವರ ಸೋಗಿನಲ್ಲಿ ಕಳವು

ಚಿನ್ನಾಭರಣ ಕದ್ದ ಮುಂಬೈನ ಮಹಿಳೆಯರಿಬ್ಬರನ್ನು ಬಂಧಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರ ಮನೆ ಕೆಲಸಕ್ಕೆ ಸೇರಿಕೊಂಡ ಮರು ದಿನವೇ ಚಿನ್ನಾಭರಣ ದೋಚಿ ಪರಾರಿಯಾಗಿದ್ದ ಮುಂಬೈನ ಇಬ್ಬರು ಮಹಿಳೆಯರನ್ನು ಬೆಳ್ಳಂದೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ವನಿತಾ (38) ಮತ್ತು ಯಶೋಧಾ (40) ಬಂಧಿತರು. ಆರೋಪಿಗಳಿಂದ 127 ಗ್ರಾಂ ತೂಕದ ಚಿನ್ನದ ಗಟ್ಟಿ ಜಪ್ತಿ ಮಾಡಲಾಗಿದೆ. ಇಬ್ಬರು ಆರೋಪಿಗಳು, ಮನೆ ಕೆಲಸದವರ ಸೋಗಿನಲ್ಲಿ ಚಿನ್ನಾಭರಣ ಕಳವು ಮಾಡಿ ಪರಾರಿ ಆಗುತ್ತಿದ್ದರು.

ಆರೋಪಿಗಳು, ನ.27ರಂದು ಸರ್ಜಾಪುರ ಮುಖ್ಯರಸ್ತೆಯ ದೊಡ್ಡಕನ್ನಹಳ್ಳಿ ಎಸ್‌ಜೆಆರ್ ಪ್ಲಾಜಾ ಸಿಟಿ ಅಪಾರ್ಟ್‌ಮೆಂಟ್ ನಿವಾಸಿ ಶೇಖರ್ ಆನಂದ್ ಎಂಬುವವರ ಮನೆಯಲ್ಲಿ ಕಳವು ಮಾಡಿ ಪರಾರಿ ಆಗಿದ್ದರು. ಈ ಸಂಬಂಧ ದಾಖಲಾದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ, ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಸವಿತಾ ಎಂಬಾಕೆ ತಲೆಮರೆಸಿಕೊಂಡಿದ್ದು, ಬಂಧನಕ್ಕೆ ಬಲೆ ಬೀಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಾಫ್ಟ್‌ವೇರ್ ಎಂಜಿನಿಯರ್ ಶೇಖರ್ ಆನಂದ್ ಅವರು ಪತ್ನಿ ಹಾಗೂ ಮಕ್ಕಳೊಂದಿಗೆ ದೊಡ್ಡಕನ್ನಹಳ್ಳಿಯ ಎಸ್‌ಜೆಆರ್ ಪ್ಲಾಜಾ ಸಿಟಿಯ ಅಪಾರ್ಟ್‌ಮೆಂಟ್‌ನಲ್ಲಿ ನೆಲೆಸಿದ್ದರು. ನ.26ರಂದು ಮಹಿಳೆಯರಿಬ್ಬರನ್ನು ಮನೆ ಕೆಲಸಕ್ಕೆ ಸೇರಿಸಿಕೊಂಡಿದ್ದರು. ಮರುದಿನವೇ ಮನೆಯಲ್ಲಿದ್ದ ಚಿನ್ನಾಭರಣ ಕಸಿದು ಪರಾರಿಯಾಗಿದ್ದರು ಎಂದು ಪೊಲೀಸರು ತಿಳಿಸಿದರು.

'ಇಬ್ಬರು ಮಹಿಳೆಯರು ಅಪರಾಧ ಹಿನ್ನೆಲೆಯುಳ್ಳವರು. ಮುಂಬೈನ ಅಪಾರ್ಟ್‌ಮೆಂಟ್‌ಗಳಲ್ಲಿ ಮನೆಗೆಲಸಕ್ಕೆ ಸೇರಿಕೊಂಡು ಬಳಿಕ ಹೊಂಚು ಹಾಕಿ ನಗದು, ಚಿನ್ನಾಭರಣ ದೋಚಿ ಪರಾರಿ ಆಗುತ್ತಿದ್ದರು. ಇವರ ವಿರುದ್ಧ ಮುಂಬೈನ ವಿವಿಧ ಪೊಲೀಸ್ ಠಾಣೆಗಳಲ್ಲಿ 36 ಮನೆಗಳವು ಪ್ರಕರಣಗಳು ದಾಖಲಾಗಿವೆ. ಆರೋಪಿಗಳು ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್ ಇರುವ ಬಡಾವಣೆಗಳಲ್ಲಿ ಸುತ್ತುತ್ತಾರೆ. ಸೆಕ್ಯೂರಿಟಿ ಗಾರ್ಡ್‌ಗಳನ್ನು ಪರಿಚಯಿಸಿಕೊಂಡು ಮನೆಯಲ್ಲಿ ಕೆಲಸದ ಬಗ್ಗೆ ಮಾಹಿತಿ ಪಡೆಯುತ್ತಿದ್ದರು. ಬಳಿಕ ಮನೆ ಕೆಲಸಕ್ಕೆ ಸೇರಿಕೊಂಡು ಕಳವು ನಡೆಸುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಪಿಜಿಗಳಲ್ಲಿ ವಾಸ್ತವ್ಯ: 'ಇಬ್ಬರು ಆರೋಪಿಗಳು ಅಪಾರ್ಟ್‌ಮೆಂಟ್‌ಗಳಲ್ಲಿ ಮನೆಗೆಲಸ ಗಿಟ್ಟಿಸಿಕೊಂಡು ರಾತ್ರಿ ವೇಳೆ ಪಿ.ಜಿಗಳಲ್ಲಿ ತಂಗುತ್ತಿದ್ದರು. ಚಿನ್ನಾಭರಣ ಕದ್ದ ಮೇಲೆ ಪಿ.ಜಿ ಖಾಲಿ ಮಾಡಿಕೊಂಡು ಮುಂಬೈಗೆ ಪರಾರಿಯಾಗುತ್ತಿದ್ದರು. ಬಳಿಕ, ಕಳವು ಮಾಡಿದ ಚಿನ್ನವನ್ನು ಮಾರಾಟ ಮಾಡಿ ಅದರಿಂದ ಬಂದ ಹಣದಲ್ಲಿ ಮೋಜು–ಮಸ್ತಿ ಮಾಡುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

ಸುದ್ದಿ 2 ನಿಮಿಷ

ಸ್ವಾತಂತ್ರ್ಯ ಪೂರ್ವದಲ್ಲಿ ಬೆಳಗಾವಿ ಮಹಾರಾಷ್ಟ್ರದಲ್ಲಿತ್ತು: ಸಚಿವೆ

ಬೆಳಗಾವಿ: 'ಸ್ವಾತಂತ್ರ್ಯ ಪೂರ್ವದಲ್ಲಿ ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿದ್ದಾಗಲೂ ನಾವೆಲ್ಲ ಅನ್ಯೋನ್ಯತೆಯಿಂದ ಇದ್ದೆವು. ಕರ್ನಾಟಕ ಏಕೀಕರಣದ ಬಳಿಕವೂ ಅನ್ಯೋನ್ಯತೆ ಮುಂದುವರಿದಿದೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರ ಹೇಳಿಕೆ ಕನ್ನಡಿಗರಲ್ಲಿ ಅಸಮಾಧಾನ ಮೂಡಿಸಿದೆ.

ಜಿಲ್ಲೆಯ ನಿಪ್ಪಾಣಿ ತಾಲ್ಲೂಕಿನ ಕಾರದಗಾ ಗ್ರಾಮದಲ್ಲಿ ಭಾನುವಾರ, ಕನ್ನಡ ಬಳಗ ಆಯೋಜಿಸಿದ್ದ ಸಾಹಿತ್ಯ ಸಮ್ಮೇಳನದಲ್ಲಿ ಉದ್ಘಾಟನಾ ಭಾಷಣ ಮಾಡಿದ ಅವರು, 'ಮುಂಬೈ ಪ್ರಾಂತ್ಯ ಎಂದು ಹೇಳುವ ಬದಲು ಮಹಾರಾಷ್ಟ್ರ' ಎಂದು ಹೇಳಿ ವಿವಾದಕ್ಕೆ ಎಡೆ ಮಾಡಿಕೊಟ್ಟರು.

'ಭಾರತಕ್ಕೆ ಎಂಟು ಜ್ಞಾನಪೀಠ ಪ್ರಶಸ್ತಿ ಬಂದಿವೆ. ಅದರಲ್ಲಿ ಎಂಟೂ ಕನ್ನಡಕ್ಕೆ ಬಂದಿದ್ದು ಹೆಮ್ಮೆ ತಂದಿದೆ' ಎಂದು ಸಚಿವೆ ತಪ್ಪಾಗಿ ಹೇಳಿದ್ದು ಕೂಡ ಸಾಮಾಜಿಕ ಜಾಲತಾಣದಲ್ಲಿ ಟೀಕೆಗೆ ಗುರಿಯಾಗಿದೆ.

ಸಚಿವರ ಭಾಷಣದ ವಿಡಿಯೊ ತುಣುಕುಗಳು ಸೋಮವಾರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದವು.

ಈ ಬಗ್ಗೆ ಸ್ಪಷ್ಟನೆ ನೀಡಿದ ಲಕ್ಷ್ಮಿ ಹೆಬ್ಬಾಳಕರ, 'ನಾನು ಹೆಮ್ಮೆಯ ಕನ್ನಡತಿ. ಕನ್ನಡದ ಬಗ್ಗೆ ವಿಶೇಷ ಅಭಿಮಾನ ಹೊಂದಿದವಳು. ಆದರೆ, ನನ್ನ ಮಾತನ್ನು ತಪ್ಪಾಗಿ ಅರ್ಥೈಸಲಾಗುತ್ತಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಬೆಳಗಾವಿ ಮುಂಬೈ ಪ್ರಾಂತ್ಯದಲ್ಲಿತ್ತು. ಆಗಲೂ ನಮ್ಮಲ್ಲಿ ಸಹಬಾಳ್ವೆ ಇತ್ತು, ಈಗಲೂ ಮುಂದುವರಿಯಲಿ ಎಂಬ ಆಶಯ ವ್ಯಕ್ತಪಡಿಸಿದ್ದೇನೆ. ಸ್ವಾತಂತ್ರ್ಯ ಪೂರ್ವದಲ್ಲಿ ಮಹಾರಾಷ್ಟ್ರ ರಾಜ್ಯವೇ ಅಸ್ತಿತ್ವದಲ್ಲಿ ಇರಲಿಲ್ಲ. ಹೀಗಾಗಿ, ನನ್ನ ಹೇಳಿಕೆ ವಿವಾದ ಮಾಡುವ ಪ್ರಶ್ನೆಯೇ ಇಲ್ಲ' ಎಂದು ತಿಳಿಸಿದ್ದಾರೆ.

ಸರ್ಕಾರಿ ಶಾಲೆಗಳ ಏಳಿಗೆಗೆ ಕೊಡುಗೆ ನೀಡಿ: ಮುನಿರಾಜು



ಪೀಣ್ಯ ದಾಸರಹಳ್ಳಿ: 'ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಲಭ್ಯಗಳ ಕೊರತೆ ಆಗಬಾರದು. ಮಕ್ಕಳು ವಿದ್ಯಾಭ್ಯಾಸ ಮಾಡಲು ಉತ್ತಮ ವಾತಾವರಣ ಕಲ್ಪಿಸಬೇಕು' ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಸಿಡೇದಹಳ್ಳಿಯ ಸರ್ಕಾರಿ ಶಾಲೆಗೆ ಎರಡು ಕೊಠಡಿ, ಚಿಕ್ಕ ಬಾಣಾವರ ಸರ್ಕಾರಿ ಉರ್ದು ಶಾಲೆಗೆ ಎರಡು ಕೊಠಡಿ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ, ಅಬ್ಬಿಗೆರೆಯ ಸರ್ಕಾರಿ ಶಾಲೆಯ ಶೌಚಾಲಯ ಕೊಠಡಿಗಳನ್ನು ಉದ್ಘಾಟಿಸಿ ಮಾತನಾಡಿದರು.

'ಕ್ಷೇತ್ರದ ವಿವಿಧ ಕಡೆಗಳಲ್ಲಿರುವ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದ ಕಾರಣ ಕೊಠಡಿಗಳ ಕೊರತೆ ಇದೆ. ಅಂತಹ ಶಾಲೆಗಳಲ್ಲಿ ಕೊಠಡಿಗಳ ನಿರ್ಮಾಣ ಕಾರ್ಯ ನಡೆಯಲಿದೆ. ರೀಚಿಂಗ್ ಹ್ಯಾಂಡ್ಸ್ ಎಂಬ ಸ್ವಯಂ ಸೇವಾ ಸಂಸ್ಥೆಯವರು ಅಬ್ಬಿಗೆರೆ ಶಾಲೆಯಲ್ಲಿ ವಿದ್ಯಾರ್ಥಿನಿಯರಿಗೆ ನಾಲ್ಕು ಶೌಚ ಗೃಹ ನಿರ್ಮಿಸಿಕೊಟ್ಟಿದ್ದರು. ಈಗ ಮತ್ತೆ ನಾಲ್ಕು ಶೌಚ ಗೃಹಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಇಂತಹ ದಾನಿಗಳು ಮುಂದೆ ಬಂದು ಸರ್ಕಾರಿ ಶಾಲೆಗಳ ಏಳಿಗೆಗೆ ಕೊಡುಗೆ ನೀಡಬೇಕು' ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸ್ವಯಂ ಸೇವಾ ಸಂಸ್ಥೆಯ ಮುಖ್ಯಸ್ಥ ಅಬ್ರಾಹಂ, ಚಿಕ್ಕಬಾಣಾವರ ಪುರಸಭೆ ಮುಖ್ಯ ಅಧಿಕಾರಿ ಎಚ್.ಎ.ಕುಮಾರ್, ಬಿಜೆಪಿ ಮುಖಂಡರಾದ ಕಬೀರ್ ಅಹಮದ್, ಬಿ.ಎಂ.ಚಿಕ್ಕಣ್ಣ, ಭಾಗ್ಯಮ್ಮ, ಬಿ.ಲಕ್ಷ್ಮಣ್, ಅಬ್ಬಿಗೆರೆ ಮಂಜಣ್ಣ, ಜನಾರ್ದನ್ ಹಾಜರಿದ್ದರು.

ದ್ವಿಚಕ್ರ ವಾಹನ ಸವಾರನ ಮೇಲೆ ಹರಿದ ಬಿಎಂಟಿಸಿ ಬಸ್

ಪ್ರತ್ಯೇಕ ಅಪಘಾತ: ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪೀಣ್ಯ, ಕೆಂಗೇರಿ, ಆರ್.ಟಿ.ನಗರ, ದೇವನಹಳ್ಳಿ ಹಾಗೂ ಯಶವಂತಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ಅಪಘಾತಗಳಲ್ಲಿ ನಾಲ್ವರು ಮೃತಪಟ್ಟು, ಒಬ್ಬರು ಗಾಯಗೊಂಡಿದ್ದಾರೆ.

ಕೆಂಗೇರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬಿಎಂಟಿಸಿ ಬಸ್‌ನ ಹಿಂಬದಿ ಚಕ್ರ ಹರಿದು ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ತಿಪಟೂರಿನ ತೇಜಸ್(22) ಮೃತ ಬೈಕ್ ಸವಾರ.

ಸೋಮವಾರ ಮಧ್ಯಾಹ್ನ 12.25ರ ಸುಮಾರಿಗೆ ಮೈಸೂರು ರಸ್ತೆ ಕಡೆಯಿಂದ ಉತ್ತರಹಳ್ಳಿ ಕಡೆಗೆ ತೆರಳುತ್ತಿದ್ದ ವೇಳೆ ಮಂತ್ರಿ ಅಲೈನ್ ಅಪಾರ್ಟ್‌ಮೆಂಟ್ ಪ್ರವೇಶದ ದ್ವಾರದ ಬಳಿ ಅಪಘಾತ ಸಂಭವಿಸಿದೆ.

'ತೇಜಸ್ ಅವರು ಕೆಂಗೇರಿಯ ಪಿ.ಜಿ-ಯೊಂದರಲ್ಲಿ ನೆಲೆಸಿದ್ದರು. ಕಂಪ್ಯೂಟರ್ ತರಬೇತಿ ಪಡೆಯುತ್ತಿದ್ದರು. ಮಧ್ಯಾಹ್ನ ಸ್ನೇಹಿತನನ್ನು ಭೇಟಿಯಾಗಲು ಬೈಕ್‌ನಲ್ಲಿ ತೆರಳುತ್ತಿದ್ದರು. ಇದೇ ಸಮಯಕ್ಕೆ ಬಿಎಂಟಿಸಿ ಬಸ್‌ವೊಂದು ಉತ್ತರಹಳ್ಳಿ ಕಡೆಗೆ ಸಂಚರಿಸುತ್ತಿತ್ತು. ಹಿಂದಿನಿಂದ ವೇಗವಾಗಿ ಬಂದ ಬೈಕ್ ಸವಾರ, ಬಸ್ ಅನ್ನು ಹಿಂದಿಕ್ಕಿ ಮುಂದೆ ಸಾಗಲು ಪ್ರಯತ್ನಿಸಿದಾಗ ಆಯತಪ್ಪಿ ಬಿದ್ದರು. ತೇಜಸ್‌ನ ತಲೆಯ ಮೇಲೆ ಬಸ್‌ನ ಬಲಭಾಗದ ಚಕ್ರ ಹರಿದು ಅವರು ಸ್ಥಳದಲ್ಲೇ ಮೃತಪಟ್ಟರು' ಎಂದು ಪೊಲೀಸರು ಹೇಳಿದರು.

ಬಿಎಂಟಿಸಿ ಬಸ್ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ. ಕೆಂಗೇರಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರು ಚಾಲಕ ಸಾವು: ಆರ್.ಟಿ.ನಗರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಾರೊಂದು ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ಚಾಲಕ ಮೃತಪಟ್ಟಿದ್ದಾರೆ.

ಆರ್.ಟಿ.ನಗರದ ರಾಜು(36) ಮೃತ ಕಾರು ಚಾಲಕ. ಭಾನುವಾರ ರಾತ್ರಿ 8 ಗಂಟೆ ಸುಮಾರಿಗೆ ದಿಣ್ಣೂರು ಮುಖ್ಯರಸ್ತೆಯಲ್ಲಿ ಅಪಘಾತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಜು ಅವರು ದಿಣ್ಣೂರು ಮುಖ್ಯ-ರಸ್ತೆಯಲ್ಲಿ ತಮ್ಮ ಕಾರಿನಲ್ಲಿ ತೆರಳುತ್ತಿದ್ದರು. ಆಗ ನಿಯಂತ್ರಣ ತಪ್ಪಿದ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕಾರು ಚಾಲಕ ರಾಜು ಗಂಭೀರವಾಗಿ ಗಾಯಗೊಂಡಿದ್ದರು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಅವರು ಮೃತಪಟ್ಟರು ಎಂದು ಪೊಲೀಸರು ಹೇಳಿದರು.

'ಅತಿವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯೇ ಅಪಘಾತಕ್ಕೆ ಕಾರಣ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ' ಎಂದು ಪೊಲೀಸರು ಹೇಳಿದರು.

ಕಾರ್ಮಿಕ ಸಾವು: ಗೊರಗುಂಟೆಪಾಳ್ಯದ ಜಂಕ್ಷನ್‌ನಲ್ಲಿ ಕ್ಯಾಂಟರ್ ವಾಹನದಿಂದ ಕಾರ್ಮಿಕ ಬಿದ್ದು ಮೃತಪಟ್ಟಿದ್ದಾರೆ.

ರಾಜು ಸರೂಟ್ (20) ಮೃತ ಕಾರ್ಮಿಕ. ಕ್ಯಾಂಟರ್ ವಾಹನಕ್ಕೆ ಸಿಮೆಂಟ್ ಪಂಪ್ ಮಾಡುವ ವಾಹನ ಅಳವಡಿಸಿಕೊಂಡು ತೆರಳುತ್ತಿದ್ದ ವೇಳೆ ದುರಂತ ಸಂಭವಿಸಿದೆ. ಗೊರಗುಂ-ಟೆಪಾಳ್ಯದಲ್ಲಿ ಸಿಗ್ನಲ್ ಬಿದ್ದಿದ್ದರಿಂದ ವಾಹನ ನಿಲುಗಡೆ ಮಾಡಲಾಗಿತ್ತು. ರಾಜು ಸರೂಟ್ ಅವರು ವಾಹನದಿಂದ ಇಳಿದು ಮೂತ್ರ ವಿಸರ್ಜನೆಗೆ ತೆರಳಿದ್ದರು. ಮತ್ತೆ ಬಂದು ವಾಹನವನ್ನು ಏರುವ ಸಂದರ್ಭದಲ್ಲಿ ಚಾಲಕ ನಿರ್ಲಕ್ಷ್ಯದಿಂದ ಚಲಾಯಿಸಿದ. ಆಗ ಕೆಳಕ್ಕೆ ಬಿದ್ದ ಕಾರ್ಮಿಕ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಬೈಕ್ ಸವಾರನಿಗೆ ಗಾಯ

ಹಂಪ್ ದಾಟುವಾಗ ನಿಯಂತ್ರಣ ತಪ್ಪಿ ಬೈಕ್ ರಸ್ತೆಗೆ ಬಿದ್ದ ಪರಿಣಾಮ ಸವಾರ ಗಾಯಗೊಂಡಿದ್ದಾರೆ.

ಪೀಣ್ಯ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಕಿರ್ಲೋಸ್ಕರ್ ಲೇಔಟ್ ನಿವಾಸಿ ಸುನೀಲ್ ಕುಮಾರ್(53) ಗಾಯಗೊಂಡವರು.

ಭಾನುವಾರ ಮಧ್ಯಾಹ್ನ 2.30ರ ಸುಮಾರಿಗೆ ಕಿರ್ಲೋಸ್ಕರ್ ಲೇಔಟ್‌ನಲ್ಲಿ ಈ ಘಟನೆ ನಡೆದಿದೆ. ಘಟನೆಯಲ್ಲಿ ಸವಾರ ಸುನೀಲ್ ಕುಮಾರ್ ತಲೆಗೆ ಪೆಟ್ಟು ಬಿದ್ದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು.

ಪಾದಚಾರಿ ಸಾವು

ದೇವನಹಳ್ಳಿಯಲ್ಲಿ ರಸ್ತೆ ದಾಟುತ್ತಿದ್ದ ಪಾದಾಚಾರಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಬೂದಿಹಾಳ ಗ್ರಾಮದ ನಾರಾಯಣಸ್ವಾಮಿ(60) ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ನಾರಾಯಣಸ್ವಾಮಿ ಅವರು ಬೂದಿಹಾಳ ಗ್ರಾಮದ ಕಡೆಗೆ ಹೋಗಲು ಹೊಸಕೋಟೆ-ದೊಡ್ಡಬಳ್ಳಾಪುರ ರಸ್ತೆ ದಾಟುತ್ತಿದ್ದರು. ಈ ವೇಳೆ ಅತೀವೇಗವಾಗಿ ಬಂದ ಕಾರು ನಾರಾಯಣಸ್ವಾಮಿಗೆ ಡಿಕ್ಕಿ ಹೊಡೆದಿದ್ದು, ಪರಿಣಾಮ ನಾರಾಯಣಸ್ವಾಮಿ ತೀವ್ರ ರಕ್ತಸ್ರಾವವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

'ಘಟನೆ ಬಳಿಕ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ಆರೋಪಿ ಪತ್ತೆ ಕಾರ್ಯ ನಡೆಯುತ್ತಿದೆ' ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಇಂದು

'ಕಾಂಫೆಸ್ಟ್' ಕಾಲೇಜು ವಾರ್ಷಿಕೋತ್ಸವ: ಅಧ್ಯಕ್ಷತೆ: ಎನ್.ಆರ್. ಪಂಡಿತಾರಾಧ್ಯ, ಅತಿಥಿಗಳು: ಜಯರಾಮ್ ರಾಯಪುರ, ಎಚ್. ಡುಂಡಿರಾಜ್, ವೂಡೇ ಪಿ. ಕೃಷ್ಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ, ಸಂಯುಕ್ತ ಪದವಿಪೂರ್ವ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 9.30

'ಭಾರತದಲ್ಲಿ ಪುಷ್ಪ ಕೃಷಿಯಲ್ಲಿನ ಇತ್ತೀಚಿನ ಒಲವು, ಭವಿಷ್ಯದ ನಿರೀಕ್ಷೆಗಳು' ಕುರಿತು ರಾಷ್ಟ್ರೀಯ ಸಮ್ಮೇಳನ: ಉದ್ಘಾಟನೆ: ಟಿ. ಜಾನಕಿರಾಮ್, ಆಯೋಜನೆ ಮತ್ತು ಸ್ಥಳ: ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಹೆಸರಘಟ್ಟ, ಬೆಳಿಗ್ಗೆ 10

'ಶ್ರೀ ಸಿದ್ಧಗಂಗಾ ಸಿರಿ' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಉದ್ಘಾಟನೆ: ಬಿ.ಆರ್. ಪಾಟೀಲ, ಪ್ರಶಸ್ತಿ ಪ್ರದಾನ: ಗೊ.ರು. ಚನ್ನಬಸಪ್ಪ, ಪ್ರಶಸ್ತಿ ಪುರಸ್ಕೃತರು: ಎಲ್. ರೇವಣಸಿದ್ದಯ್ಯ, ಅತಿಥಿ: ಬಿ.ಎಲ್. ಶಂಕರ್, ಅಧ್ಯಕ್ಷತೆ: ಎಸ್. ಮಹಾದೇವಯ್ಯ, ಪ್ರಾಸ್ತಾವಿಕ ನುಡಿ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತಿನ ಆವರಣ, ಕುಮಾರಕೃಪಾ ರಸ್ತೆ, ಸಂಜೆ 5.30



ಸಿದ್ಧಲಿಂಗ ಸ್ವಾಮೀಜಿ

ಎಂ.ಎಸ್. ಮುತ್ತುರಾಜ್ ಅವರ 'ಮಂಗಳವಾದ್ಯ' ಪುಸ್ತಕ ಬಿಡುಗಡೆ: ಸಿದ್ದರಾಮಯ್ಯ, ಅತಿಥಿಗಳು: ಜಿ. ಪರಮೇಶ್ವರ್, ಕೆ.ಎನ್. ರಾಜಣ್ಣ, ಎಚ್. ಎಂ. ರೇವಣ್ಣ, ಎಂ.ಸಿ. ವೇಣುಗೋಪಾಲ್, ಉಪಸ್ಥಿತಿ: ಎನ್. ಸಂಪತ್ ಕುಮಾರ್, ಎಲ್.ಎನ್. ಮುಕುಂದರಾಜ್, ಎಸ್. ಕಿರಣ್ ಕುಮಾರ್, ಎನ್. ವಿ. ನರಸಿಂಹಯ್ಯ, ಆಯೋಜನೆ: ಕರ್ನಾಟಕ ರಾಜ್ಯ ಸವಿತಾ ಸಮಾಜ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

'ಲೀಲಾವತಿ' ಅವರಿಗೆ ಗಾನ ನಮನ: **ಅತಿಥಿಗಳು:** ಆರ್.ಪಿ. ಮೋಹನ್, ವಿನೋದ್ ರಾಜ್, ಕವಿತಾ ಶರ್ಮ ಸಿ., ಅಧ್ಯಕ್ಷತೆ: ನರಸಿಂಹ ನಾಯ್ಕ, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

ಪ್ರವಚನ ವಾಹಿನಿ: 'ಭಗವದ್ಗೀತೆ' ಕುರಿತು ಉಪನ್ಯಾಸ: ಎಲ್.ಎಸ್. ವಾದಿರಾಜಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಟ್ವೆಲ್ಫ್ತ್ ನೈಟ್' ನಾಟಕ ಪ್ರದರ್ಶನ: **ನಿರ್ದೇಶನ:** ದಾಕ್ಷಾಯಿಣಿ ಭಟ್ ಎ., ಆಯೋಜನೆ: ದೃಶ್ಯ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಜರ್ಮನ್ ಸಂಸ್ಥೆಗೆ ನಿರ್ದೇಶಕಿ



ಪ್ರೊ.ಅಂಜನಾ ದೇವಿ

ಮುಡಿಪು (ದಕ್ಷಿಣ ಕನ್ನಡ): ಜರ್ಮನಿಯ ಡ್ರೆಸ್ಡೆನ್‌ನ 'ಇನ್‌ಸ್ಟಿಟ್ಯೂಟ್ ಆಫ್ ಮೆಟೀರಿಯಲ್ಸ್ ಕೆಮಿಸ್ಟ್ರಿ'ಯ ನಿರ್ದೇಶಕರಾಗಿ ಮಂಗಳೂರು ಮೂಲದ ಪ್ರೊ. ಅಂಜನಾದೇವಿ ನೇಮಕಗೊಂಡಿದ್ದಾರೆ.

ಹಿರಿಯ ಡಾಕ್ಟೋರಲ್ ವಿದ್ಯಾರ್ಥಿಗಳಲ್ಲಿ ಜರ್ಮನಿಯಲ್ಲಿ ಇಂಥ ಉನ್ನತ ಹುದ್ದೆಯನ್ನು ಅಲಂಕರಿಸಿರುವವರಲ್ಲಿ ಪ್ರೊ.ಅಂಜನಾದೇವಿ ಅವರು ಮೊದಲನೇಯವರಾಗಿದ್ದಾರೆ ಎಂದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ಶ್ಲಾಘಿಸಿದೆ.

ಇವರು ಮಂಗಳೂರಿನ ದಿ.ಕೆ.ಪಿ.ಭಾಸ್ಕರ ಮತ್ತು ಎಂ.ವಜ್ರಾಕ್ಷಿ ಅವರ ಪುತ್ರಿ.

ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿ ಜಾರಿಗೆ ಚಿಂತನೆ • ಸಂಚಾರ ದಟ್ಟಣೆ ತಪ್ಪಿಸುವ ಪ್ರಯತ್ನ

ಜಿಪಿಎಸ್ ಆಧರಿತ ಟೋಲ್ ವ್ಯವಸ್ಥೆ ಶೀಘ್ರ

ಪ್ರಜಾವಾಣಿ ವಾರ್ತೆ

ರಾಮನಗರ: ರಾಜಧಾನಿ ಬೆಂಗಳೂರು ಮತ್ತು ಸಾಂಸ್ಕೃತಿಕ ನಗರಿ ಮೈಸೂರಿಗೆ ಸಂಪರ್ಕ ಕಲ್ಪಿಸುವ ಬೆಂಗಳೂರು–ಮೈಸೂರು ಹೆದ್ದಾರಿ 275ರಲ್ಲಿ ಸಂಚರಿಸುವ ವಾಹನ ಸವಾರರು ಇನ್ನು ಮುಂದೆ ಹೆದ್ದಾರಿಯಲ್ಲಿ ಎಷ್ಟು ದೂರ ಸಂಚರಿಸುತ್ತಾರೊ ಅಷ್ಟು ದೂರಕ್ಕಷ್ಟೇ ಟೋಲ್ ಪಾವತಿಸುವ ವ್ಯವಸ್ಥೆ ಸದ್ಯದಲ್ಲೇ ಜಾರಿಗೆ ಬರಲಿದೆ.

ಹೆದ್ದಾರಿಯಲ್ಲಿ ಜಿಪಿಎಸ್ ತಂತ್ರಜ್ಞಾನ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆ ಜಾರಿಗೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಮುಂದಾಗಿದೆ. ಹೆದ್ದಾರಿಗಳಲ್ಲಿ ಟೋಲ್ ಸಂಗ್ರಹ ವ್ಯವಸ್ಥೆಯಲ್ಲಿ ಸುಧಾರಣೆ ಜೊತೆಗೆ ಸಂಚಾರ ದಟ್ಟಣೆ ತಪ್ಪಿಸುವ ನಿಟ್ಟಿನಲ್ಲಿ ಸಚಿವಾಲಯ ಇಂತಹದ್ದೊಂದು ಹೆಜ್ಜೆ ಇಟ್ಟಿದೆ.



ರಾಮನಗರ ಜಿಲ್ಲೆಯ ಬಿಡದಿ ಸಮೀಪದ ಶೇಷಗಿರಿಹಳ್ಳಿಯಲ್ಲಿರುವ ಬೆಂಗಳೂರು ಮೈಸೂರು ಹೆದ್ದಾರಿಯ ಟೋಲ್ ಪ್ಲಾಜಾ

ಜಿಪಿಎಸ್ ಸಾಧನ ಕಡ್ಡಾಯ: 'ಹೊಸ ವ್ಯವಸ್ಥೆಯು ಈ ವರ್ಷದಿಂದಲೇ ಪ್ರಾಯೋಗಿಕವಾಗಿ ಹೆದ್ದಾರಿಯಲ್ಲಿ ಜಾರಿಗೆ ಬರಲಿದೆ. ಇದಕ್ಕಾಗಿ, ಉಪಗ್ರಹದೊಂದಿಗೆ ಸಂಪರ್ಕ ಹೊಂದಿರುವ ಜಿಪಿಎಸ್ ಸಾಧನವನ್ನು ಸವಾರರು ಕಡ್ಡಾಯವಾಗಿ ತಮ್ಮ ವಾಹನಗಳಿಗೆ ಅಳವಡಿಸಿಕೊಳ್ಳಬೇಕು' ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮೂಲಗಳು ತಿಳಿಸಿವೆ.

'ಜಿಪಿಎಸ್ ಸಾಧನದಿಂದ ವಾಹನದ ಹೆದ್ದಾರಿ ಪ್ರವೇಶ ಮತ್ತು ನಿರ್ಗಮನವು ಸ್ಥಳದ ಮಾಹಿತಿ ಸಮೇತ ದಾಖಲಾಗಲಿದ್ದು, ಸಂಚಾರದ ಅಂತರಕ್ಕೆ ಅನುಗುಣವಾಗಿ ವಾಹನದ ಮಾಲೀಕನ ಬ್ಯಾಂಕ್ ಖಾತೆಯಿಂದ ಟೋಲ್ ಕಡಿತವಾಗಲಿದೆ. ಇದರಿಂದಾಗಿ ಕಡಿಮೆ ದೂರ ಸಂಚರಿಸುವ ಸವಾರರು ಹೆಚ್ಚು ಟೋಲ್ ಪಾವತಿಸುವ ವ್ಯವಸ್ಥೆ ಕೊನೆಯಾಗಲಿದೆ' ಎಂದು ಮೂಲಗಳು ಹೇಳಿವೆ.

ಮೂರು ವರ್ಷಗಳ ಹಿಂದೆ ಟೋಲ್ ಪ್ಲಾಜಾಗಳಲ್ಲಿ ವಾಹನಗಳ ಕಾಯುವಿಕೆಯ ಅವಧಿ ಎಂಟು ನಿಮಿಷ ಇತ್ತು. ಫಾಸ್ಟ್ಯಾಗ್ ಜಾರಿಗೆ ಬಂದ ನಂತರ ಅದು 48 ಸೆಕೆಂಡ್‌ಗೆ ಇಳಿದಿತ್ತು. ಆದರೂ, ಹಬ್ಬ ಮತ್ತು ವಾರಾಂತ್ಯದಲ್ಲಿ ಟೋಲ್ ಪ್ಲಾಜಾಗಳಲ್ಲಿ ವಾಹನಗಳ ದಟ್ಟಣೆ ಸಾಮಾನ್ಯವಾಗಿದೆ. ಹೊಸ ವ್ಯವಸ್ಥೆಯಿಂದ ದಟ್ಟನೆ ತಪ್ಪಲಿದೆ.

ದೇಶದ ಹೆದ್ದಾರಿಗಳಲ್ಲಿ ಜಿಪಿಎಸ್ ಆಧರಿಸಿ ಟೋಲ್ ಸಂಗ್ರಹಿಸುವ ವ್ಯವಸ್ಥೆ ಜಾರಿಗೆ ತರುವ ಕುರಿತು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಇದೇ ಡಿಸೆಂಬರ್‌ನಲ್ಲಿ ಸುಳಿವು ನೀಡಿದ್ದರು.

'ಅಧಿಕೃತ ಆದೇಶ ಬಂದಿಲ್ಲ'

'ಹೆದ್ದಾರಿಗಳಲ್ಲಿ ಜಿಪಿಎಸ್ ತಂತ್ರಜ್ಞಾನ ಆಧರಿಸಿ ಟೋಲ್ ಸಂಗ್ರಹಿಸುವ ಬಗ್ಗೆ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಪ್ರಸ್ತಾಪ ಮಾಡಿದ್ದರು. ಆದರೆ, ಬೆಂಗಳೂರು–ಮೈಸೂರು ಟೋಲ್ ಪ್ಲಾಜಾದಲ್ಲಿ ಹೊಸ ವ್ಯವಸ್ಥೆ ಜಾರಿ ಕುರಿತು ನಮಗೆ ಇದುವರೆಗೂ ಯಾವುದೇ ಅಧಿಕೃತ ಆದೇಶ ಅಥವಾ ಸೂಚನೆ ಬಂದಿಲ್ಲ. ಕೇಂದ್ರೀಕೃತ ವ್ಯವಸ್ಥೆ ಮೂಲಕ ಇದನ್ನು ನಿರ್ವಹಿಸುವ ಸಾಧ್ಯತೆ ಇದೆ' ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಬೆಂಗಳೂರು–ಮೈಸೂರು ಹೆದ್ದಾರಿಯ ಯೋಜನಾ ನಿರ್ದೇಶಕರ ಕಚೇರಿ ಮೂಲಗಳು ತಿಳಿಸಿವೆ.

27ರಿಂದ ಗವಿಮಠದ ಜಾತ್ರೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಪ್ರತಿ ವರ್ಷ ಲಕ್ಷಾಂತರ ಭಕ್ತರು ಕಣ್ತುಂಬಿಕೊಳ್ಳುವ ಇಲ್ಲಿನ ಪ್ರಸಿದ್ಧ ಗವಿಮಠದ ಜಾತ್ರಾ ಮಹೋತ್ಸವ ಇದೇ 27ರಿಂದ ಮೂರು ದಿನಗಳ ಕಾಲ ನಡೆಯಲಿದೆ. ಮೈಸೂರಿನ ಸುತ್ತೂರು ಕ್ಷೇತ್ರದ ವೀರಸಿಂಹಾಸನ ಮಹಾಸಂಸ್ಥಾನ ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಜಾತ್ರೆಗೆ ಚಾಲನೆ ನೀಡುವರು.

ಅಂದು ಸಂಜೆ 6 ಗಂಟೆಗೆ ಗವಿಮಠದ ಮುಂಭಾಗದಲ್ಲಿರುವ ಕೈಲಾಸ ಮಂಟಪದಲ್ಲಿ ಜಾತ್ರೆಯ ಮಹಾರಥೋತ್ಸವಕ್ಕೆ ಚಾಲನೆ ಲಭಿಸಲಿದೆ. ಜಮಖಂಡಿಯ ಓಲೇಮಠದ ಅಭಿನವ ಕುಮಾರ ಚನ್ನಬಸವ ಸ್ವಾಮೀಜಿ ಹಾಗೂ ಕೊಪ್ಪಳ ತಾಲ್ಲೂಕಿನ ಹಿರೇಸಿಂಧೋಗಿಯ ಕಪ್ಪತ್ತೇಶ್ವರ ಮಠದ ಚಿದಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ ಎಂದು ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಸೋಮವಾರ ತಿಳಿಸಿದ್ದಾರೆ.

ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್, ಚಂದ್ರಯಾನ್–3 ಯೋಜನಾ ನಿರ್ದೇಶಕ ಪಿ. ವೀರಮುತ್ತುವೇಲ್, ಬೆಂಗಳೂರಿನ ಅದಮ್ಯ ಚೇತನ ಫೌಂಡೇಷನ್ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ ಪಾಲ್ಗೊಳ್ಳುವರು.

ಫ್ರಾನ್ಸ್ ಪ್ರಧಾನಿ ರಾಜೀನಾಮೆ

ಪ್ಯಾರಿಸ್ (ಎಎಫ್‌ಪಿ): ಫ್ರಾನ್ಸ್‌ನ ಪ್ರಧಾನಮಂತ್ರಿ ಎಲಿಜಬೆತ್ ಬೋರ್ನ್ ಸೋಮವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರು ಸಂಪುಟ ಪುನರ್‌ರಚನೆಗೆ ಚಾಲನೆ ನೀಡಿರುವ ಹಿನ್ನೆಲೆಯಲ್ಲಿ ಈ ಕ್ರಮಕ್ಕೆ ಮುಂದಾದರು.

ಬೋರ್ನ್ ಅವರ ರಾಜೀನಾಮೆಯನ್ನು ಅಂಗೀಕರಿಸಲಾಗಿದೆ ಎಂದು ಅಧ್ಯಕ್ಷರ ಕಚೇರಿಯು ಹೇಳಿಕೆಯಲ್ಲಿ ತಿಳಿಸಿದೆ. ಪ್ರಧಾನಿ ಸ್ಥಾನಕ್ಕೆ ಕಸರತ್ತು ನಡೆದಿದೆ. ಶಿಕ್ಷಣ ಸಚಿವರಾಗಿದ್ದ, 34 ವರ್ಷದ ಗೇಬ್ರಿಯಲ್ ಅಟ್ಟಲ್ ಈ ಸ್ಥಾನಕ್ಕೇರುವ ಸಾಧ್ಯತೆಗಳಿವೆ.



ಮೋಡ ಮುಸುಕಿದ ವಾತಾವರಣದಲ್ಲಿ ತುಂತುರು ಮಳೆಯ ಸಿಂಚನದಲ್ಲಿ ವಿಧಾನಸೌಧವು ವಿಶಿಷ್ಟವಾಗಿ ಕಂಡಿತು

– ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ನಗರದಲ್ಲಿ ಸಾಧಾರಣ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಸೋಮವಾರ ಮಧ್ಯಾಹ್ನದ ಬಳಿಕ ಸಾಧಾರಣ ಮಳೆಯಾಗಿದೆ.

ಸಂಜೆ ಮತ್ತು ರಾತ್ರಿ ವೇಳೆಗೆ ಮಳೆಯ ಜೊತೆ ಶೀತಗಾಳಿಯೂ ಜೊತೆಯಾಗಿತ್ತು.

ಬೆಳಿಗ್ಗೆಯಿಂದಲೂ ಮೋಡ ಕವಿದ ವಾತಾವರಣ ಇತ್ತು. ಮಧ್ಯಾಹ್ನ 2 ಗಂಟೆ ನಂತರ ಅಲ್ಲಲ್ಲಿ ಮಳೆಯಾಯಿತು.

ಪೀಣ್ಯ, ದಾಸರಹಳ್ಳಿ, ಮುನೇಶ್ವರ ಬಡಾವಣೆ, ಎಚ್‌ಎಂಟಿ ಲೇಔಟ್, ಜಾಲಹಳ್ಳಿ, ಯಶವಂತಪುರ, ಸುಬ್ರಹ್ಮಣ್ಯನಗರ, ಮಲ್ಲೇಶ್ವರ, ವಿಜಯನಗರ, ಹಂಪಿನಗರ, ಕೆಆರ್ ಮಾರುಕಟ್ಟೆ, ಚಂದ್ರಾಲೇಔಟ್, ಕೆಂಗೇರಿ, ಬಸವನ ಗುಡಿ, ಬನಶಂಕರಿ, ಎಂ.ಜಿ. ರಸ್ತೆ ಸುತ್ತಮುತ್ತ ಸೇರಿದಂತೆ ನಗರದ ಹಲವು ಕಡೆ ಸಂಜೆ ಮಳೆಯಾಗಿದೆ.

ಕೆಆರ್‌ಎಸ್ ಸುತ್ತಮುತ್ತ ಗಣಿಗಾರಿಕೆ ನಿಷೇಧ

20 ಕಿಲೋ ಮೀಟರ್ ವ್ಯಾಪ್ತಿ ಪ್ರದೇಶದಲ್ಲಿ ಚಟುವಟಿಕೆಗಳಿಗೆ ನಿರ್ಬಂಧ: ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ ಜಿಲ್ಲೆಯ ಕೃಷ್ಣರಾಜ ಸಾಗರ ಜಲಾಶಯಕ್ಕೆ (ಕೆಆರ್‌ಎಸ್) ಅಪಾಯವಿದೆ' ಎಂಬ ಅಂಶವನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್, ಕೆಆರ್‌ಎಸ್ ಸುತ್ತಲಿನ 20 ಕಿಲೋ ಮೀಟರ್ ವ್ಯಾಪ್ತಿ ಪ್ರದೇಶದಲ್ಲಿರುವ ಎಲ್ಲಾ ರೀತಿಯ ಗಣಿಗಾರಿಕೆ ಚಟುವಟಿಕೆಗಳಿಗೆ ನಿರ್ಬಂಧ ವಿಧಿಸಿದೆ.

ಗಣಿಗಾರಿಕೆ ಪರವಾನಗಿ ನೀಡುವಾಗ ಜಿಲ್ಲಾಧಿಕಾರಿ ಭೂ ಪರಿವರ್ತನೆಗೆ ವಿಧಿಸಿದ್ದ ಷರತ್ತನ್ನು ಪ್ರಶ್ನಿಸಿ ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಸಿ.ಜಿ. ಕುಮಾರ್ ಸಲ್ಲಿಸಿರುವ ಅರ್ಜಿಯನ್ನು ಸೋಮವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠವು ಈ ಕುರಿತಂತೆ ಮಹತ್ವದ ಆದೇಶ ಹೊರಡಿಸಿದೆ.



'ಕೆಆರ್‌ಎಸ್ ಜಲಾಶಯ ಸಂರಕ್ಷಣೆಗೆ ಸರಿಯಾದ ಪ್ರಯತ್ನಗಳು ನಡೆಯುತ್ತಿಲ್ಲ. ಹಾಗಾಗಿ, ಧನಬಾದ್‌ನಲ್ಲಿರುವ ಕೇಂದ್ರೀಯ ಗಣಿ ಮತ್ತು ಇಂಧನ ಸಂಶೋಧನಾ ಸಂಸ್ಥೆಯಿಂದ ಜಲಾಶಯ ಮತ್ತು ಸುತ್ತಲಿನ ಭಾಗದಲ್ಲಿ ಗಣಿಗಾರಿಕೆ ಚಟುವಟಿಕೆ ನಡೆಸುತ್ತಿರುವ ಕುರಿತಂತೆ ವೈಜ್ಞಾನಿಕ ಸಮೀಕ್ಷೆ ನಡೆಸುವ ಅಗತ್ಯವಿದೆ' ಎಂದು ನ್ಯಾಯಪೀಠ ತೀರ್ಮಾನಿಸಿದೆ.

'ಕೇಂದ್ರೀಯ ಗಣಿ ಮತ್ತು ಇಂಧನ ಸಂಶೋಧನಾ ಸಂಸ್ಥೆಯಿಂದ ಸಮೀಕ್ಷೆ ನಡೆದು ವರದಿ ಪಡೆಯಲು ಆರು ತಿಂಗಳು ಸಮಯಬೇಕಿದೆ ಎಂಬುದಾಗಿ ಸರ್ಕಾರ ಹೇಳಿದೆ. ಆದ್ದರಿಂದ, ಸಮೀಕ್ಷೆ ನಡೆಸಿ ವರದಿಗೆ ಸಲ್ಲಿಕೆಯಾಗುವರೆಗೂ ಹಾಗೂ ನ್ಯಾಯಾಲಯದ ಮುಂದಿನ ಆದೇಶದವರೆಗೂ ಕೆಆರ್‌ಎಸ್ ಸುತ್ತಲಿನ 20 ಕಿ.ಮೀ ವ್ಯಾಪ್ತಿಯಲ್ಲಿ ಎಲ್ಲಾ ರೀತಿಯ ಗಣಿಗಾರಿಕೆ ಚಟುವಟಿಕೆಗಳಿಗೆ ನಿರ್ಬಂಧ ವಿಧಿಸಲಾಗುತ್ತಿದೆ' ಎಂದು ಆದೇಶದಲ್ಲಿ ತಿಳಿಸಿದೆ.

ಪ್ರಕರಣವೇನು?: ಪಾಂಡವಪುರ ತಾಲ್ಲೂಕಿನ ಹೊಂಗನಹಳ್ಳಿ ವ್ಯಾಪ್ತಿಯಲ್ಲಿನ 120 ಎಕರೆ ಭೂ ಪರಿವರ್ತನೆಗೆ ಜಿಲ್ಲಾಧಿಕಾರಿ ಷರತ್ತು ವಿಧಿಸಿರುವುದನ್ನು ಚಿನಕುರಳಿ ಗ್ರಾಮದ ಸಿ. ಜಿ.ಕುಮಾರ್ ಪ್ರಶ್ನಿಸಿದ್ದಾರೆ. ಕಾವೇರಿ ನೀರಾವರಿ ನಿಗಮವು ಪರೀಕ್ಷಾರ್ಥ ಸ್ಫೋಟ ನಡೆಸಿತ್ತು. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಯು 2023ರ ಮೇ 15ರಂದು ಪರವಾನಗಿ ನೀಡಲು ಷರತ್ತು ವಿಧಿಸಿದ್ದರು.

ಮುಖ್ಯಾಂಶಗಳು

- ಗಣಿಗಾರಿಕೆ ನಡೆಸಿದರೆ ಜಲಾಶಯಕ್ಕೆ ಗಂಭೀರ ಪರಿಣಾಮ
- ವೈಜ್ಞಾನಿಕ ಸಮೀಕ್ಷೆಗೆ ಆರು ತಿಂಗಳ ನಿರೀಕ್ಷೆ

'ಇತಿಹಾಸ–ಪರಂಪರೆಯ ಪ್ರತೀಕ'

'ಕೆಆರ್‌ಎಸ್ ಕೇವಲ ಜಲಾಶಯವಲ್ಲ. ರಾಜ್ಯದ ಇತಿಹಾಸ ಹಾಗೂ ಪರಂಪರೆಯ ಪ್ರತೀಕ. ಜಲಾಶಯ ನಿರ್ಮಾಣಕ್ಕೆ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ್ ಒಡೆಯರ್ ಮತ್ತು ದೇಶದ ಹೆಮ್ಮೆಯ ಪುತ್ರ ಸರ್.ಎಂ.ವಿಶ್ವೇಶ್ವರಯ್ಯ ಅವರ ಕೊಡುಗೆಯಿದೆ. ವಿಶ್ವೇಶ್ವರಯ್ಯ ಬಹುದೊಡ್ಡ ದೂರದೃಷ್ಟಿ ಹೊಂದಿದ್ದ ವ್ಯಕ್ತಿ. ಅವರ ಕಲ್ಪನೆಯಲ್ಲಿ ಕೆಆರ್‌ಎಸ್ ನಿರ್ಮಾಣವಾಗಿದೆ'ಎಂದು ನ್ಯಾಯಪೀಠ ಹೇಳಿದೆ.

'ರಾಜ್ಯದ ಜನರು ತಮ್ಮ ರಕ್ತ ಹಾಗೂ ಬೆವರು ಹರಿಸಿ ಕೆಆರ್‌ಎಸ್ ನಿರ್ಮಾಣ ಮಾಡಿದ್ದಾರೆ. ಇದರ ಸುತ್ತ ಗಣಿಗಾರಿಕೆ ನಡೆದರೆ, ಆದ್ದರಿಂದ ಕೇವಲ ಜಲಾಶಯಕ್ಕೆ ಅಪಾಯ ಒದಗುವುದಿಲ್ಲ. ಇದರಿಂದ ಇಡೀ ನಾಡಿಗೆ ದುರಂತ ಮತ್ತು ಗಂಭೀರ ಆಪತ್ತು ಎದುರಾಗಬಹುದು' ಎಂದು ಆತಂಕ ವ್ಯಕ್ತಪಡಿಸಿದೆ.

'ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳು ಕಾವೇರಿ ನೀರಿಗೆ ಹೋರಾಡುತ್ತಿವೆ. ಇದರಿಂದ ಕೆಆರ್‌ಎಸ್ ಸುರಕ್ಷತೆ ಅತ್ಯಂತ ಮಹತ್ವದ ವಿಚಾರವಾಗಿದ್ದು, ಅದಕ್ಕೆ ಧಕ್ಕೆಯಾಗುವ ಯಾವುದೇ ಚಟುವಟಿಕೆಗೆ ಅವಕಾಶವಿಲ್ಲ' ಎಂದು ಆದೇಶದಲ್ಲಿ ಉಲ್ಲೇಖಿಸಿದೆ.



ತಳ್ಳುಗಾಡಿಯಲ್ಲಿ ಹೂಜಿ!

ನಗರದ ಲಾಲ್‌ಬಾಗ್ ಹತ್ತಿರ ಕೆಂಗಲ್ ಹನುಮಂತಯ್ಯ ವೃತ್ತದ ಬಳಿ ನಿರ್ಮಿಸಿರುವ ದೊಡ್ಡ ಹೂಜಿ ಪ್ರತಿಕೃತಿಯ ಎದುರು ಒಬ್ಬರು ಕೈಗಾಡಿಯನ್ನು ತಳ್ಳಿಕೊಂಡು ಹೋಗುತ್ತಿರುವ ದೃಶ್ಯವಿದು. ಆದರೆ, ಗಾಡಿಯನ್ನು ತಳ್ಳುತ್ತಿರುವ ಶೈಲಿಯೊಂದಿಗೆ ಚಿತ್ರ ಗಮನಿಸಿದರೆ, ಗಾಡಿಯ ಮೇಲೆಯೇ ಹೂಜಿ ಇದ್ದಂತೆ ಭಾಸವಾಗುತ್ತದೆ ಅಲ್ಲವಾ?

–ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಖಿದ್ಮಾ ಕಾವ್ಯಾಮೃತ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸುವರ್ಣ ಮಹೋತ್ಸವ ಪ್ರಯುಕ್ತ ಖಿದ್ಮಾ ಫೌಂಡೇಶನ್ ಕರ್ನಾಟಕ ಮತ್ತು ಜಯನಗರದ ವಿಜಯ ಕಾಲೇಜು ಸಹಯೋಗದಲ್ಲಿ ರಾಜ್ಯ ಮಟ್ಟದ ಖಿದ್ಮಾ ಕಾವ್ಯಾಮೃತ ಕಾರ್ಯಕ್ರಮ ವಿಜಯ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಯಿತು.

ವಿಜಯ ಕಾಲೇಜು ಪ್ರಾಂಶುಪಾಲರಾದ ಡಿ.ಆರ್. ಸುಧಾ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕವಿ ಯೂಸುಫ್ ಎಚ್.ಬಿ. ಅಧ್ಯಕ್ಷತೆ ವಹಿಸಿದ್ದರು.

ಶಿಕ್ಷಕಿ ಅಶ್ವಿನಿ ಎಸ್. ಅಂಗಡಿ ಅಧ್ಯಕ್ಷತೆಯಲ್ಲಿ ನಡೆದ ಕವಿಗೋಷ್ಠಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಯ್ಕೆಯಾದ ಕವಿಗಳು ಸ್ವರಚಿತ ಕವನವನ್ನು ವಾಚನ ಮಾಡಿದರು.



ಖಿದ್ಮಾ ಫೌಂಡೇಶನ್ ಹಮ್ಮಿಕೊಂಡಿದ್ದ ಕಾವ್ಯಾಮೃತ ಕವಿಗೋಷ್ಠಿಯಲ್ಲಿ ತ್ರಿಶ ತಂಗಮ್ಮ ಕವನ ವಾಚಿಸಿದರು

ಕರ್ನಾಟಕ ಸುವರ್ಣ ಮಹೋತ್ಸವದ ಪ್ರಯುಕ್ತ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹತ್ತು ಸಾಧಕರಿಗೆ ಖಿದ್ಮಾ ಸೇವಾರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಸಾಮಾಜಿಕ ಹೋರಾಟಗಾರ ಬಿ.ಎನ್. ಸುರೇಶ್‌ಬಾಬು ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭ ನಡೆಯಿತು.

ಖಿದ್ಮಾ ಫೌಂಡೇಶನ್ ಪ್ರಧಾನ ಕಾರ್ಯದರ್ಶಿ ಅಮಿತಾ ಅಶೋಕ್ ಪ್ರಸಾದ್, ರಶ್ಮಿತಾ ಸುರೇಶ್ ಜೋಗಿಬೆಟ್ಟು, ಆಯೋಜಕ ಅಮಿರ್ ಬನ್ನೂರು ಉಪಸ್ಥಿತರಿದ್ದರು.

ಡಿಸಿಎಂ ಹುದ್ದೆ ಆಕಾಂಕ್ಷಿಗಳಿಂದ ಸುರ್ಜೇವಾಲ ಭೇಟಿ– ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಸೋಮವಾರ ರಾತ್ರಿ ಸಚಿವರಾದ ಜಿ. ಪರಮೇಶ್ವರ, ಕೆ.ಎಚ್. ಮುನಿಯಪ್ಪ. ಸತೀಶ ಜಾರಕಿಹೊಳಿ, ಎಂ.ಬಿ. ಪಾಟೀಲ, ಕೆ. ಎನ್. ರಾಜಣ್ಣ ಭೇಟಿ ಮಾಡಿ ಮಾತುಕತೆ ನಡೆಸಿದರು.

ಲೋಕಸಭೆ ಚುನಾವಣೆಗೂ ಮೊದಲು ಸಮುದಾಯವಾರು ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಸಬೇಕೆಂಬ ಬೇಡಿಕೆ ಬಲಗೊಳ್ಳುತ್ತಿರುವ ಬೆನ್ನಲ್ಲೇ, ಉಪ ಮುಖ್ಯಮಂತ್ರಿ ಹುದ್ದೆಯ ಮೇಲೆ ಕಣ್ಣಿಟ್ಟಿರುವ ಈ ಎಲ್ಲ ಸಚಿವರ ಭೇಟಿ ಕುತೂಹಲ ಮೂಡಿಸಿದೆ.

ತಾಜ್ ವೆಸ್ಟೆಂಡ್ ಹೋಟಲ್‌ನಲ್ಲಿ ವಾಸ್ತವ್ಯ ಹೂಡಿರುವ ಸುರ್ಜೇವಾಲ ಅವರನ್ನು ಸಚಿವರು ಭೇಟಿ ಮಾಡಿ, ಸಮುದಾಯವಾರು ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಸಬೇಕಾದ ಅಗತ್ಯದ ಬಗ್ಗೆ ಮನವರಿಕೆ ಮಾಡಿದರು ಎಂದು ಗೊತ್ತಾಗಿದೆ.

ಇತ್ತೀಚೆಗೆ ರಾತ್ರಿ ಭೋಜನ ಕೂಟದ ನೆಪದಲ್ಲಿ ಜಿ. ಪರಮೇಶ್ವರ, ಸತೀಶ ಜಾರಕಿಹೊಳಿ, ಎಚ್‌.ಸಿ. ಮಹದೇವಪ್ಪ, ದಿನೇಶ್ ಗುಂಡೂರಾವ್, ಕೆ.ಎನ್. ರಾಜಣ್ಣ ಸಮಾಲೋಚನೆ ನಡೆಸಿದ್ದರು. ಈ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿ ಸೃಷ್ಟಿಯ ಬಗ್ಗೆ ಚರ್ಚೆ ನಡೆದಿತ್ತು.

ಜಿ. ಪರಮೇಶ್ವರ ಅವರು ಸುರ್ಜೇವಾಲ ಅವರನ್ನು ಭೇಟಿ ಮಾಡಿದ ಬಳಿಕ ಕೆ.ಎಚ್. ಮುನಿಯಪ್ಪ ಬಂದರು. ಇತ್ತೀಚೆಗೆ ನಡೆದ ರಹಸ್ಯ ಸಭೆಯ ಚರ್ಚೆಯ ವಿಷಯವನ್ನು ಸುರ್ಜೇವಾಲ ಜೊತೆ ಈ ನಾಯಕರು ಹಂಚಿಕೊಂಡಿದ್ದಾರೆ ಎಂದೂ ಗೊತ್ತಾಗಿದೆ.

ಶೂದ್ರ ಶ್ರೀನಿವಾಸ್ ಬದುಕು ಬರಹ, ಪ್ರಶಸ್ತಿ ಪ್ರದಾನ ಕಾರ್ಯಕ್ರಮ

'ಸಾಹಿತ್ಯ ಚಳವಳಿಗಳ ಸಾಕ್ಷಿ ಶೂದ್ರ ಪತ್ರಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶೂದ್ರ ಸಾಹಿತ್ಯ ಪತ್ರಿಕೆ ನವ್ಯ ಸಾಹಿತ್ಯದ ನಂತರ ಜನ್ಮ ತಾಳಿದ ಎಲ್ಲ ಚಳವಳಿಗಳಿಗೂ ವೇದಿಕೆ ಕಲ್ಪಿಸಿದೆ' ಎಂದು ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ಹೇಳಿದರು

ಶೂದ್ರ ಸಾಹಿತ್ಯ ಪತ್ರಿಕೆಯ 50 ವರ್ಷಗಳ ನೆನಪಿನ ಅಂಗವಾಗಿ ನೆಲದ ಮಾತು ಪ್ರತಿಷ್ಠಾನ ಭಾನುವಾರ ಆಯೋಜಿಸಿದ್ದ ಎಚ್. ದಂಡಪ್ಪ ಅವರು ಸಂಪಾದಿಸಿದ 'ಶೂದ್ರ ಶ್ರೀನಿವಾಸ್ ಬದುಕು ಬರಹ' ಪುಸ್ತಕ ಬಿಡುಗಡೆ, 'ಪ್ರಶಸ್ತಿ ಪ್ರದಾನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಶೂದ್ರ ಸಾಹಿತ್ಯ ಪತ್ರಿಕೆ ಚಳವಳಿಗಳ ತಾತ್ವಿಕ ನಿಲುವುಗಳನ್ನು ಬೆಳೆಸಿತು. ಕನ್ನಡ ಸಾಹಿತ್ಯ ಲೋಕವನ್ನು ಜಾಗೃತವಾಗಿ ಇರಿಸುವಲ್ಲಿಯೂ ಅದು ಪ್ರಮುಖ ಪಾತ್ರವಹಿಸಿದೆ. ಜೊತೆಗೆ ಶೂದ್ರ ಶ್ರೀನಿವಾಸ್ ಅವರು ನಾಡಿನ ಪ್ರಜ್ಞಾವಂತ ಸಾಹಿತಿಗಳಿಂದ ಲೇಖನಗಳನ್ನು ಬರೆಯಿಸಿ ಪತ್ರಿಕೆಯನ್ನು ಮುನ್ನಡೆಸಿರುವುದು ಬಹಳ ವಿಶೇಷವಾಗಿದೆ' ಎಂದರು.



ನೆಲದ ಮಾತು ಪ್ರತಿಷ್ಠಾನ ಆಯೋಜಿಸಿದ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಎಚ್‌.ಟಿ. ಪೋತೆ, ರಂಗಕರ್ಮಿ ಪ್ರಸನ್ನ ಅವರ ಪರವಾಗಿ ರಂಗಕರ್ಮಿ ಗುಂಡಣ್ಣ, ರೇಣುಕಾ ರಮಾನಂದ ಅಂಕೋಲ, ಜಿ.ಎಸ್‌. ಸಿದ್ಧಲಿಂಗಯ್ಯ, ಎಂ. ನಂಜಪ್ಪರೆಡ್ಡಿ ಅವರಿಗೆ ವಿವಿಧ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು. (ಎಡದಿಂದ ನಿಂತವರು) ಎಸ್‌.ಜಿ. ಸಿದ್ಧರಾಮಯ್ಯ, ಶೂದ್ರ ಶ್ರೀನಿವಾಸ್, ಸೌಮ್ಯ ರೆಡ್ಡಿ, ಗೋಪಾಲರೆಡ್ಡಿ, ಮಲರವಿಳಿ, ಡಾ. ಮಾನಸ ಸಿದ್ಧಲಿಂಗಯ್ಯ, ಮೋಹನ್ ಕುಮಾರ್ ಕೊಂಡಜ್ಜಿ, ಎಚ್‌. ದಂಡಪ್ಪ, ಕೆ. ಮರುಳ ಸಿದ್ಧಪ್ಪ, ಹುಣಸವಾಡಿ ರಾಜನ್ ಭಾಗವಹಿಸಿದ್ದರು. –ಪ್ರಜಾವಾಣಿ ಚಿತ್ರ

ಇದೇ ಸಂದರ್ಭದಲ್ಲಿ ಸಾಹಿತಿ ಜಿ.ಎಸ್. ಸಿದ್ಧಲಿಂಗಯ್ಯ ಅವರಿಗೆ 'ಕಿ.ರಂ. ನಾಗರಾಜ ಪ್ರಶಸ್ತಿ', ಕವಯಿತ್ರಿ ರೇಣುಕಾ ರಮಾನಂದ ಅಂಕೋಲ ಅವರಿಗೆ 'ಜಿ.ಎಸ್. ಶಿವರುದ್ರಪ್ಪ ಪ್ರಶಸ್ತಿ', ರಂಗಕರ್ಮಿ ಪ್ರಸನ್ನ ಅವರಿಗೆ 'ಕೆ. ಮರುಳ ಸಿದ್ಧಪ್ಪ ಪ್ರಶಸ್ತಿ', ಲೇಖಕ ಎಚ್.ಟಿ. ಪೋತೆ ಅವರಿಗೆ ಸಿದ್ಧಲಿಂಗಯ್ಯ ವಿಚಾರ ಸಾಹಿತ್ಯ ಪ್ರಶಸ್ತಿ' ಮತ್ತು ಕೃಷಿಕ ಜಿ. ಸುಶೀಲ್ ಅವರಿಗೆ 'ಎಂ. ನಂಜಪ್ಪರೆಡ್ಡಿ ಕೃಷಿ ಪ್ರಶಸ್ತಿ'ಯನ್ನು ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕ ಹುಣಸವಾಡಿ ರಾಜನ್ ಅವರು ಪ್ರದಾನ ಮಾಡಿದರು.

ಸಾಹಿತಿ ಕೆ. ಮರುಳ ಸಿದ್ಧಪ್ಪ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪುಸ್ತಕ ಪರಿಚಯ

ಪುಸ್ತಕ:	ಶೂದ್ರ ಶ್ರೀನಿವಾಸ್ ಬದುಕು-ಬರಹ
ಸಂಪಾದಕ:	ಎಚ್. ದಂಡಪ್ಪ
ಪ್ರಕಾಶನ:	ಸಾಧನ ಪಬ್ಲಿಕೇಷನ್
ಪುಟಗಳು:	406
ಬೆಲೆ:	₹450

ಚಿತ್ರಾವಳಿ



ಬೆಂಗಳೂರಿನ ಆರ್‌.ವಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಸೋಮವಾರದಿಂದ ಆರು ದಿನಗಳ ಕೌಶಲ ಅಭಿವೃದ್ಧಿ ಕಾರ್ಯಾಗಾರ ಆರಂಭವಾಯಿತು. ಕಾರ್ಯಾಗಾರದಲ್ಲಿ ಆರ್‌.ವಿ ಕಾಲೇಜು ಐಇಎಂ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಶೋಭಾ ಎನ್‌.ಎಸ್‌., ಉಪ ಪ್ರಾಂಶುಪಾಲರಾದ ಗೀತಾ ಕೆ.ಎಸ್‌. ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್ ಚಂದ್ರಮೌಳಿ, ಕಾಲೇಜು ಪ್ರಾಂಶುಪಾಲ ಸುಬ್ರಹ್ಮಣ್ಯ, ವಿಭಾಗದ ಮುಖ್ಯಸ್ಥ ನಾಗೇಂದ್ರ ಗುಪ್ತಾ ಭಾಗವಹಿಸಿದ್ದರು



ಗಿರಿನಗರದಲ್ಲಿರುವ ವಾಗ್ದೇವಿ ಸಂಪರ್ಕ ನ್ಯೂನತೆಯುಳ್ಳವರ ಪುನಶ್ಚೇತನ ಕೇಂದ್ರದಲ್ಲಿ ನಡೆದ ಕೇಂದ್ರದ 28ನೇ ವಾರ್ಷಿಕೋತ್ಸವದಲ್ಲಿ ಚೆನ್ನೈನ ಡಾ.ಎಂಜಿಆರ್ ವಿಶೇಷ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕಿ ಮತ್ತು ಪ್ರಾಚಾರ್ಯೆ ಡಾ. ಲತಾ ರಾಜೇಂದ್ರನ್ ಅವರಿಗೆ 'ಡಾ.ಶಾಂತಾ ರಾಧಾಕೃಷ್ಣ ದತ್ತಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ (ಎಡದಿಂದ) ಆಡಿಯೋಲಜಿಸ್ಟ್ ರಂಗಸಾಯಿ, ಟ್ರಸ್ಟಿ ಎಸ್‌.ಟಿ. ರಾಧಾಕೃಷ್ಣ, ಕೇಂದ್ರದ ನಿರ್ದೇಶಕಿ ಡಾ. ಶಾಂತಾ ರಾಧಾಕೃಷ್ಣ, ನಟಿ ಗಿರಿಜಾ ಲೋಕೇಶ್ ಮತ್ತು ಅಖಿಲಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು



ಬೆಂಗಳೂರಿನಲ್ಲಿ ಸಹ್ಯಾದ್ರಿ ಸಂಘ ಏರ್ಪಡಿಸಿದ್ದ 'ಮಲೆನಾಡಿಗರ 20ನೇ ವರ್ಷದ ವಾರ್ಷಿಕ ಕ್ರೀಡಾಕೂಟ' ದಲ್ಲಿ ಭಾಗವಹಿಸಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಡಿ.ಸಿ.ಶ್ರೀಧರ್, ಕಾಫಿ ಮಂಡಳಿ ಅಧ್ಯಕ್ಷ ಎಂ.ಜೆ.ದಿನೇಶ್, ಬಿಐಟಿ ಅಧ್ಯಕ್ಷ ಧರ್ಮೇಶ್ ಸಿರಿಬೈಲ್, ಚನ್ನಪಟ್ಟಣ ಡಿವೈಎಸ್ಪಿ ಕೆ.ಸಿ.ಗಿರೀಶ್ ಮತ್ತು ಸಾಹಿತಿ ಮಂಡಗದ್ದೆ ಶ್ರೀನಿವಾಸಯ್ಯ ಭಾಗವಹಿಸಿದ್ದರು.

ನಕ್ಸಲ್ ಹತ್ಯಾಕಾಂಡ: ಆರೋಪಿಗಳಿಗೆ ನ್ಯಾಯಾಂಗ ಬಂಧನ

ಪಾವಗಡ: ವೆಂಕಟಮ್ಮನಹಳ್ಳಿಯ ಪೊಲೀಸರ ಹತ್ಯಾಕಾಂಡ ಪ್ರಕರಣದಲ್ಲಿ ಬಂಧಿಸಲಾದ ಐವರು ಆರೋಪಿಗಳನ್ನು ಸೋಮವಾರ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿದರು. ವಿಚಾರಣೆ ನಂತರ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಆಂಧ್ರಪ್ರದೇಶದ ನಾಗರಾಜು, ಧರ್ಮಾವರಂ ಪದ್ಮ, ರಾಮಗಿರಿ ತಲ್ಲಿಮಡುಗು ಗ್ರಾಮದ ಬೋಯ ಓಬಳೇಶ್, ರಾಮಮೋಹನ್, ಬೋಯ ಆಂಜನೇಯುಲು ಅವರನ್ನು ಪೊಲೀಸರು ಭಾನುವಾರ ಆಂಧ್ರ ಪ್ರದೇಶದಲ್ಲಿ ಬಂಧಿಸಿ ಪಟ್ಟಣದ ಪೊಲೀಸ್ ಠಾಣೆಗೆ ಕರೆ ತಂದು ಪ್ರಶ್ನಿಸಿದ್ದರು. ಮಧ್ಯಾಹ್ನದ ವೇಳೆಗೆ ಆರೋಪಿಗಳನ್ನು ಪಟ್ಟಣದ ಪ್ರಧಾನ ಸಿವಿಲ್ ನ್ಯಾಯಾಲಯಕ್ಕೆ ಕರೆ ತರಲಾಯಿತು. ಆರೋಪಿ ಮಹಿಳೆಯನ್ನು ಬೆಂಗಳೂರು ಜೈಲಿಗೂ ಮತ್ತು ಇತರ ಆರೋಪಿಗಳನ್ನು ಮಧುಗಿರಿ ಜೈಲಿಗೆ ಕರೆದೊಯ್ಯಲಾಯಿತು.

ಕೃಷಿ ಮತ್ತು ರೈತ ಕಲ್ಯಾಣ ಮತ್ತು ಬುಡಕಟ್ಟು ವ್ಯವಹಾರಗಳ ಖಾತೆ ಸಚಿವ ಅರ್ಜುನ್ ಮುಂಡಾ

ತೋಟಗಾರಿಕೆ ಕ್ಷೇತ್ರದ ಅಭಿವೃದ್ಧಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: 'ಕೃಷಿ ಆರ್ಥಿಕತೆಯಲ್ಲಿ ತೋಟಗಾರಿಕೆ ಕ್ಷೇತ್ರದ ಕೊಡುಗೆ ಶೇ 33ರಷ್ಟಿದ್ದು, ಇದನ್ನು ಇನ್ನಷ್ಟು ಹೆಚ್ಚಿಸುವ ಅವಕಾಶಗಳಿವೆ' ಎಂದು ಕೃಷಿ ಮತ್ತು ರೈತ ಕಲ್ಯಾಣ ಮತ್ತು ಬುಡಕಟ್ಟು ವ್ಯವಹಾರಗಳ ಖಾತೆ ಸಚಿವ ಅರ್ಜುನ್ ಮುಂಡಾ ಅಭಿಪ್ರಾಯಪಟ್ಟರು.

ಇಲ್ಲಿನ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಗೆ(ಐಐಎಚ್‌ಆರ್) ಭಾನುವಾರ ಭೇಟಿ ನೀಡಿ, ರೈತರು, ವಿಜ್ಞಾನಿಗಳು ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಮಾತನಾಡಿದ ಅವರು,'ದೇಶದಲ್ಲಿ ತೋಟಗಾರಿಕೆ ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಸಾಧ್ಯತೆಗಳಿವೆ. ತೋಟಗಾರಿಕೆ ಬೆಳೆಗಳ ಉತ್ಪಾದನೆ ಪ್ರಮಾಣ ಹೆಚ್ಚಿದರೆ, ದೇಶೀಯ ಮಾರುಕಟ್ಟೆಯಲ್ಲದೇ, ಜಾಗತಿಕ ಮಾರುಕಟ್ಟೆಯಲ್ಲೂ ನಮ್ಮ ಅಸ್ತಿತ್ವವನ್ನು ಸ್ಥಾಪಿಸಬಹುದು' ಎಂದು ಅವರು ಹೇಳಿದರು.



ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಮತ್ತು ಬುಡಕಟ್ಟು ವ್ಯವಹಾರಗಳ ಖಾತೆ ಸಚಿವ ಅರ್ಜುನ್ ಮುಂಡಾ ಅವರು ಭಾನುವಾರ ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಗೆ ಭೇಟಿ ನೀಡಿ, ಸಂಸ್ಥೆಯ ಚಟುವಟಿಕೆಗಳನ್ನು ವೀಕ್ಷಿಸಿದರು

'ಐಐಎಚ್‌ಆರ್, ತರಕಾರಿ, ಹೂವಿನ ಬೆಳೆ ಸೇರಿದಂತೆ 300 ಕ್ಕೂ ಹೆಚ್ಚು ತೋಟಗಾರಿಕಾ ಬೆಳೆಗಳನ್ನು ಅಭಿವೃದ್ಧಿಪಡಿಸುತ್ತಿದೆ. ಬುಡಕಟ್ಟು ಪ್ರಾಬಲ್ಯವಿರುವ ಪ್ರದೇಶಗಳಲ್ಲಿಯೂ ಸಂಸ್ಥೆಯು ಉತ್ತಮ ಕೆಲಸ ಮಾಡುತ್ತಿದೆ. ತೋಟಗಾರಿಕೆ ಉತ್ಪಾದನೆ ಹೆಚ್ಚಿಸುವ ಸಾಮರ್ಥ್ಯ ಹೊಂದಿದೆ' ಎಂದು ಹೇಳಿದರು.

'ತೋಟಗಾರಿಕೆ ಕ್ಷೇತ್ರವನ್ನು ದೇಶದ ಆರ್ಥಿಕ ಅಭಿವೃದ್ಧಿಯ ಪ್ರಮುಖ ಅಂಶವೆಂದು ಪರಿಗಣಿಸಲಾಗಿದೆ. ಭಾರತದಲ್ಲಿ ತೋಟಗಾರಿಕೆ ಉತ್ಪಾದನೆಯು ಗಣನೀಯವಾಗಿ ಏರಿಕೆಯಾಗುತ್ತಿದ್ದು, 2022-23ರ ಅವಧಿಯಲ್ಲಿ 350 ಮಿಲಿಯನ್ ಟನ್‌ಗಳನ್ನು ತಲುಪಿದೆ' ಎಂದರು.

'ಹೆಚ್ಚು ಹೆಚ್ಚು ರೈತರನ್ನು ಸಂಶೋಧನಾ ಕೇಂದ್ರದ ಪ್ರಯೋಗಾಲಯಗಳಿಗೆ ಕರೆತಂದು, ಇಲ್ಲಿ ನಡೆಯುವ ಪ್ರಯೋಗಗಳನ್ನು ತೋರಿಸಬೇಕು, ಸಂಶೋಧನಾ ತಂತ್ರಗಳನ್ನು ಅವರೊಂದಿಗೆ ಹಂಚಿಕೊಳ್ಳಬೇಕು' ಎಂದು ವಿಜ್ಞಾನಿಗಳಿಗೆ ಅವರು ತಿಳಿಸಿದರು.

'ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ನಮ್ಮ ದೇಶ ಸ್ವಾಲಂಬನೆ ಸಾಧಿಸಬೇಕಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಜಾರ್ಖಂಡ್‌ನಿಂದ ಆರಂಭಿಸಿರುವ ಪ್ರಧಾನ ಮಂತ್ರಿ ಬುಡಕಟ್ಟು ನ್ಯಾಯ್ ಮಹಾಅಭಿಯಾನ್ ಮೂಲಕ ಬುಡಕಟ್ಟು ಸಮುದಾಯಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕೆಲಸ ಮಾಡಲಾಗುತ್ತಿದೆ' ಎಂದು ಅವರು ಹೇಳಿದರು.

ಐಐಎಚ್‌ಆರ್ ನಿರ್ದೇಶಕ ಪ್ರೊ. ಸಂಜಯ್‌ಕುಮಾರ್ ಸಿಂಗ್ ಸ್ವಾಗತಿಸಿದರು.

ಕ್ಷೇಮ ಕುಶಲ

ಗಾಢ ನಿದ್ರೆ ಬರಲು...

ನಿದ್ರಾಹೀನತೆಯ ಅಡ್ಡಪರಿಣಾಮಗಳು

- ಆಯಾಸ, ಭಾವನೆಗಳಲ್ಲಿ ಏರುಪೇರು (ಮೂಡ್ ಸ್ವಿಂಗ್), ಮಾನಸಿಕವಾಗಿ ಕಿರಿಕಿರಿ ಅಥವಾ ಕೋಪ.
- ಹಗಲು ಹೊತ್ತಿನಲ್ಲಿ ನಿದ್ರೆಯ ಮಂಪರು ಕವಿದಿರುವಿಕೆ, ನಿದ್ದೆಯ ಬಗ್ಗೆ ಆತಂಕ, ಏಕಾಗ್ರತೆಯ ಕೊರತೆ, ಸ್ಮರಣಶಕ್ತಿ ಕುಂಠಿತ, ಶಾಲಾ-ಕಾಲೇಜು ಅಥವಾ ಉದ್ಯೋಗದ ಸ್ಥಳದಲ್ಲಿ ಕಡಿಮೆ ದಕ್ಷತೆ, ತಲೆನೋವು, ಒತ್ತಡ, ಹೊಟ್ಟೆಯ ಆರೋಗ್ಯದಲ್ಲಿ ಏರುಪೇರು, ವಾಹನ ಚಲಾಯಿಸುವಾಗ ಅಪಘಾತ ಸಂಭವಿಸುವ ಸಾಧ್ಯತೆ, ತೀವ್ರ ನಿದ್ರಾಹೀನತೆಯಿಂದ ದೈಹಿಕ ಆರೋಗ್ಯದ ಮೇಲೆ ಪರಿಣಾಮ, ಅಜೀರ್ಣ, ಹೃದ್ರೋಗ ಸಂಬಂಧಿ ಕಾಯಿಲೆ, ಪಾರ್ಶ್ವವಾಯು.



ಮಂಜುಶ್ರೀ ಎಂ.ಕಡಕೋಳ

'ಚಿಂತೆ ಇಲ್ಲದವನಿಗೆ ಸಂತೆಯಲ್ಲೂ ನಿದ್ದೆ' ಎಂಬುದು ಗಾದೆ ಮಾತು. ಪ್ರಕೃತಿದತ್ತವಾಗಿ ಲಭ್ಯವಾಗಿರುವ ನಿದ್ದೆ ಮನುಷ್ಯನನ್ನು ಉತ್ಸಾಹ, ಚಟುವಟಿಕೆಯಿಂದ ಇರುವಂತೆ ಮಾಡುತ್ತದೆ. ದಣಿದ ಮೈ-ಮನಸ್ಸನ್ನು ಆಹ್ಲಾದಗೊಳಿಸುತ್ತದೆ. ಆದರೆ ಒತ್ತಡ, ಆತಂಕ, ಖಿನ್ನತೆಗಳಿಂದ ಬಳಲುತ್ತಿರುವ ಬಹುತೇಕರಿಗೆ ನಿದ್ರಾದೇವಿ ಅಷ್ಟು ಸುಲಭವಾಗಿ ಒಲಿದು ಬರುವುದಿಲ್ಲ. ವೇಗದ ಬದುಕು, ಸದಾ ಗ್ಯಾಜೆಟ್ ಲೋಕದ ಬೆಳಕಿನಲ್ಲಿರುವವರಿಗೆ, ಒತ್ತಡದ ಜೀವನ ಶೈಲಿಯಲ್ಲಿರುವವರಲ್ಲಿ ನಿದ್ರಾಹೀನತೆ ಸಾಮಾನ್ಯ ಎನ್ನುತ್ತವೆ ವೈಜ್ಞಾನಿಕ ಅಧ್ಯಯನಗಳು.

ಏನಿದು ನಿದ್ರಾಹೀನತೆ?

ರಾತ್ರಿ ಕಣ್ತುಂಬಾ ನಿದ್ದೆ ಮಾಡಿ, ಬೆಳಿಗ್ಗೆ ಎದ್ದಾಗ ನವಚೈತನ್ಯವಿದ್ದರೆ ಆ ವ್ಯಕ್ತಿ ಆರೋಗ್ಯವಂತ ಎನ್ನುತ್ತದೆ ವಿಜ್ಞಾನ. ಆದರೆ, ಶೇ 20ರಿಂದ 30ರಷ್ಟು ಜನರಿಗೆ ನಿದ್ದೆ ಅಷ್ಟು ಸುಲಭವಾಗಿ ಬರುವುದಿಲ್ಲ.

ವಾರದಲ್ಲಿ ಕನಿಷ್ಠ ಮೂರು ಬಾರಿ ನಿದ್ದೆ ವಂಚಿತರಾದರೆ, ನಿದ್ದೆ ಬಂದರೂ ತಡವಾಗಿ ಬರುವುದು, ಮಲಗಿದಾಕ್ಷಣ ನಿದ್ರಾದೇವಿ ಆವರಿಸದಿದ್ದರೆ, ಆವರಿಸಿದರೂ ಪದೇ ಪದೇ ಎಚ್ಚರವಾಗುತ್ತಿದ್ದರೆ ಅದನ್ನು ನಿದ್ರಾಹೀನತೆಯ ಲಕ್ಷಣ ಎನ್ನುತ್ತಾರೆ ನಿಮ್ಹಾನ್ಸ್‌ನ 'ಸ್ಲೀಪ್ ಕ್ಲಿನಿಕ್'ನ ವೈದ್ಯ ಡಾ.ಡಿ.ವಿ. ಶೇಷಗಿರಿ.

ನಿದ್ರಾಹೀನತೆಯನ್ನು ವೈದ್ಯಕೀಯ ಪರಿಭಾಷೆಯಲ್ಲಿ ಇನ್‌ಸೊಮ್ನಿಯಾ (Insomnia) ಎನ್ನುತ್ತಾರೆ. ಒತ್ತಡದಿಂದ ಬಳಲುವ ವ್ಯಕ್ತಿ, ಜೀವನದಲ್ಲಿ ಒಮ್ಮೆಯಾದರೂ ನಿದ್ರಾಹೀನತೆಯ ಸ್ಥಿತಿಯನ್ನು ಅನುಭವಿಸುತ್ತಾನೆ. ನಿದ್ರಾಹೀನತೆಯು ಕೆಲವರಲ್ಲಿ ತಾತ್ಕಾಲಿಕವಾಗಿದ್ದರೆ, ಕೆಲವರಿಗೆ ದೀರ್ಘಕಾಲದ ತನಕ ಇರಬಹುದು.

ಅಂತೆಯೇ ನಿದ್ರಾಹೀನತೆಗೆ ಸಂಬಂಧಿಸಿದಂತೆ ಸುಮಾರು 80 ರೀತಿಯ ಸ್ಥಿತಿಗಳನ್ನು ನಿಮ್ಹಾನ್ಸ್‌ನ ಅಧ್ಯಯನವೊಂದರಲ್ಲಿ ಕಂಡುಕೊಳ್ಳಲಾಗಿದೆ.

ಕಾರಣಗಳೇನು?

ಜೈವಿಕ, ಮಾನಸಿಕ ಹಾಗೂ ಸಾಮಾಜಿಕ ಅಂಶಗಳು ನಿದ್ರಾಹೀನತೆಗೆ ಕಾರಣವಾಗಬಲ್ಲವು. ಸಾಮಾನ್ಯವಾಗಿ ಒತ್ತಡದಿಂದ (stress) ಬಳಲುತ್ತಿರುವವರಲ್ಲಿ ನಿದ್ರಾಹೀನತೆ ಉಂಟಾಗುತ್ತದೆ. ಮತ್ತೆ ಕೆಲವರು ಖಿನ್ನತೆ, ಆತಂಕದ ಮನಸ್ಥಿತಿ ಹೊಂದಿದ್ದರೆ, ಇನ್ನು ಕೆಲವರಿಗೆ ವೈದ್ಯಕೀಯ ಕಾರಣಕ್ಕಾಗಿ ಅಂದರೆ ಮಲಗಿದಾಗ ಕಾಲುಗಳಲ್ಲಿ ತೀವ್ರ ನೋವು ಇದ್ದಲ್ಲಿ ಅಂಥವರಲ್ಲಿ ನಿದ್ರಾಹೀನತೆ ಇರುತ್ತದೆ ಎನ್ನುತ್ತಾರೆ ಡಾ.ಶೇಷಗಿರಿ.

ನಿತ್ಯದ ದಿನಚರಿ, ಜೀವನಶೈಲಿ ನಿದ್ದೆಯ ಮೇಲೆ ಪ್ರಭಾವ ಬೀರಬಲ್ಲದು. ಹೇಗೆಂದರೆ ನಿತ್ಯವೂ ಒಂದೇ ಸಮಯಕ್ಕೆ ಮಲಗಿ, ಏಳುವ ದಿನಚರಿ ಇದ್ದರೆ ದೇಹ ಮತ್ತು ಮಿದುಳು ಅದಕ್ಕೆ ಹೊಂದಿಕೊಂಡಿರುತ್ತದೆ. ಆಗ ನಿತ್ಯವೂ ನಿಗದಿತ ಸಮಯಕ್ಕೇ ಮಲಗಿ, ಎಚ್ಚರವಾಗುತ್ತದೆ. ಆದರೆ, ಕೆಲವರಲ್ಲಿ ಈ ದಿನಚರಿ ಸರಿಯಾಗಿರುವುದಿಲ್ಲ ಅಂದರೆ ಯಾವಾಗಲೋ ಮಲಗುವುದು, ಯಾವಾಗಲೋ ಏಳುವುದು ಆಗುತ್ತಿರುತ್ತದೆ. ಹೀಗೆ ನಿಗದಿತ ದಿನಚರಿ ಪಾಲನೆಯಾಗದಿದ್ದಾಗ ಮಿದುಳಿಗೆ ಗೊಂದಲವಾಗಿ ನಿದ್ದೆಯಲ್ಲಿ ಏರುಪೇರು ಉಂಟಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಡಿಜಿಟಲ್ ಸ್ಕ್ರೀನ್ ಅವಧಿಯು ನಿದ್ದೆಯ ಮೇಲೆ ಪರಿಣಾಮ ಬೀರುತ್ತಿದೆ. ರಾತ್ರಿ ಹೊತ್ತು ಮೊಬೈಲ್, ಟಿ.ವಿ, ಕಂಪ್ಯೂಟರ್ ವೀಕ್ಷಣೆಯು ಮಿದುಳಿನ ಮೇಲೆ ಪರಿಣಾಮ ಬೀರಿ ಎಚ್ಚರವಿರುವಂತೆ ಮಾಡುತ್ತದೆ. ಆಗ ಮಿದುಳು ಬಲವಂತವಾಗಿ ರಾತ್ರಿಯನ್ನೇ ಹಗಲಿನ ಸ್ಥಿತಿಗೆ ತನ್ನನ್ನು ಹೊಂದಿಸಿಕೊಳ್ಳಲು ಯತ್ನಿಸುತ್ತದೆ. ಕೆಲವರಿಗೆ ರಾತ್ರಿ ಸ್ವಲ್ಪ ಒಂದೆರಡು ತಾಸು ಮಲಗಿ, ಮತ್ತೆ ಹಗಲಿನಲ್ಲೂ ಕೆಲಕಾಲ ಮಲಗುವ ಅಭ್ಯಾಸವಿರುತ್ತದೆ. ಸಾಮಾನ್ಯವಾಗಿ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವವರಲ್ಲಿ ಈ ರೀತಿಯ ದಿನಚರಿ ಇರುತ್ತದೆ. ಹಗಲಿನಲ್ಲಿ ಮತ್ತೆ ಮಲಗುವ ಅಭ್ಯಾಸವಿದ್ದವರು ದೀರ್ಘಕಾಲದಲ್ಲಿ ನಿದ್ರಾಹೀನತೆ ಮತ್ತು ಇತರ ಆರೋಗ್ಯದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ವ್ಯಕ್ತಿಯೊಬ್ಬ ಸಾಮಾನ್ಯವಾಗಿ ಏಳರಿಂದ ಎಂಟು ತಾಸು ನಿದ್ದೆ ಮಾಡಬೇಕು. ಕೆಲವರು ಇದಕ್ಕಿಂತ ಕಡಿಮೆ ಅವಧಿಯ ಅಂದರೆ ಐದು ತಾಸು ನಿದ್ದೆ ಮಾಡಿಯೂ ಲವಲವಿಕೆಯಿಂದ ಇರಬಲ್ಲರು. ಇಂಥವರನ್ನು ಶಾರ್ಟ್ ಸ್ಲೀಪರ್ಸ್ ಎನ್ನುತ್ತಾರೆ. ಅವರಿಗೆ ಏಳೆಂಟು ತಾಸಿನ ನಿದ್ದೆಯ ಅವಶ್ಯಕತೆ ಇರುವುದಿಲ್ಲ. ಪುರುಷರಿಗೆ ಹೋಲಿಸಿದರೆ ಮಹಿಳೆಯರಲ್ಲಿ ನಿದ್ರಾಹೀನತೆಯ ಸಮಸ್ಯೆಗಳು ಹೆಚ್ಚು. ಮನೆಗೆಲಸ, ಕುಟುಂಬ ಹಾಗೂ ಉದ್ಯೋಗ ಹೀಗೆ ಹಲವು ಜವಾಬ್ದಾರಿಗಳು ಇರುವುದರಿಂದ ಮಹಿಳೆಯರು ಒತ್ತಡಕ್ಕೀಡಾಗುತ್ತಾರೆ. ಕೆಲಸದ ಹೊರೆ ಹೆಚ್ಚಿದ್ದಷ್ಟೂ ಮಹಿಳೆಯ ನಿದ್ರೆಯ ಅವಧಿ ಕಡಿಮೆಯಾಗುವ ಸಂಭವವಿರುತ್ತದೆ ಎನ್ನುತ್ತಾರೆ ಡಾ.ಶೇಷಗಿರಿ.

ಪರಿಹಾರಗಳು

- ದೇಹ ಮತ್ತು ಮನಸ್ಸನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಬೇಕು.
- ಮಲಗುವ ಕೋಣೆಯನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು.
- ಮಲಗುವ ಹಾಸಿಗೆಯನ್ನು ಸ್ವಚ್ಛವಾಗಿಟ್ಟುಕೊಳ್ಳುವುದು. ಆ ಸ್ಥಳವನ್ನು ಮಲಗಲು ಮಾತ್ರ ಬಳಸುವುದು.
- ಮಲಗುವ ಒಂದು ತಾಸಿಗೂ ಮೊಬೈಲ್, ಟಿ.ವಿ, ಕಂಪ್ಯೂಟರ್ ಗ್ಯಾಜೆಟ್‌ಗಳ ವೀಕ್ಷಣೆ ಮಾಡದಿರುವುದು.
- ಮಲಗುವ ಹೊತ್ತಿನಲ್ಲಿ ಯಾವುದೇ ಯೋಚನೆ/ಚಿಂತೆ ಮಾಡದಿರುವುದು. ದೇಹವನ್ನು ರಿಲ್ಯಾಕ್ಸ್ ಆಗಿಟ್ಟುಕೊಳ್ಳುವುದು.
- ಸಂಜೆಯ ನಂತರ ಕಾಫಿ, ಟೀ ಪಾನೀಯಗಳನ್ನು ಸೇವಿಸದಿರುವುದು.
- ನಿತ್ಯವೂ ಸ್ವಲ್ಪವಾದರೂ ದೈಹಿಕ ಚಟುವಟಿಕೆಗಳನ್ನು ಮಾಡುವುದು. ಆದರೆ, ಮಲಗುವ ಮುನ್ನ ದೈಹಿಕ ಚಟುವಟಿಕೆ ನಡೆಸಬಾರದು.
- ನಿತ್ಯವೂ ಒಂದೇ ಸಮಯಕ್ಕೆ ಮಲಗುವ ಮತ್ತು ಏಳುವ ಅಭ್ಯಾಸವನ್ನು ರೂಢಿಸಿಕೊಳ್ಳುವುದು.
- ಮಲಗುವ ಸಮಯದಲ್ಲಿ ಹೆಚ್ಚು ಆಹಾರ ಸೇವಿಸದಿರುವುದು, ಮಸಾಲೆ ಪದಾರ್ಥಗಳನ್ನು ಸೇವಿಸದಿರುವುದು.






ಚಳಿಗಾಲದ ಅಂತ್ಯದ ಏಳು ದಿನ, ಬೇಸಿಗೆ ಆರಂಭದ ಏಳು ದಿನಗಳ ಈ ಅವಧಿ ಋತು ಸಂಧಿ ಕಾಲವೆನಿಸಿಕೊಳ್ಳಲಿದೆ. ಶೀತ ವಾತಾವರಣದಿಂದ ಬಿಡುಗಡೆ ಹೊಂದುತ್ತ, ಉಷ್ಣ ವಾತಾವರಣಕ್ಕೆ ನಿಧಾನವಾಗಿ ಹೊಂದಿಕೊಳ್ಳುವುದು ಎಂದರ್ಥ. ಚಳಿಗಾಲ-ಬೇಸಿಗೆ ಕಾಲದ ನಡುವಿನ ಈ ಎರಡು ವಾರ ವಿಶೇಷ ಕಾಳಜಿ ವಹಿಸಿದರೆ ಸಂಧಿಕಾಲದ ವ್ಯಾಧಿಯನ್ನು ದೂರವಿಡಲು ಸಾಧ್ಯ.

ಸಂಧಿಕಾಲದ ವ್ಯಾಧಿ ಬಾರದಿರಲು

ಕೃಷ್ಣಿ ಶಿರೂರ

ಋತುಮಾನ ಬದಲಾವಣೆಗೆ ನಮ್ಮ ದೇಹ ಕೂಡ ಕೆಲವು ಬದಲಾವಣೆಗೆ ಒಗ್ಗಿಕೊಳ್ಳಲೇಬೇಕು. ಇದು ಪ್ರಕೃತಿ ನಿಯಮ. ಚಳಿಗಾಲದಿಂದ ಬೇಸಿಗೆಗೆ ಪ್ರವೇಶ ಪಡೆಯುವ ಸಂಧಿಕಾಲದಲ್ಲಿ ನಮ್ಮ ಆರೋಗ್ಯದಲ್ಲಿ ಏರುಪೇರಾಗುವುದು ಕೂಡ ಸಹಜ. ಶೀತ, ಕೆಮ್ಮು, ಕಫ, ಪಿತ್ತ, ವಾತ, ಜ್ವರ, ಸಂದು ನೋವಿನಂಥ ವ್ಯಾಧಿಗಳು ನಮ್ಮನ್ನ ದೈಹಿಕವಾಗಿ ಬಾಧಿಸುತ್ತವೆ, ಮಾನಸಿಕವಾಗಿ ಕಿರಿಕಿರಿಗೆ ದಾರಿಯಾಗಲಿದೆ. ಒಂದಷ್ಟು ಮುಂಜಾಗ್ರತೆ ವಹಿಸಿದರೆ ಆ ವ್ಯಾಧಿಗಳ ತೀವ್ರತೆಯನ್ನು ಕುಗ್ಗಿಸಬಹುದು. ಹುಬ್ಬಳ್ಳಿಯ ಆಯುರ್ವೇದ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಸೌರಭ ಎಸ್.ಕೆ. ಅವರು ಈ ಕಾಲ ನಿರ್ವಹಿಸುವ ಬಗ್ಗೆ ತಿಳಿಸಿದ್ದಾರೆ.




ಸಂಧಿಕಾಲದ ವ್ಯಾಧಿಗಳೆಂದರೇನು?

ನಾವೀಗ ಚಳಿಗಾಲದ ಅಂತ್ಯದಲ್ಲಿದ್ದೇವೆ. ಇನ್ನು ಕೆಲವೇ ದಿನಗಳಲ್ಲಿ ಬೇಸಿಗೆ ಕಾಲಕ್ಕೆ ಕಾಲಿಡಲಿದ್ದೇವೆ. ಅಂದರೆ ಶೀತ ಪ್ರಕೃತಿಯಿಂದ ಉಷ್ಣ ಪ್ರಕೃತಿಗೆ ನಾವು ಒಗ್ಗಿಕೊಳ್ಳಬೇಕಾದ ಕಾಲ. ಇದನ್ನು ಆಯುರ್ವೇದದಲ್ಲಿ 'ಋತು ಸಂಧಿ' ಎಂದೂ ಕರೆಯುತ್ತಾರೆ. ಚಳಿಗಾಲದ ಅಂತ್ಯದ ಏಳು ದಿನಗಳ ಜತೆಗೆ ಬೇಸಿಗೆ ಆರಂಭದ ಏಳು ದಿನಗಳೂ ಸೇರಿ ಎರಡು ವಾರಗಳ ಈ ಅವಧಿಯೇ ಸಂಧಿ ಕಾಲವೆನಿಸಿಕೊಳ್ಳಲಿದೆ. ಶೀತ ವಾತಾವರಣದಿಂದ ನಿಧಾನವಾಗಿ ಬಿಡುಗಡೆ ಹೊಂದುತ್ತ, ಉಷ್ಣ ವಾತಾವರಣಕ್ಕೆ ಹೊಂದಿಕೊಳ್ಳುವುದು ಎಂದರ್ಥ.

ಋತುಮಾನ ಬದಲಾವಣೆಯ ಸಮಯದಲ್ಲಿ ನೆಗಡಿ, ಮೂಗು ಕಟ್ಟುವುದು, ಕೆಮ್ಮು ಜ್ವರ ಉಲ್ಬಣಗೊಳ್ಳಲಿದೆ. ಸಾಮಾನ್ಯವಾಗಿ ಚಳಿಗಾಲದಲ್ಲಿ ಶೀತ, ಕೆಮ್ಮು, ಕಫ, ಜ್ವರ ಬಾಧಿಸುತ್ತಲಿದ್ದರೂ ದೇಹದಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿರುವ ಕಾರಣ ವ್ಯಾಧಿಯ ತೀವ್ರತೆ ಕುಗ್ಗಿರಲಿದೆ. ಅದೇ ಬೇಸಿಗೆಯಲ್ಲಿ ರೋಗನಿರೋಧಕ ಶಕ್ತಿ ಕುಗ್ಗುವ ಕಾರಣ ಈ ವ್ಯಾಧಿಗಳು ಉಲ್ಬಣಗೊಳ್ಳಲಿದೆ. ಕೆಲವರಿಗೆ ಉಸಿರಾಟದ ತೊಂದರೆ, ಮೂತ್ರವಿಕಾರ, ಮೈಗ್ರೇನ್, ಖಿನ್ನತೆ, ಪಿತ್ತ, ವಾಂತಿ, ನಿಶ್ಶಕ್ತಿಯ ರೂಪದಲ್ಲೂ ವ್ಯಾಧಿಗಳು ಬಾಧಿಸಬಹುದು. ಈ ಸಂಧಿ ಕಾಲದ ವ್ಯಾಧಿಗಳು ಎಲ್ಲ ವಯಸ್ಸಿನವರನ್ನೂ ಕಾಡಬಹುದು. ವೃದ್ಧರು, ಮಕ್ಕಳಲ್ಲಿ ತುಸು ಹೆಚ್ಚಿರಲಿದೆ. ನಾವು ಅನುಸರಿಸುವ ಆಹಾರ ಪದ್ಧತಿ, ಜೀವನಕ್ರಮ, ವ್ಯಾಯಾಮ, ಯೋಗದಿಂದ ಈ ವ್ಯಾಧಿಗಳನ್ನು ಹತೋಟಿಯಲ್ಲಿಡಬಹುದು.

ವಸಂತ ಋತುವಿನಲ್ಲಿ ಉಷ್ಣತೆ ಹೆಚ್ಚಿದಾಗ 'ವಮನ ಚಿಕಿತ್ಸೆ' ಅಂದರೆ ಔಷಧ ನೀಡಿ ಒತ್ತಾಯಪೂರ್ವಕವಾಗಿ ವಾಂತಿ ಮಾಡಿಸಿ ಆರೋಗ್ಯವನ್ನು ಕಾಪಿಡುವ ಚಿಕಿತ್ಸಾಕ್ರಮ ಆಯುರ್ವೇದದಲ್ಲಿದೆ. ಇನ್ನು ಸಂಧಿಕಾಲದ ವ್ಯಾಧಿಗಳಿಂದ ದೂರವಿರಲು ಮನೆಯಲ್ಲೇ ನಾವು ಕೆಲವು ಮನೆಮದ್ದನ್ನು ಅನುಸರಿಸಬಹುದು. ಮಜ್ಜಿಗೆ ಸೇವನೆ, ನೀರಿನಲ್ಲಿ ಚಂದನ, ಕರ್ಪೂರ, ಲಾವಂಚದ ಬೇರುಗಳನ್ನು ರಾತ್ರಿಪೂರ್ತಿ ನೆನೆಯಿಟ್ಟು ಆ ನೀರನ್ನು ಕುಡಿಯುವುದರಿಂದ ಪಿತ್ತ-ಕಫವನ್ನು ನಿಗ್ರಹಿಸಬಹುದು. ಉಷ್ಣ ಪದಾರ್ಥ ಸೇವನೆ ಕಡಿಮೆಗೊಳಿಸುವುದು. ಪಾನಕ, ಕೋಸಂಬರಿ ಸೇವನೆ ಮಾಡುವುದು. ಜತೆಗೆ ಲಘುಆಹಾರ ಅಂದರೆ ತಿನ್ನಲು ಹಾಗೂ ಜೀರ್ಣಿಸಿಕೊಳ್ಳಲು ಸುಲಭವಾಗಬಲ್ಲ ಆಹಾರಗಳ ಸೇವನೆ ಪಾಲಿಸಬೇಕು. ಉದಾಹರಣೆಗೆ ದಾಲ್-ಕಿಚಡಿ ಸೇವನೆ ಮಾಡಬೇಕು.





ಯಾವ ಹಣ್ಣುಗಳನ್ನು ಸೇವಿಸಬಹುದು ಎಂಬ ಪ್ರಶ್ನೆಗೆ ಋತುಮಾನದಲ್ಲಿ ಲಭ್ಯವಾಗುವ ಎಲ್ಲ ಹಣ್ಣುಗಳನ್ನೂ ಸೇವಿಸಬಹುದು. ಯಾವ ಋತುವಿನಲ್ಲಿ ಯಾವ ಹಣ್ಣುಗಳನ್ನು ಸೇವಿಸಬೇಕೆಂಬುದನ್ನು ಪ್ರಕೃತಿಯೇ ನಮಗೆ ನೀಡುತ್ತಿದೆ. ದ್ರಾಕ್ಷಿ, ದಾಳಿಂಬೆ, ಖರ್ಜೂರವನ್ನು ಸೇವಿಸಬಹುದು. ದಾಳಿಂಬೆ ಜ್ಯೂಸ್ ರೂಪದಲ್ಲಿ ಸೇವಿಸುವುದಕ್ಕಿಂತ ದಾಳಿಂಬೆ ಹಣ್ಣನ್ನು ನಾವೇ ಬಿಚ್ಚಿ, ಅದರಲ್ಲಿನ ಬೀಜಗಳನ್ನು ಜಗಿದು ತಿನ್ನುವುದರಿಂದ ಹೆಚ್ಚಿನ ಪ್ರಯೋಜನವಿದೆ. ದಾಳಿಂಬೆ ಬೀಜ ತಿನ್ನುವಾಗ ವಿವಿಧ ಹಂತಗಳಲ್ಲಿ ಬಾಯಿ, ಕರಳು, ಜಠರ ಅವುಗಳಲ್ಲಿನ ಸಾರವನ್ನು ನಮ್ಮ ಹೀರಿಕೊಳ್ಳುವುದರಿಂದ ಅದರಿಂದ ಸಿಗುವ ಲಾಭಕ್ಕೆ ಸಾಟಿಯಿಲ್ಲ. ಬೀಜವುಳ್ಳ ಖರ್ಜೂರವನ್ನು ತುಪ್ಪದ ಜೊತೆ ಸೇವಿಸುವುದು ಕೂಡ ಉತ್ತಮ. ಎಷ್ಟು ತುಪ್ಪದೊಂದಿಗೆ ಸೇವಿಸಬೇಕು ಎಂಬ ಪ್ರಶ್ನೆಗೆ ಆ ಖರ್ಜೂರದಲ್ಲಿರುವ ಬೀಜದ ಪ್ರಮಾಣದಷ್ಟು ತುಪ್ಪ ಸೇವನೆ ಒಂದು ಅಳತೆಗೋಲು. ಸಂಧಿಕಾಲದ ವ್ಯಾಧಿಯನ್ನು ಹತೋಟಿಯಿಡುವಲ್ಲಿ ನಿತ್ಯ ಅಭ್ಯಂಗ ಕೂಡ ಸಹಾಯಕ್ಕೆ ಬರಲಿದೆ. ಎಣ್ಣೆ ಹಚ್ಚಿಕೊಂಡು ಬಿಸಿನೀರಿನ ಸ್ನಾನ ಮೈ-ಮನವನ್ನು ಸ್ವಸ್ಥವಾಗಿಡಲಿವೆ. ದೇಹವನ್ನು ಕಾಡುವ ನೋವುಗಳನ್ನು ಕಡಿಮೆಗೊಳಿಸಿಕೊಳ್ಳಬಹುದು. ಸಂಧಿವಾತದ ಬಾಧೆಯುಳ್ಳವರಲ್ಲೂ ಈ ಸಂಧಿಕಾಲ ನೋವಿನಲ್ಲಿ ಕೊಂಚ ಏರುಪೇರನ್ನುಂಟು ಮಾಡಲಿದೆ. ಚಳಿಗಾಲ-ಬೇಸಿಗೆ ಕಾಲದ ನಡುವಿನ ಈ ಎರಡು ವಾರ ವಿಶೇಷ ಕಾಳಜಿ ವಹಿಸಿದರೆ ಸಂಧಿಕಾಲದ ವ್ಯಾಧಿ ದೂರವಿಡಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ


ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

10) ನಜೀಮ ಒಂದು ಚಿಕ್ಕನದಿಯಲ್ಲಿ ಗಾಳ ಹಾಕಿ ಮೀನು ಹಿಡಿಯುತ್ತಿರುತ್ತಾಳೆ. ಗಾಳದ ಸಲಾಕೆಯ ತುದಿಯು ನೀರಿನ ಮಟ್ಟದಿಂದ 1.8m ಎತ್ತರದಲ್ಲಿದೆ ಮತ್ತು ದಾರದ ತುದಿಯಲ್ಲಿರುವ ಗಾಳವು ಅವಳಿಂದ ನೀರಿನ ಮೇಲ್ಮೈ ಮೇಲೆ 3.6m ದೂರದಲ್ಲಿದೆ ಹಾಗೂ ಗಾಳದ ಸಲಾಕೆಯ ತುದಿಗೆ ಲಂಬವಾಗಿರುವ ನೀರಿನ ಮೇಲ್ಮೈಯ ಬಿಂದುವಿನಿಂದ 2.4 m ದೂರದಲ್ಲಿದೆ. ಗಾಳದ ದಾರವು (ಸಲಾಕೆಯ ತುದಿಯಿಂದ ಗಾಳದವರೆಗೆ) ಬಿಗಿಯಾಗಿದೆ ಎಂದು ಭಾವಿಸಿದಾಗ ಅವಳು ಎಷ್ಟು ಉದ್ದದ ದಾರ ಹೊರ ಹಾಕಬೇಕು? (ಚಿತ್ರವನ್ನು ನೋಡಿ) ಅವಳು ದಾರವನ್ನು ಪ್ರತಿ ಸೆಕೆಂಡಿಗೆ 5cm ವೇಗದಲ್ಲಿ ಎಳೆದರೆ 12 ಸೆಕೆಂಡಗಳ ನಂತರ ಅವಳಿಂದ ಗಾಳಕ್ಕೆ ಇರುವ ಕ್ಷಿತಿಜೀಯ ದೂರವೇನು?



ಪರಿಹಾರ:– AB ಗಾಳದ ಸಲಾಕೆಯು ಎತ್ತರ BC ಗಾಳದ ಸಲಾಕೆ ತುದಿಗೆ ಲಂಬವಾಗಿರುವ ನೀರಿನ ಮೇಲ್ಮೈ

ದಾರದ ಉದ್ದ AC ಯನ್ನು ಪೈಥಾಗೋರಸ್ ಪ್ರಮೇಯ ಬಳಸಿ ಕಂಡುಹಿಡಿಯಬಹುದು.



(ಹಿಂದಿನ ಸಂಚಿಕೆಯಿಂದ)

ΔABCದಲ್ಲಿ

$AC^2 = AB^2 + BC^2$

$AB^2 = (1.8\ m)^2 + (2.4\ m)^2$

$AB^2 = (3.24 + 5.76)\ m^2$

$AB^2 = 9.00\ m^2$


$\Rightarrow AB = \sqrt{9}\ m = 3m$

ದಾರದ ಉದ್ದ 3 m.

ದಾರವನ್ನು ಪ್ರತಿ ಸೆಕೆಂಡಿಗೆ 5 ಸೆಂಮೀ. ವೇಗದಲ್ಲಿ ಎಳೆದರೆ 12 ಸೆಕೆಂಡುಗಳ ನಂತರ ಅವಳಿಂದ ಗಾಳಕ್ಕೆ ಇರುವ ಕ್ಷಿತೀಜಿಯ ದೂರ

$= 12 \times 5 = 60\ cm$

$= 0.6\ m$



AD = AC − 12 ಸೆಕೆಂಡಗಳಲ್ಲಿ ನಜೀಮನು ಎಳೆದ ದಾರದ ಉದ್ದ

$= (3.00 - 0.6)\ m$

$= 2.4\ m$

ΔADB ದಲ್ಲಿ ಪೈಥಾಗೋರಸ್ ಪ್ರಮೇಯದ ಪ್ರಕಾರ

$AB^2 + BD^2 = AD^2$

$(1.8\ m)^2 + BD^2 = (2.4\ m)^2$

$BD^2 = (5.76 - 3.24)\ m^2 = 2.52\ m^2$

$BD = 1.587\ m$


$= BD + 1.2\ m$

$= (1.587 + 1.2)\ m = 2.787\ m$

$= 2.79\ m$

11) 5 ಸೆಂ.ಮೀ ತ್ರಿಜ್ಯದ ವೃತ್ತಕ್ಕೆ ಸ್ಪರ್ಶಕಗಳ ನಡುವಿನ ಕೋನ 60^0 ಇರುವಂತೆ ಒಂದು ಜೊತೆ ಸ್ಪರ್ಶಕಗಳನ್ನು ಎಳೆಯಿರಿ

ಪರಿಹಾರ:–



O ವೃತ್ತ ಕೇಂದ್ರವನ್ನಾಗಿರಿಸಿಕೊಂಡು 5 ಸೆಂ.ಮೀ ತ್ರಿಜ್ಯ ಅಳೆಯುವಂತೆ ವೃತ್ತವನ್ನು ರಚಿಸಿ

PQ ಮತ್ತು PRಗಳು ವೃತ್ತಕ್ಕೆ Q ಮತ್ತು Rಗಳಲ್ಲಿ ರಚಿಸಿದ ಸ್ಪರ್ಶಕಗಳಾದರೆ $\angle QPR = 60^0$

$\angle PQO = \angle ORP = 90^0$

ವೃತ್ತದ ಬಾಹ್ಯ ಬಿಂದುವಿನಲ್ಲಿ ತ್ರಿಜ್ಯಕ್ಕೆ ಎಳೆದ ಸ್ಪರ್ಶಕವು ಲಂಬವಾಗಿರುತ್ತದೆ.

ಚತುರ್ಭುಜ ORPQಯಲ್ಲಿ

$\angle PQO + \angle RPQ + \angle ORP + + \angle QOR = 360^0$

$90^0 + 60^0 + 90^0 + \angle QOR = 360^0$

$\angle QOR = 360^0 - 240^0 = 120^0$

12) ಒಂದು ಸಂಸ್ಥೆಯು ಆರಂಭದ ವರ್ಷದಲ್ಲಿ 400 ಉದ್ಯೋಗಿಗಳನ್ನು ನೇಮಿಸಿಕೊಂಡಿತು ಮತ್ತು ಪ್ರತಿ ವರ್ಷವು ಉದ್ಯೋಗಿಗಳ ಸಂಖ್ಯೆಯನ್ನು 35 ಹೆಚ್ಚಿಸಿತು. ಯಾವ ವರ್ಷದಲ್ಲಿ ಸಂಸ್ಥೆಯಲ್ಲಿನ ಉದ್ಯೋಗಿಗಳ ಸಂಖ್ಯೆಯು 785 ಆಗಿರುತ್ತದೆ.

ಉತ್ತರ:– ಮೊದಲ ವರ್ಷ 400 ಜನಗಳನ್ನು ನೇಮಿಸಿತು. ಒಂದೊಂದು ವರ್ಷವು 35 ಉದ್ಯೋಗಿಗಳ ಹೆಚ್ಚಳವಾಗಿದೆ. ಇದು ಸಮಾಂತರ ಶ್ರೇಢಿಯಲ್ಲಿದೆ.

$\therefore 400, 435, \ldots\ldots\ldots\ldots 785$

$a = 400,\ d = 35 \quad n = ?$

$T_n = a + (n-1)\ d$

$785 = 400 + (n-1)\ 35$

$785 = 400 + 35n - 35$

$785 = 365 + 35n$

$35n = 785 - 365$

$35n = 420$

$n = \frac{420}{35},\ n = 12$

$\therefore$ 12ವರ್ಷದಲ್ಲಿ ಸಂಸ್ಥೆಯಲ್ಲಿನ ಉದ್ಯೋಗಿಗಳ ಸಂಖ್ಯೆಯು 785 ಆಗಿದೆ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC PHYSICS

REVISION


MODEL QUESTIONS

14. Using Brewster's law, to show that reflected and refracted rays are mutually perpendicular to each other at Brewster's angle.

Ans:- Brewster's law - **states that when light is incident at polarizing angle at the interface of a refracting medium, the refractive index of the medium is equal to the tangent of the polarizing angle. If p is polarizing angle and μ, the refractive index of the refracting medium, then according to Brewster's law,**

$$\mu = \tan p \quad \ldots\ldots.(1)$$

When light is incident at polarizing angle, the reflected light is found to be completely plane polarized.



When light is incident at polarising angle p on a refracting medium of refractive index μ, let r be the angle of refraction. Then, according to Snell's law,

$$\mu = \frac{\sin p}{\sin r} \quad \ldots\ldots\ldots\ldots.(2)$$

From the equations (1) and (2), we have

$$\frac{\sin p}{\sin r} = \tan p$$

$$(or)\ \frac{\sin p}{\sin r} = \frac{\sin p}{\cos p}$$

(or) $\sin r = \cos p$ (or) $\sin r = \sin(90^\circ - p)$

(or) $r = 90^\circ - p$ (or) $r + p = 90^\circ$

Now, angle of reflection i.e., $\angle NBC = p$, the angle of incidence. Since $r + p = 90^\circ$, it follows that $\angle CBD = 90^\circ$ i.e. reflected ray BC is perpendicular to refracted ray BD.


Hence, when a ray of light is incident at polarizing angle, the reflected ray is at right angle to the refracted ray.

15. When are the resistors said to be in parallel? Obtain an expression for effective resistance of three resistors in parallel.

Ans:-(a) Two or more resistors are said to be connected in parallel if one end of a resistor is connected to one end of the other resistor and the second end of the first resistor is connected to second end of the other resistor such that the potential difference across each resistor is equal to the applied potential difference across the combination.

b) Obtain an expression for effective resistance of three resistors in parallel –

Consider three resistors of resistances R_1, R_2 and R_3 respectively connected in parallel.



Let V be the potential difference across each resistor. The current I drawn from the cell divides into three parts (i.e., I_1, I_2 and I_3) at junction point A.

Let current I_1, I_2 and I_3 flow through the resistors R_1, R_2 and R_3 respectively,

$$\text{Then } I = I_1 + I_2 + I_3$$

$$\text{Here } I = \frac{V}{R_1}, I_2 = \frac{V}{R_2} \text{ and } I_3 = \frac{V}{R_3}$$

$$\therefore\ I = \frac{V}{R_1} + \frac{V}{R_2} + \frac{V}{R_3} = V\left(\frac{1}{R_1} + \frac{1}{R_2} + \frac{1}{R_3}\right)$$

If R_P is the effective or equivalent resistance of the parallel combination, then

$$I = \frac{V}{R_P}$$

$$\text{Hence eqn.(ii) becomes } \frac{V}{R_P} = V\left(\frac{1}{R_1} + \frac{1}{R_2} + \frac{1}{R_3}\right)$$


$$\therefore\ \frac{1}{R_P} = \frac{1}{R_1} + \frac{1}{R_2} + \frac{1}{R_3}$$

16. Derive an expression for impedance and current in LCR series circuit using phasor diagram.

Ans:- An expression for impedance and current in LCR series circuit using phasor diagram.

L, C AND R IN SERIES ACROSS AN ALTERNATING SUPPLY

A circuit containing inductor of pure inductance (L), capacitor of pure capacitance (C) and resistor of resistance, (R), all jointed in series across an a.c. supply, is shown in figure (a). Let V be the r.m.s. value of the applied alternating e.m.f. to the LCR circuit.



Phasor-diagram Solution of Series LCR circuit

Let I be the r.m.s. value of current flowing through all the circuit elements.

The potential difference across inductor, $V_L = I X_L$

This potential difference or voltage leads current I by an angle of $\pi/2$.

This potential difference across C, $V_C = I X_C$

(Contd......)

ವಾಹನ ನಿಲ್ಲಿಸಿದ್ದಕ್ಕೆ ಕೇಂದ್ರ ಸಚಿವರ ಆಕ್ಷೇಪ

ಪ್ರಜಾವಾಣಿ ವಾರ್ತೆ

ಹಾಸನ: ಹೊಳೆನರಸೀಪುರ ತಾಲ್ಲೂಕಿನ ಹಳೇಕೋಟೆಯಲ್ಲಿ ಸೋಮವಾರ ಆಯೋಜಿಸಿದ್ದ ವಿಕಸಿತ ಭಾರತ ಕಾರ್ಯಕ್ರಮಕ್ಕೆ ತೆರಳುತ್ತಿದ್ದಾಗ, ತಮ್ಮ ವಾಹನವನ್ನು ಎಚ್.ಡಿ.ದೇವೇಗೌಡರ ಮನೆ ಎದುರು ನಿಲ್ಲಿಸಿದ್ದಕ್ಕೆ ಕೇಂದ್ರ ಸಚಿವ ಹರದೀಪ್‌ಸಿಂಗ್ ಪುರಿ ಆಕ್ರೋಶ ವ್ಯಕ್ತಪಡಿಸಿದರು.

ಹಳೇಕೋಟೆಯ ಮಾರ್ಗಮಧ್ಯೆ ಹರದನಹಳ್ಳಿ ಗ್ರಾಮದ ದೇವೇಗೌಡರ ನೂತನ ಮನೆಯ ಎದುರು ನಿಂತಿದ್ದ ಶಾಸಕ ಎಚ್.ಡಿ. ರೇವಣ್ಣ ಅವರನ್ನು ನೋಡಿದ ಬೆಂಗಾವಲು ಪೊಲೀಸರು ವಾಹನವನ್ನು ನಿಲ್ಲಿಸಿದ್ದರು. ಆಗ ಸಚಿವರಿಗೆ ರೇವಣ್ಣ ಹಾರ ಹಾಕಿ ಸನ್ಮಾನಿಸಿದ್ದರು.

ನಂತರ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಚಿವರು, 'ಮಾರ್ಗಮಧ್ಯೆ ಏಕೆ ವಾಹನ ನಿಲ್ಲಿಸಿದ್ದೀರಿ? ಯಾರು ನಿಮಗೆ ವಾಹನ ನಿಲ್ಲಿಸಲು ಹೇಳಿದ್ದು? ನನ್ನ ಸಮಯ ವ್ಯರ್ಥ ಮಾಡಬೇಡಿ' ಎಂದು ಆಕ್ರೋಶ ವ್ಯಕ್ತಪಡಿಸಿದರು. ಬೆಂಗಾವಲು ಪೊಲೀಸರ ಹೆಸರು ಬರೆದುಕೊಳ್ಳುವಂತೆ ಆಪ್ತ ಸಹಾಯಕರಿಗೆ ಸೂಚನೆ ನೀಡಿದರು.

ಕೋಚಿಮುಲ್ ಕಚೇರಿ, ಅಧಿಕಾರಿಗಳ ನಿವಾಸ ಸೇರಿ 15 ಕಡೆಗಳಲ್ಲಿ ಇ.ಡಿ ದಾಳಿ

ಶಾಸಕ ನಂಜೇಗೌಡ ಮನೆಯಲ್ಲಿ ಶೋಧ

ಪ್ರಜಾವಾಣಿ ವಾರ್ತೆ



ಕೆ.ವೈ. ನಂಜೇಗೌಡ

ಕೋಲಾರ: ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಯ ಸಹಕಾರ ಹಾಲು ಒಕ್ಕೂಟದ (ಕೋಚಿಮುಲ್) ಅಧ್ಯಕ್ಷ, ಮಾಲೂರು ಕಾಂಗ್ರೆಸ್ ಶಾಸಕ ಕೆ.ವೈ.ನಂಜೇಗೌಡ ಅವರ ಮನೆ ಹಾಗೂ ಕಚೇರಿ ಸೇರಿದಂತೆ 15 ಕಡೆ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಸೋಮವಾರ ಶೋಧ ನಡೆಸಿದ್ದಾರೆ.

ಶಾಸಕರ ಮಾಲೂರು ತಾಲ್ಲೂಕಿನ ಕೊಮ್ಮನಹಳ್ಳಿ ಮನೆ, ಕೆ.ಆರ್.ಪುರಂ ನಲ್ಲಿರುವ ಮನೆ, ಆಪ್ತ ಸಹಾಯಕ ಹರೀಶ್ ಅವರ ದೊಡ್ಡಮಲ್ಲೆ ಗ್ರಾಮದ ಮನೆ, ಕೊಮ್ಮನಹಳ್ಳಿಯಲ್ಲಿರುವ ನಂಜುಂಡೇಶ್ವರ ಸ್ಟೋನ್ ಕ್ರಷರ್, ಕೋಲಾರ ತಾಲ್ಲೂಕಿನ ಬೆಳಗಾನಹಳ್ಳಿಯಲ್ಲಿರುವ ಕೋಚಿಮುಲ್ ಮುಖ್ಯ ಕಚೇರಿ, ವ್ಯವಸ್ಥಾಪಕ ನಿರ್ದೇಶಕ ಗೋಪಾಲಮೂರ್ತಿ ಅವರ ಕೋಲಾರ ಮನೆ, ಆಡಳಿತಾತ್ಮಕ ನಿರ್ದೇಶಕ ನಾಗೇಶ್ ಅವರ ಬೆಂಗಳೂರಿನ ರಾಮಮೂರ್ತಿನಗರ ಮನೆಯನ್ನು ಅಧಿಕಾರಿಗಳು ಜಾಲಾಡಿದ್ದಾರೆ.

ಅಲ್ಲದೇ, ಕೋಲಾರ ನಗರದಲ್ಲಿರುವ ನಂಜೇಗೌಡ ಅವರ ಆಡಿಟರ್ ಕಚೇರಿ, ಬಗರ್ ಹುಕುಂ ಸಮಿತಿ ಮಾಜಿ ಸದಸ್ಯ, ಬೆಂಬಲಿಗ ಅಬ್ಬೇನಹಳ್ಳಿಯ ಗೋಪಾಲಪ್ಪ ಮನೆ, ಮಾಲೂರಿನ ಹಿಂದಿನ ತಹಶೀಲ್ದಾರ್ ಅವರ ಕೋಲಾರ ಹಾಗೂ ಬೆಂಗಳೂರು ಮನೆ, ಕೋಚಿಮುಲ್ ಮಾಲೂರು ಘಟಕ ಕಚೇರಿಯಲ್ಲೂ ಅಧಿಕಾರಿಗಳು ಶೋಧ ನಡೆಸಿರುವುದು ಗೊತ್ತಾಗಿದೆ.

ಮಾಲೂರು ತಾಲ್ಲೂಕು ಕಚೇರಿ ಬಾಗಿಲು ಹಾಕಿದ ಇ.ಡಿ ಅಧಿಕಾರಿಗಳು ತಹಶೀಲ್ದಾರ್ ರಮೇಶ್ ಅವರಿಂದ ಮಾಹಿತಿ ಸಂಗ್ರಹಿಸಿದ್ದಾರೆ. ಎಂ.ಡಿ ಗೋಪಾಲಮೂರ್ತಿ ಅವರನ್ನು ಕೋಚಿಮುಲ್ ಕಚೇರಿಗೆ ಕರೆಯಿಸಿಕೊಂಡು ದಾಖಲೆ ಪರಿಶೀಲಿಸಿದರು. ಶೋಧ ರಾತ್ರಿವರೆಗೂ ಮುಂದುವರಿದಿತ್ತು.

ಈ ನಡುವೆ, ನಂಜೇಗೌಡ ಅವರ ಮನೆಗೆ ಹಲವರನ್ನು ಕರೆಯಿಸಿಕೊಂಡು ಅಧಿಕಾರಿಗಳು ಮಾಹಿತಿ ಪಡೆದರು. ಮನೆಯೊಳಗೆ ಇದ್ದ ಶಾಸಕರು ಒಂದೆರಡು ಬಾರಿ ಹೊರಗೆ ಬಂದು ಹೋದರು. ಎಲ್ಲಾ ಸ್ಥಳಗಳಲ್ಲಿಯೂ ಸಿಆರ್‌ಪಿಎಫ್ ಸಿಬ್ಬಂದಿ ಭದ್ರತೆ ಒದಗಿಸಿದ್ದರು.

ಚಿಕ್ಕಬಳ್ಳಾಪುರ ವರದಿ: ಕೋಚಿಮುಲ್ ನಿರ್ದೇಶಕ ಅಶ್ವತ್ಥನಾರಾಯಣ (ಉಳ್ಳವಾಡಿ ಬಾಬು) ಅವರ ಚಿಂತಾಮಣಿಯ ಮನೆಯಲ್ಲೂ ಇ.ಡಿ ಅಧಿಕಾರಿಗಳು ದಾಖಲೆಗಳಿಗಾಗಿ ಜಾಲಾಡಿದ್ದಾರೆ.

ಚಿಂತಾಮಣಿ ತಾಲ್ಲೂಕಿನಿಂದ 2 ಬಾರಿ ಪಕ್ಷೇತರರಾಗಿ (ಡಾ.ಎಂ.ಸಿ.ಸುಧಾಕರ್ ಬಣ) ಕೋಚಿಮುಲ್ ನಿರ್ದೇಶಕರಾಗಿರುವ ಬಾಬು ಸುಧಾಕರ್ ಕಾಂಗ್ರೆಸ್ ಸೇರುತ್ತಿದ್ದಂತೆಯೇ ಅವರನ್ನು ಹಿಂಬಾಲಿಸಿದರು. ಈ ಹಿಂದೆ ಒಮ್ಮೆ ತಾಲ್ಲೂಕು ಪಂಚಾಯಿತಿ ಸದಸ್ಯರಾಗಿಯೂ ಕೆಲಸ ಮಾಡಿದ್ದಾರೆ.



ಕಾಂಗ್ರೆಸ್ ಶಾಸಕ ಕೆ.ವೈ.ನಂಜೇಗೌಡರ ಮಾಲೂರು ತಾಲ್ಲೂಕಿನ ಕೊಮ್ಮನಹಳ್ಳಿ ನಿವಾಸದ ಮೇಲೆ ಸೋಮವಾರ ಜಾರಿ ನಿರ್ದೇಶನಾಲಯ ಅಧಿಕಾರಿಗಳು ದಾಳಿ ನಡೆಸಿ ಶೋಧಿಸಿದರು

ಅಭ್ಯರ್ಥಿಗಳ ಬ್ಯಾಂಕ್ ಖಾತೆ ಮಾಹಿತಿ ಕೇಳಿದ ಅಧಿಕಾರಿಗಳು?

ಕೋಚಿಮುಲ್ ವಿವಿಧ ಹುದ್ದೆಗಳಿಗೆ ಹೊಸದಾಗಿ ಆಯ್ಕೆಯಾದ ಅಭ್ಯರ್ಥಿಗಳ ಬ್ಯಾಂಕ್ ಖಾತೆ ಮಾಹಿತಿಯನ್ನು ಅಧಿಕಾರಿಗಳು ಪಡೆದಿದ್ದಾರೆ ಎಂದು ತಿಳಿದು ಬಂದಿದೆ. ಕೆಲಸಕ್ಕೆ ಸೇರಿದ ವಾರದಲ್ಲೇ ಉದ್ಯೋಗಿಗಳ ಖಾತೆಗೆ ಕೋಚಿಮುಲ್‌ನಿಂದ ವೇತನ ಸಂದಾಯವಾಗಿರುವ ಮಾಹಿತಿ ಇದೆ.

ಈ ನಿಟ್ಟಿನಲ್ಲಿ ಕೋಚಿಮುಲ್ ಕಚೇರಿಯ ಹಲವು ಕಂಪ್ಯೂಟರ್ ವಶಕ್ಕೆ ಪಡೆದು ಶೋಧಿಸುತ್ತಿದ್ದಾರೆ. ಶೋಧದ ವೇಳೆ ಕೆಲವು ಸ್ಥಳಗಳಲ್ಲಿ ₹2 ಸಾವಿರ ಮುಖಬೆಲೆಯ ನೋಟುಗಳು ಸಿಕ್ಕಿವೆ ಎಂದು ಮೂಲಗಳು ಹೇಳಿವೆ.

ಕೋಚಿಮುಲ್ ನೇಮಕಾತಿ ಸದ್ದು

ಕೋಚಿಮುಲ್‌ನ 75 ಹುದ್ದೆಗಳ ಭರ್ತಿಗೆ ನಡೆದ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎನ್ನುವ ಆರೋಪ ಕೇಳಿ ಬಂದಿತ್ತು. ಘೋಷಣೆಗೆ ಮುನ್ನವೇ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಅಭ್ಯರ್ಥಿಗಳ ಹೆಸರು ಮತ್ತು ಶಿಫಾರಸು ಮಾಡಿದವರು ಹೆಸರೂ ಇತ್ತು.

ಮಾಹಿತಿ ಹೊರಹಾಕಿದ್ದ ನಾಗೇಶ್ ಎಂಬ ಸಿಬ್ಬಂದಿ ಮೇಲೆ ಪ್ರಕರಣ ದಾಖಲಿಸಲಾಗಿತ್ತು. ಕೋಚಿಮುಲ್ ಅಧ್ಯಕ್ಷ ನಂಜೇಗೌಡ ಸುದ್ದಿಗೋಷ್ಠಿಯಲ್ಲಿ ಓದಿ ಹೇಳಿದ ಅಂತಿಮ ಆಯ್ಕೆ ಪಟ್ಟಿಯಲ್ಲಿ ಜಾಲತಾಣದಲ್ಲಿ ಹರಿದಾಡಿದ್ದ ಪಟ್ಟಿಯಲ್ಲಿದ್ದ ಹಲವರ ಹೆಸರು ಕೂಡ ಇದ್ದವು.

'ನೇಮಕಾತಿ ಪ್ರಕ್ರಿಯೆಯಲ್ಲಿ ₹40 ಕೋಟಿ ಅವ್ಯವಹಾರ ನಡೆದಿದ್ದು, ಸಿಬಿಐ ತನಿಖೆಗೆ ಒಪ್ಪಿಸಬೇಕು. ಅಭ್ಯರ್ಥಿಗಳ ವೇತನದ ಆಧಾರದ ಮೇಲೆ ಹಣ ಪಡೆಯಲಾಗಿದೆ' ಎಂದು ಬಿಜೆಪಿ ಸಂಸದ ಎಸ್.ಮುನಿಸ್ವಾಮಿ ಆರೋಪಿಸಿದ್ದರು. ಮಾಜಿ ಸಚಿವ ಡಾ.ಕೆ.ಸುಧಾಕರ್ ಕೂಡ ಅಕ್ರಮದ ಆರೋಪ ಮಾಡಿದ್ದರು.

> **ಕೋಚಿಮುಲ್ ಅಧ್ಯಕ್ಷ ಮತ್ತು ನಿರ್ದೇಶಕರ ಮನೆ ಮೇಲಿನ ಇ.ಡಿ ದಾಳಿಯು ತನಿಖಾ ಸಂಸ್ಥೆಗಳನ್ನು ಬಿಜೆಪಿ ಸ್ವಾರ್ಥಕ್ಕಾಗಿ ಉಪಯೋಗಿಸುತ್ತಿರುವುದಕ್ಕೆ ಮತ್ತೊಂದು ಉದಾಹರಣೆ ಆಗಿದೆ**
> **ಡಾ.ಎಂ.ಸಿ.ಸುಧಾಕರ್,** ಜಿಲ್ಲಾ ಉಸ್ತುವಾರಿ ಸಚಿವ

ಶುಲ್ಕರಹಿತ ಸಹಾಯವಾಣಿಗೆ ಚಾಲನೆ

ಪಣಜಿ(ಪಿಟಿಐ): ಅಂಗವೈಕಲ್ಯಕ್ಕೆ ಸಂಬಂಧಿಸಿದ ಎಲ್ಲ ಪ್ರಶ್ನೆಗಳಿಗೆ ಪರಿಹಾರ ಒದಗಿಸುವ ರಾಷ್ಟ್ರಮಟ್ಟದ ಮೊದಲ ಶುಲ್ಕ ರಹಿತ ಸಹಾಯವಾಣಿ 1800-22-2014ಕ್ಕೆ ಸೋಮವಾರ ಚಾಲನೆ ನೀಡಲಾಗಿದೆ.

ಗೊಲ್ಲರಹಟ್ಟಿಗೆ ಜಿಲ್ಲಾಧಿಕಾರಿ ಮೀನಾ ನಾಗರಾಜ್ ಭೇಟಿ

ಶೂ ಧರಿಸಿ ಬಂದ ಮಕ್ಕಳು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ತರೀಕೆರೆ ತಾಲ್ಲೂಕಿನ ಗೇರುಮರಡಿ ಗೊಲ್ಲರಹಟ್ಟಿಗೆ ಜಿಲ್ಲಾಧಿಕಾರಿ ಮೀನಾ ನಾಗರಾಜ್ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ ಅಮಟೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸಮವಸ್ತ್ರ ಮತ್ತು ಶೂ ಸಹಿತ ಮಕ್ಕಳು ಶಾಲೆಗೆ ಸೋಮವಾರ ಹಾಜರಾಗಿದ್ದರು.

ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಮತ್ತು ಗೊಲ್ಲರಹಟ್ಟಿಯ ಜನರನ್ನು ಭೇಟಿ ಮಾಡಿ ಮಾಹಿತಿ ಪಡೆದುಕೊಂಡರು. ಎಲ್ಲಾ ವಿದ್ಯಾರ್ಥಿಗಳು ಸಮವಸ್ತ್ರ ಮತ್ತು ಶೂ ಧರಿಸಿ ಬಂದಿದ್ದನ್ನು ಗಮನಿಸಿದರು. ಮೌಢ್ಯಾಚರಣೆ ಬಿಟ್ಟು, ಶಿಕ್ಷಣದ ಕಡೆಗೆ ಗಮನ ಕೊಡಬೇಕು. ಉತ್ತಮ ಆರೋಗ್ಯ ಕಾಪಾಡಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

'ಅಸ್ಪೃಶ್ಯತೆ ಆಚರಣೆ ಕಾನೂನಿಗೆ ವಿರುದ್ಧವಾಗಿದೆ. ಆಚಾರ - ವಿಚಾರಗಳು ಮತ್ತೊಬ್ಬರಿಗೆ ಸಮಸ್ಯೆ ತಂದೊಡ್ಡಬಾರದು. ನಂಬಿಕೆ ಇರಲಿ, ಮೂಢನಂಬಿಕೆ ಬೇಡ' ಎಂದು ಹಟ್ಟಿಯ ಜನರಿಗೆ ತಿಳಿವಳಿಕೆ ನೀಡಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಗೋಪಾಲಕೃಷ್ಣ, ಉಪವಿಭಾಗಾಧಿಕಾರಿ ದಲ್ಜಿತ್ ಕುಮಾರ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಯೋಗೇಶ್, ಡಿವೈಎಸ್‌ಪಿ ಹಾಲಮೂರ್ತಿರಾವ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗೀತಾ ಶಂಕರ್ ಇದ್ದರು.

ದಲಿತ ಯುವಕ ಗೊಲ್ಲರಹಟ್ಟಿ ಪ್ರವೇಶ ಮಾಡಿದ್ದಕ್ಕೆ ದೇಗುಲಕ್ಕೆ ಬೀಗ ಹಾಕಿದ್ದ ಕುರಿತು ಮತ್ತು ದಂಡಕ್ಕೆ ಹೆದರಿ ಶೂ ಧರಿಸುವುದನ್ನೇ ಬಿಟ್ಟಿದ್ದ ಮಕ್ಕಳ ಬಗ್ಗೆ 'ಪ್ರಜಾವಾಣಿ' ವರದಿ ಪ್ರಕಟಿಸಿತ್ತು.

ಉಪನ್ಯಾಸಕಿ ಜಿ.ಕೆ.ಪ್ರೇಮಾ ಅವರು ಭಾನುವಾರ ಗ್ರಾಮಕ್ಕೆ ಭೇಟಿ ನೀಡಿ ಮೌಢ್ಯ ಆಚರಣೆಯಿಂದ ಹೊರ ಬರಲು ಗೊಲ್ಲರಹಟ್ಟಿ ಜನರಲ್ಲಿ ಜಾಗೃತಿ ಮೂಡಿಸಿದ್ದರು.

ವರದಿ ಪರಿಣಾಮ



ಗೇರುಮರಡಿ ಶಾಲೆಗೆ ಜಿಲ್ಲಾಧಿಕಾರಿ ಮೀನಾ ನಾಗರಾಜ್ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಮಾತನಾಡಿದರು

ವಿದ್ಯುತ್ ಪ್ರವಹಿಸಿ ಮೂವರು ಸಾವು

ಒಂದನೇ ಪುಟದಿಂದ...

ಮೃತ ಮುರಳಿ ಅವರ ತಂದೆ ಮಗ ಮೃತಪಟ್ಟ ಘಟನೆಯನ್ನು ವಿವರಿಸುವಾಗ ಯಶ್ ದುಃಖಿತರಾದರು. ಬಳಿಕ ನವೀನ ಮತ್ತು ಹನುಮಂತಪ್ಪ ಅವರ ಮನೆಗಳಿಗೆ ತೆರಳಿ ಸಾಂತ್ವನ ಹೇಳಿದರು.

'ಯಶ್ ಬರ್ತ್‌ಡೇ ಇದೆ ಅಂತ ನನಗೆ ಹೊಸ ಸೀರೆ ತಂದಿದ್ದ. ಸೋಮವಾರ ಸಿಹಿ ಹಂಚಿ, ಊಟ ಹಾಕಿಸುವೆ ಅಂತ ಹೇಳಿದ್ದ. ಭಾನುವಾರ ಬೆಳಿಗ್ಗೆಯಷ್ಟೇ ಹಿಂಗೆಲ್ಲಾ ಮಾತನಾಡಿದ್ದ ಹನುಮಂತ ಈಗ ಇಲ್ಲ. ಅವನಿಲ್ಲ ಎಂಬ ನೋವು ಹೇಗೆ ತಡೆದುಕೊಳ್ಳಲಿ' ಎಂದು ಕುಟುಂಬದವರು ಕಣ್ಣೀರು ಹಾಕಿದರು. ಆಗ, ಯಶ್ ಅವರ ಪೋಷಕರು ಹಸ್ತ ಹಿಡಿದು ಕಣ್ಣೀರಾದರು. ಜನಸಂದಣಿ ನಿಯಂತ್ರಿಸಲು ಪೊಲೀಸರು ಲಾಠಿ ಬೀಸಬೇಕಾಯಿತು.

ಅಂತ್ಯ ಸಂಸ್ಕಾರ: ಮೃತಪಟ್ಟ ಮೂವರು ಯುವಕರನ್ನು ಸಾಮೂಹಿಕವಾಗಿ ಅಂತ್ಯ ಸಂಸ್ಕಾರ ಮಾಡಲಾಯಿತು. ಮೃತ ಯುವಕರ ಕುಟುಂಬಕ್ಕೆ ರಾಜ್ಯ ಸರ್ಕಾರ ತಲಾ ₹2 ಲಕ್ಷ ಹಾಗೂ ಗಾಯಾಳುಗಳ ಕುಟುಂಬಕ್ಕೆ ₹50 ಸಾವಿರ ಪರಿಹಾರ ಘೋಷಣೆ ಮಾಡಿದೆ.

ಶಿರಹಟ್ಟಿ ಮೀಸಲು ಕ್ಷೇತ್ರದ ಶಾಸಕ ಡಾ. ಚಂದ್ರು ಲಮಾಣಿ ವೈಯಕ್ತಿಕವಾಗಿ ಮೃತ ಕುಟುಂಬಗಳಿಗೆ ತಲಾ ₹25 ಸಾವಿರ ಹಣ ನೀಡಿದ್ದಾರೆ. ಜತೆಗೆ ಕಾಂಗ್ರೆಸ್ ಮುಖಂಡ ಆನಂದ ಗಡ್ಡದೇವರ ಮಠ ಅವರ ಅಭಿಮಾನಿ ಸಂಘದವರು ಮೃತರ ಕುಟುಂಬಗಳಿಗೆ ತಲಾ ₹50 ಸಾವಿರ ಪರಿಹಾರ ಘೋಷಣೆ ಮಾಡಿದ್ದಾರೆ.

'ಬರ್ತ್‌ಡೇ ಅಂದರೆ ಭಯ'

ಒಂದನೇ ಪುಟದಿಂದ...

'ಕೋವಿಡ್ ಹೆಚ್ಚುತ್ತಿದೆ ಎಂಬ ಕಾರಣಕ್ಕೆ ನಾನು ಈ ವರ್ಷ ಜನರಿಂದ ದೂರ ಉಳಿದು ಕುಟುಂಬದ ಸದಸ್ಯರ ಜತೆಗಷ್ಟೇ ಜನ್ಮದಿನ ಆಚರಿಸಲು ನಿರ್ಧರಿಸಿದ್ದೆ. ಜತೆಗೆ ಅಭಿಮಾನಿಗಳು ಕೇವಲ ನನ್ನ ಬಗ್ಗೆ ಯೋಚನೆ ಮಾಡಿಕೊಂಡು ಇರಬಾರದು. ಅವರೂ ನಮ್ಮಂತೆ ಬೆಳೆಯಬೇಕು ಎಂಬ ಆಸೆಯಿಂದ ನಾನು ಆದಷ್ಟೂ ಜನರಿಂದ ದೂರವೇ ಉಳಿಯಲು ಬಯಸುವೆ. ಆದರೂ, ಪ್ರತಿವರ್ಷ ಈ ಬಗೆಯ ಒಂದಿಲ್ಲೊಂದು ಘಟನೆಗಳು ನಡೆಯುತ್ತಲೇ ಇರುತ್ತವೆ. ಈ ಕಾರಣಕ್ಕೆ ಜನ್ಮದಿನಾಚರಣೆ ಅಂದರೆ ಭಯ ಶುರುವಾಗಿದೆ' ಎಂದರು.

'ಮೃತ ಯುವಕರ ಕುಟುಂಬಕ್ಕೆ ನೆರವಾಗುವಿರಾ?' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಯಶ್, 'ಸೂತಕದ ಮನೆಯಲ್ಲಿ ನಿಂತು ಏನು ಬೇಕಾದರೂ ಘೋಷಣೆ ಮಾಡಬಹುದು; ಅದೇನು ದೊಡ್ಡದಲ್ಲ. ಆದರೆ, ಮನೆಗೆ ಆಧಾರಸ್ತಂಭವಾಗಿದ್ದ ಮಕ್ಕಳನ್ನು ಕಳೆದುಕೊಂಡಿರುವ ಅವರ ಕುಟುಂಬಕ್ಕೆ ನಿಜವಾಗಿ ಏನು ಅವಶ್ಯಕತೆ ಇದೆ ಎಂಬುದನ್ನು ಅರಿತುಕೊಂಡು ಅವರಿಗೆ ನೆರವಾಗುವೆ' ಎಂದು ತಿಳಿಸಿದರು.

'ಅಭಿಮಾನಿಗಳ ತಂದೆ ತಾಯಿ ಮೇಲಿನ ಗೌರವದಿಂದ ಮನೆಗೆ ಭೇಟಿ ಕೊಟ್ಟು ಸಾಂತ್ವನ ಹೇಳಿರುವೆ. ಮನೆಯಲ್ಲಿರುವ ತಂದೆ ತಾಯಿ ಬಗ್ಗೆ ಯುವಕರು ಗಮನ ಕೊಡಲಿ' ಎಂದು ಅಭಿಮಾನಿಗಳಲ್ಲಿ ಮನವಿ ಮಾಡಿದರು.

ನೂರು ದಿನ ಬಿಜೆಪಿ ಪ್ರಚಾರ

ಒಂದನೇ ಪುಟದಿಂದ...

ಕೇಂದ್ರ ಸರ್ಕಾರದ ಪ್ರಮುಖ ನಿರ್ಧಾರಗಳ ಕುರಿತ ಮಾಹಿತಿಯನ್ನು ಮತದಾರರಿಗೆ ತಲುಪಿಸುವುದು, ಕೇಂದ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳ ಸಮಾವೇಶದ ಮೂಲಕ ಅವರನ್ನು ಪಕ್ಷದೆಡೆಗೆ ಆಕರ್ಷಿಸುವುದು, ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳ ಕುರಿತು ಜನಜಾಗೃತಿ ನಡೆಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

> **ದೇಶದಾದ್ಯಂತ ಬಿಜೆಪಿ ಪರವಾದ ವಾತಾವರಣ ಇದೆ. ರಾಜ್ಯದಲ್ಲಿ ಬಿಜೆಪಿ ಮೈತ್ರಿಕೂಟವು ಎಲ್ಲ ಲೋಕಸಭಾ ಸ್ಥಾನಗಳಲ್ಲಿ ಗೆಲ್ಲುವ ವಿಶ್ವಾಸವಿದೆ**
> **ಬಿ.ವೈ. ವಿಜಯೇಂದ್ರ** ಅಧ್ಯಕ್ಷ, ರಾಜ್ಯ ಬಿಜೆಪಿ ಘಟಕ

ದರ್ಶನ್ ಸೇರಿ 8 ಮಂದಿಗೆ ನೋಟಿಸ್

ಒಂದನೇ ಪುಟದಿಂದ...

'ಸ್ಥಳಕ್ಕೆ ತೆರಳಿದ್ದ ಬೀಟ್ ಪೊಲೀಸ್ ಸಿಬ್ಬಂದಿ ರಾತ್ರಿ ಒಂದು ಗಂಟೆಯ ಒಳಗಾಗಿ ಪಾರ್ಟಿ ಪೂರ್ಣಗೊಳಿಸುವಂತೆ ಸೂಚಿಸಿ ತೆರಳಿದ್ದರು. ಆದರೂ, ಮುಂಜಾನೆವರೆಗೂ ಪಾರ್ಟಿ ನಡೆದಿತ್ತು' ಎಂದು ಮೂಲಗಳು ಹೇಳಿವೆ.

'ಪಬ್ ಮಾಲೀಕರಾದ ಶಶಿರೇಖಾ ಜಗದೀಶ್ ಹಾಗೂ ವ್ಯವಸ್ಥಾಪಕ ವ್ಯವಸ್ಥಾಪಕ ಪ್ರಶಾಂತ್ ವಿರುದ್ಧ ಕರ್ನಾಟಕ ಪೊಲೀಸ್ ಕಾಯ್ದೆ ಮತ್ತು ಅಬಕಾರಿ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗಿತ್ತು. ಸಿ.ಸಿ. ಟಿ.ವಿ ಕ್ಯಾಮೆರಾ ಪರಿಶೀಲಿಸಿ ಚಿತ್ರರಂಗದ ಎಂಟು ಮಂದಿಗೆ ನೋಟಿಸ್ ಜಾರಿ ಮಾಡಲಾಗಿದೆ. ಪೊಲೀಸ್ ಸಿಬ್ಬಂದಿ ಖುದ್ದು ನಟರ ಮನೆಗಳಿಗೆ ನೋಟಿಸ್ ತಲುಪಿಸಿದ್ದಾರೆ. ಅವರ ವಾಟ್ಸ್‌ಆ್ಯಪ್ ಸಂಖ್ಯೆಗೂ ನೋಟಿಸ್ ಕಳುಹಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

₹150 ಕೋಟಿ ರಹಸ್ಯ ವಹಿವಾಟು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಸ್‌ಮಸ್ ಹಾಗೂ ವರ್ಷಾಂತ್ಯದ ದಿನಗಳಲ್ಲಿ ರಾಜ್ಯದ ವಿವಿಧೆಡೆ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಬೇಕರಿಗಳು, ರೆಸಾರ್ಟ್‌ಗಳಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಂಚಿಸಲು ₹ 150 ಕೋಟಿ ಮೌಲ್ಯದ ಗೋಪ್ಯ ವಹಿವಾಟು ನಡೆಸಿರುವುದನ್ನು ವಾಣಿಜ್ಯ ತೆರಿಗೆ ಇಲಾಖೆಯ ಜಾರಿ ವಿಭಾಗ ಪತ್ತೆಮಾಡಿದೆ.

'ರಾಜ್ಯದ ವಿವಿಧೆಡೆ 242 ಹೋಟೆಲ್, ರೆಸ್ಟೋರೆಂಟ್, ಬೇಕರಿ ಮತ್ತು ರೆಸಾರ್ಟ್‌ಗಳಲ್ಲಿ ತಪಾಸಣೆ ನಡೆಸಲಾಗಿದೆ. ನೇತ್ರಾಣಿ ದ್ವೀಪದಲ್ಲಿ ಸ್ಕೂಬಾ ಡೈವಿಂಗ್ ಸೇವೆ ಒದಗಿಸುವ ಉದ್ಯಮಗಳಲ್ಲೂ ತಪಾಸಣೆ ನಡೆಸಲಾಗಿದೆ. ಈ ಅವಧಿಯಲ್ಲಿ ತೆರಿಗೆ ವಂಚನೆಯ ಹಲವು ಪ್ರಕರಣಗಳನ್ನು ಪತ್ತೆಮಾಡಲಾಗಿದೆ' ಎಂದು ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತೆ ಸಿ. ಶಿಖಾ ತಿಳಿಸಿದ್ದಾರೆ.

ತೆರಿಗೆ ವಂಚಿಸಿ ವಹಿವಾಟು ನಡೆಸಿರುವುದು, ಗ್ರಾಹಕರಿಂದ ಸಂಗ್ರಹಿಸಿದ ತೆರಿಗೆ ಮೊತ್ತವನ್ನು ಇಲಾಖೆಗೆ ಸಂದಾಯ ಮಾಡದಿರುವುದು, ಅಕ್ರಮವಾಗಿ ಹೂಡುವಳಿ ತೆರಿಗೆ ಪಡೆದಿರುವುದು, ತೆರಿಗೆ ದರದ ತಪ್ಪು ವರ್ಗೀಕರಣ, ಕ್ಲೌಡ್ ಸಂಗ್ರಹದಲ್ಲಿ ವಹಿವಾಟಿನ ಮಾಹಿತಿ ಮುಚ್ಚಿಟ್ಟಿರುವುದು, ನಿಗದಿತ ಮಿತಿಗಿಂತ ಹೆಚ್ಚಿನ ಮೊತ್ತದ ವಹಿವಾಟು ನಡೆಸುತ್ತಿದ್ದರೂ ಜಿಎಸ್‌ಟಿ ನೋಂದಣಿ ಮಾಡಿಸದೇ ಇರುವುದು ಪತ್ತೆಯಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಕೆಲವು ವರ್ತಕರು ತೆರಿಗೆ ವಂಚಿಸಲು ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡಿರುವುದು ಕಂಡುಬಂದಿದೆ. ಕೆಲವು ವರ್ತಕರು ಹಲವು ಕ್ಯೂಆರ್ ಕೋಡ್‌ಗಳನ್ನು ಬಳಸಿಕೊಂಡು ಗ್ರಾಹಕರಿಂದ ಹಣ ಪಡೆಯುತ್ತಿದ್ದು, ಕೆಲವು ಕ್ಯೂಆರ್ ಕೋಡ್‌ಗಳ ಮೂಲಕ ಸಂಗ್ರಹವಾದ ಹಣದ ಮಾಹಿತಿಯನ್ನು ಮಾತ್ರ ಇಲಾಖೆಗೆ ಸಲ್ಲಿಸುತ್ತಿದ್ದಾರೆ ಎಂದಿದ್ದಾರೆ.

ಲ್ಯಾಪ್‌ಟಾಪ್, ಮೊಬೈಲ್, ದತ್ತಾಂಶ ಸಂಗ್ರಹ ಸಾಧನಗಳು ಹಾಗೂ ಡಿಜಿಟಲ್ ಸಾಕ್ಷ್ಯಗಳನ್ನು ಕಾರ್ಯಾಚರಣೆ ವೇಳೆ ವಶಪಡಿಸಿಕೊಳ್ಳಲಾಗಿದೆ. ತೆರಿಗೆ ವಂಚಿಸಿರುವ ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಬೇಕರಿ ಮಾಲೀಕರ ವಿರುದ್ಧ ಕಾನೂನು ಕ್ರಮದ ಪ್ರಕ್ರಿಯೆಯನ್ನೂ ಆರಂಭಿಸಲಾಗಿದೆ. ಕೆಲವರು ಸ್ವಯಂಪ್ರೇರಣೆಯಿಂದ ತೆರಿಗೆ ಬಾಕಿಯನ್ನು ಪಾವತಿಸಲು ಆರಂಭಿಸಿದ್ದಾರೆ ಎಂದು ಶಿಖಾ ಹೇಳಿದ್ದಾರೆ.

ಬೆಳಗಾವಿಯ ಮರಾಠಿಗರನ್ನು ಸೆಳೆಯಲು ತಂತ್ರ


ಆರೋಗ್ಯ ವಿಮೆ ಕೇಂದ್ರ ತೆರೆದ ಮಹಾರಾಷ್ಟ್ರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕರ್ನಾಟಕದ ಗಡಿಯೊಳಗಿನ 865 ಹಳ್ಳಿ-ಪಟ್ಟಣಗಳ ಜನರಿಗಾಗಿ ಮಹಾರಾಷ್ಟ್ರ ಸರ್ಕಾರ ಜಾರಿಗೆ ತಂದ 'ಮಹಾತ್ಮ ಜ್ಯೋತಿರಾವ್ ಫುಲೆ ಜನಾರೋಗ್ಯ ವಿಮೆ' ಯೋಜನೆಯ ಅನುಷ್ಠಾನಕ್ಕೆ ಈಗ ಬೆಳಗಾವಿ ನಗರದಲ್ಲೇ ಐದು ಕೇಂದ್ರಗಳನ್ನು ತೆರೆಯಲಾಗಿದೆ. ಐದೂ ಕಡೆ ಸಹಾಯವಾಣಿ, ಅರ್ಜಿ ವಿತರಣೆ- ಸ್ವೀಕಾರ ಹಾಗೂ ಎಂಇಎಸ್ ಶಿಫಾರಸು ಪತ್ರ ಕೂಡ ನೀಡಲಾಗುತ್ತಿದೆ.

ಕರ್ನಾಟಕ- ಮಹಾರಾಷ್ಟ್ರ ಗಡಿ ವಿವಾದದ ಮಹಾರಾಷ್ಟ್ರದ ಉನ್ನತಾಧಿಕಾರ ಸಮಿತಿ ಅಧ್ಯಕ್ಷ ಹಾಗೂ ಸಂಸದ ಧೈರ್ಯಶೀಲ ಮಾನೆ ಅವರು ಜ.4ರಂದು ಬೆಳಗಾವಿಯಲ್ಲಿ ಗೋಪ್ಯ ಸಭೆ ಮಾಡಿ, ಕೈಪಿಡಿ ಬಿಡುಗಡೆ ಮಾಡಿದ್ದಾರೆ. ಐದು ಕೇಂದ್ರಗಳನ್ನು ಉದ್ಘಾಟಿಸಿ, ಮೊಬೈಲ್ ಸಂಖ್ಯೆಗಳನ್ನೂ ನೀಡಿದ್ದಾರೆ. ಪ್ರತಿ ಕೇಂದ್ರದಲ್ಲಿ ನಾಲ್ವರು ಸಹಾಯಕರನ್ನು ನೇಮಿಸಿದ್ದಾರೆ. ಅವರು ಬಂದು ಹೋದ ನಾಲ್ಕೆ ದಿನಗಲ್ಲಿ ಕೇಂದ್ರಗಳು ಕಾರ್ಯಾರಂಭ ಮಾಡಿವೆ.

ಎಂಇಎಸ್ ಶಿಫಾರಸು ಮಾತ್ರ ಸಾಕು!: ಆರೋಗ್ಯ ವಿಮೆ ಪಡೆಯಲು 'ನಾನು ಮರಾಠಿಗ' ಎಂಬ ಮುಚ್ಚಳಿಕೆ ಕೊಡುವುದು ಕಡ್ಡಾಯ. ಆದರೆ, ಯಾರಿಗೆ ಎಷ್ಟು ಹಣ ಮಂಜೂರು ಮಾಡಬೇಕು ಎಂಬುದನ್ನು ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಶಿಫಾರಸು ಮಾಡುತ್ತದೆ. ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ರೇಷನ್ ಕಾರ್ಡ್ ಸೇರಿದಂತೆ ಕರ್ನಾಟಕದ ಯಾವುದೇ ದಾಖಲೆಯೂ ಇದಕ್ಕೆ ಬೇಕಿಲ್ಲ. ಶಿಫಾರಸು ಪತ್ರ ಒಂದಿದ್ದರೆ ಸಾಕು. ಬೆಳಗಾವಿ, ಬೀದರ್, ಕಲಬುರಗಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ, 12 ತಾಲ್ಲೂಕುಗಳಲ್ಲಿರುವ 865 ಹಳ್ಳಿಗಳ ಎಲ್ಲ ಭಾಷಿಕರೂ ಫಲಾನುಭವಿ ಆಗಬಹುದು. ವಾರ್ಷಿಕ ₹5 ಲಕ್ಷದವರೆಗೆ ವಿಮೆ ಸಿಗಲಿದೆ.



ಬೆಳಗಾವಿಯ ಖಡಕ್ ಗಲ್ಲಿಯಲ್ಲಿ ಮಹಾರಾಷ್ಟ್ರ ತೆರೆದಿರುವ ಕೇಂದ್ರ

> **ಮಹಾರಾಷ್ಟ್ರ ಸರ್ಕಾರ ಈಗ ನಮ್ಮ ಅಡುಗೆ ಮನೆಗೇ ನುಗ್ಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಲೂ ನಿರ್ಲಕ್ಷ್ಯ ವಹಿಸಿದರೆ ಮುಂದೆ ದೊಡ್ಡ ಆಘಾತ ಕಾದಿದೆ**
> **ಅಶೋಕ ಚಂದರಗಿ** ಅಧ್ಯಕ್ಷ, ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ದೃಷ್ಟಿಯಿದ್ದೂ ದೃಷ್ಟಿಕೋನ ಇಲ್ಲದಿರುವುದು ಕುರುಡುತನಕ್ಕಿಂತಲೂ ಕೆಟ್ಟದ್ದು.

–ಹೆಲೆನ್ ಕೆಲ್ಲರ್

ಬಿಲ್ಕಿಸ್ ಪ್ರಕರಣದ ತಪ್ಪಿತಸ್ಥರ ಬಿಡುಗಡೆ ಪ್ರಮಾದ ಸರಿಪಡಿಸಿದ ಸುಪ್ರೀಂ ಕೋರ್ಟ್

ಬಿಲ್ಕಿಸ್ ಬಾನು ಅವರ ಮೇಲೆ 2002ರಲ್ಲಿ ಅತ್ಯಾಚಾರ ಎಸಗಿದ ಪ್ರಕರಣದ 11 ಅಪರಾಧಿಗಳ ಶಿಕ್ಷೆಯನ್ನು ಕಡಿತಗೊಳಿಸಿದ ನಿರ್ಧಾರವನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದೆ. ಈ ಅಪರಾಧಿಗಳನ್ನು ಬಿಡುಗಡೆ ಮಾಡಲು ಆದೇಶಿಸಿದ್ದ ಗುಜರಾತ್ ಸರ್ಕಾರದ ಕ್ರಮವು ಲೋಪದಿಂದ ಕೂಡಿದೆ ಎಂದು ಕೋರ್ಟ್ ಹೇಳಿದೆ. ಅತ್ಯಂತ ಕಪಟ ಮತ್ತು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲದ ಕಾರಣಗಳನ್ನು ಕೊಟ್ಟು ಈ ಅಪರಾಧಿಗಳನ್ನು ಬಿಡುಗಡೆ ಮಾಡಲಾಗಿತ್ತು. ಈ ನಿರ್ಧಾರವನ್ನು ಆಡಳಿತ ಪಕ್ಷದ ಹಲವು ಮುಖಂಡರು ಯಾವುದೇ ಎಗ್ಗಿಲ್ಲದೆ ಸಮರ್ಥಿಸಿಕೊಂಡಿದ್ದರು. ಈಗ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಈ ಮುಖಂಡರ ಬಣ್ಣವನ್ನೂ ಬಯಲು ಮಾಡಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ದೇಶವೇ ತಲೆ ತಗ್ಗಿಸುವಂತೆ ಆಗಿದ್ದ ಪ್ರಮಾದವೊಂದನ್ನು ಈಗಿನ ತೀರ್ಪು ಸರಿಪಡಿಸಿದೆ. ಈ ಅತ್ಯಾಚಾರ ಪ್ರಕರಣವು ದೇಶದ ಆತ್ಮಸಾಕ್ಷಿಯನ್ನು ಕಲಕಿತ್ತು. ಅತ್ಯಾಚಾರ ಎಸಗಿದ್ದ ದುರುಳರನ್ನು ಬಿಡುಗಡೆ ಮಾಡಿದ್ದು ಕೂಡ ದೇಶದ ಆತ್ಮಸಾಕ್ಷಿಯನ್ನು ತಲ್ಲಣಗೊಳಿಸಿತ್ತು. ಸುದೀರ್ಘ ನ್ಯಾಯಾಂಗ ಹೋರಾಟದ ಬಳಿಕ, ಸುಪ್ರೀಂ ಕೋರ್ಟ್‌ನ ಮಧ್ಯಪ್ರವೇಶದಿಂದಾಗಿ ಬಿಲ್ಕಿಸ್ ಅವರಿಗೆ ನ್ಯಾಯ ದೊರಕಿತ್ತು. ಅಪರಾಧಿಗಳ ಬಿಡುಗಡೆಯ ಪ್ರಕರಣದಲ್ಲಿಯೂ ಮತ್ತದೇ ನ್ಯಾಯಾಲಯವು ಅವರಿಗೆ ನ್ಯಾಯ ದೊರಕಿಸಿಕೊಟ್ಟಿದೆ. ನ್ಯಾಯ ದೊರಕುವ ಹಾದಿಯು ಸದಾ ಸುಗಮವೇನೂ ಆಗಿರುವುದಿಲ್ಲ. ಆದರೆ, ಈ ಪ್ರಕರಣದಲ್ಲಿ ನ್ಯಾಯಕ್ಕೆ ಜಯ ಸಂದಿದೆ. ಕಾನೂನು ಸದಾ ನ್ಯಾಯದ ಮಾರ್ಗದರ್ಶನದಲ್ಲಿಯೇ ಇರಬೇಕು ಎಂದು ತೀರ್ಪು ಪ್ರಕಟಿಸಿದ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಉಜ್ವಲ್ ಭುಯಿಯಾಂ ಹೇಳಿದ್ದಾರೆ.



ದೇಶವೇ ತಲೆತಗ್ಗಿಸುವಂತೆ ಆಗಿದ್ದ ಪ್ರಮಾದವೊಂದನ್ನು ಈಗಿನ ತೀರ್ಪು ಸರಿಪಡಿಸಿದೆ

ಶಿಕ್ಷೆ ಕಡಿತದ ಆದೇಶವನ್ನು ಕಾನೂನು ಮತ್ತು ತಾಂತ್ರಿಕ ಎರಡು ನೆಲೆಯಲ್ಲಿಯೂ ಕೋರ್ಟ್ ರದ್ದುಪಡಿಸಿದೆ. ಅಪರಾಧ ಕೃತ್ಯವು ಗುಜರಾತ್‌ನಲ್ಲಿ ನಡೆದಿತ್ತು. ಆದರೆ, ಪ್ರಕರಣದ ವಿಚಾರಣೆಯನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸಿ ಸುಪ್ರೀಂ ಕೋರ್ಟ್ ಆದೇಶಿಸಿತ್ತು. ವಿಚಾರಣೆಯು ಮಹಾರಾಷ್ಟ್ರದಲ್ಲಿ ನಡೆದಿತ್ತು. ಹೀಗಾಗಿ, ಶಿಕ್ಷೆ ಕಡಿತಗೊಳಿಸುವ ಅಧಿಕಾರವು ಗುಜರಾತ್ ಸರ್ಕಾರಕ್ಕೆ ಇಲ್ಲ ಎಂಬ ತಾಂತ್ರಿಕ ಕಾರಣವನ್ನು ಮುಂದಿಟ್ಟು ಶಿಕ್ಷೆ ಕಡಿತದ ನಿರ್ಧಾರವನ್ನು ರದ್ದುಪಡಿಸಲಾಗಿದೆ. ತಪ್ಪಿತಸ್ಥರನ್ನು 2022ರ ಆಗಸ್ಟ್ 15ರಂದು ಸೆರೆಮನೆಯಿಂದ ಬಿಡುಗಡೆ ಮಾಡಲಾಗಿದೆ. 1992ರಲ್ಲಿ ರೂಪಿಸಲಾದ ಶಿಕ್ಷೆ ಕಡಿತದ ಮಾರ್ಗಸೂಚಿಗೆ ಅನುಗುಣವಾಗಿ ಈ ಪ್ರಕರಣದಲ್ಲಿ ನಿರ್ಧಾರ ಕೈಗೊಳ್ಳಬೇಕು ಎಂದು 2022ರ ಮೇ 13ರಂದು ಗುಜರಾತ್ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು. ಆದರೆ, ಸತ್ಯವನ್ನು ಮುಚ್ಚಿಟ್ಟು ವಂಚನೆಯ ಮೂಲಕ ಈ ನಿರ್ದೇಶನವನ್ನು ಪಡೆದುಕೊಳ್ಳಲಾಗಿದೆ ಎಂದೂ ಕೋರ್ಟ್ ಹೇಳಿದೆ. ಈ ಪ್ರಕರಣದಲ್ಲಿ ಗುಜರಾತ್ ಸರ್ಕಾರವು ಬೇರೆ ರಾಜ್ಯದ ಅಧಿಕಾರವನ್ನು ಅತಿಕ್ರಮಿಸುವ ಮೂಲಕ ನಿರ್ಧಾರ ಕೈಗೊಂಡಿದೆ. ಇದು ಅಧಿಕಾರದ ದುರುಪಯೋಗವೂ ಹೌದು ಮತ್ತು ವಿವೇಚನೆಯಿಂದ ಈ ನಿರ್ಧಾರವನ್ನು ಕೈಗೊಳ್ಳಲಾಗಿಲ್ಲ ಎಂದು ನ್ಯಾಯಪೀಠ ಹೇಳಿದೆ.

ಯಾವೆಲ್ಲ ಕಾನೂನುಗಳನ್ನು ಉಲ್ಲಂಘಿಸಿ ಶಿಕ್ಷೆ ಕಡಿತದ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎಂಬುದನ್ನು ನ್ಯಾಯಾಲಯ ಗುರುತಿಸಿದೆ. ಗುಜರಾತ್ ಸರ್ಕಾರದ ನಿರ್ಧಾರವು ಯಾವ ರೀತಿಯಲ್ಲಿ ತಪ್ಪಾಗಿದೆ ಮತ್ತು ಅನೈತಿಕವಾಗಿದೆ ಎಂಬುದನ್ನು ಇದು ತೋರಿಸಿಕೊಟ್ಟಿದೆ. ಇದೊಂದು ರಾಜಕೀಯ ನಿರ್ಧಾರವಾಗಿದ್ದು ಗುಜರಾತ್ ಸರ್ಕಾರದ ನೀತಿಗೆ ಅನುಗುಣವಾಗಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. 2002ರ ಗಲಭೆ ಪ್ರಕರಣಗಳ ಆರೋಪಿಗಳನ್ನು ರಕ್ಷಿಸುವ ಮತ್ತು ಅವರನ್ನು ಬೆಂಬಲಿಸುವ ಕೆಲಸವನ್ನು ಗುಜರಾತ್ ಸರ್ಕಾರ ಮಾಡಿದೆ ಎಂಬ ಆರೋಪಗಳಿಗೆ ಪುಷ್ಟಿ ನೀಡುವಂತಹ ಹಲವು ನಿದರ್ಶನಗಳಿವೆ. ಮಹಿಳೆಯರ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದ ಹಲವು ಘೋಷಣೆಗಳಿಗೆ ಬೆಂಬಲ ನೀಡಿದ ಸಂದರ್ಭದಲ್ಲಿಯೇ ಸರ್ಕಾರ ಈ ನಿರ್ಧಾರ ಕೈಗೊಂಡಿದೆ ಎಂಬುದು ಕೂಡ ಗಮನಿಸಬೇಕಾದ ಅಂಶ. ನ್ಯಾಯಾಲಯವು ಹೇಳಿದ ಅಂಶಗಳನ್ನು ಉಲ್ಲೇಖಿಸುವುದು ಇಲ್ಲಿ ಸಮಂಜಸ: 'ಮಹಿಳೆಯು ಗೌರವವನ್ನು ಪಡೆಯಲು ಅರ್ಹಳಾಗಿದ್ದಾಳೆ. ಮಹಿಳೆಯರ ಮೇಲೆ ಹೀನ ಅಪರಾಧ ಎಸಗಿದವರ ಶಿಕ್ಷೆಯನ್ನು ಕಡಿತ ಮಾಡಲು ಅವಕಾಶ ನೀಡಬಹುದೇ? ಇಂತಹ ಪ್ರಶ್ನೆಗಳು ಮೂಡುತ್ತವೆ'. ಜೈಲಿನಿಂದ ಬಿಡುಗಡೆಯಾಗಿರುವ ಅಪರಾಧಿಗಳು ಎರಡು ವಾರಗಳಲ್ಲಿ ಮತ್ತೆ ಸೆರೆಮನೆ ಸೇರಬೇಕು ಎಂದು ನ್ಯಾಯಾಲಯ ಆದೇಶ ಕೊಟ್ಟಿದೆ. ಈಗ, ಈ 11 ಅಪರಾಧಿಗಳು ಮಹಾರಾಷ್ಟ್ರ ಸರ್ಕಾರಕ್ಕೆ ಶಿಕ್ಷೆ ಕಡಿತ ಕೋರಿ ಅರ್ಜಿ ಸಲ್ಲಿಸಬಹುದು. ಬಹುಶಃ, ಇದು ಬಿಲ್ಕಿಸ್ ಬಾನು ಪ್ರಕರಣದ ಅಂತಿಮ ನ್ಯಾಯ ಪರೀಕ್ಷೆ ಆಗಿರಬಹುದು.

ದಿನದ ಟ್ವೀಟ್


ಗೌರವಾರ್ಹ ನಡೆ



ನ್ಯಾಯವನ್ನು ಎತ್ತಿಹಿಡಿದು, ಬಿಲ್ಕಿಸ್ ಬಾನು ಅವರಲ್ಲಿ ನಿರಾಳಭಾವ ಉಂಟುಮಾಡಿರುವ ಸುಪ್ರೀಂ ಕೋರ್ಟ್ ಅಪಾರವಾದ ಗೌರವಕ್ಕೆ ಅರ್ಹವಾಗಿದೆ. ಪತ್ನಿಯ ಪರವಾಗಿ ದೃಢವಾಗಿ ನಿಂತ ಆಕೆಯ ಪತಿಯನ್ನೂ ಈ ಸಂದರ್ಭದಲ್ಲಿ ಮರೆಯುವಂತಿಲ್ಲ. ಅತ್ಯಂತ ಗೌರವಾನ್ವಿತ ವ್ಯಕ್ತಿ ಅವರು.

ಸೋನಮ್ ಮಹಾಜನ್, ರಾಜಕೀಯ ವಿಶ್ಲೇಷಕಿ

ಕಿಡಿನುಡಿ



ಮಾಲ್ದೀವ್ಸ್ ಸಚಿವರು ಸಭ್ಯತೆ ಮತ್ತು ಶಿಷ್ಟಾಚಾರ ಪಾಲನೆಯನ್ನು ಮರೆತಿದ್ದಾರೆ! ಲಕ್ಷದ್ವೀಪಕ್ಕೆ ಒತ್ತಾಸೆಯಾಗಿ ನಿಲ್ಲುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಉತ್ತಮ ಕೆಲಸವನ್ನೇ ಮಾಡಿದ್ದಾರೆ. ಮಾಲ್ದೀವ್ಸ್‌ಗೆ ಮಾಡಿಕೊಂಡಿದ್ದ ಎಲ್ಲ ಮುಂಗಡ ಬುಕಿಂಗ್‌ಗಳನ್ನೂ ರದ್ದುಪಡಿಸಿರುವ ಈಸ್‌ಮೈಟ್ರಿಪ್ ಟ್ರಾವಲ್ ಏಜೆನ್ಸಿಯದು ಉತ್ತಮ ನಡೆ. ನಮ್ಮ ದ್ವೀಪಗಳಿಗೆ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸುವುದೇ ನಮ್ಮ ಪ್ರತಿಕ್ರಿಯೆಯಾಗಿರಬೇಕು.

ಯಶೋವರ್ಧನ್ ಝಾ ಆಜಾದ್, ಉದ್ಯಮಿ, ನಿವೃತ್ತ ಐಪಿಎಸ್ ಅಧಿಕಾರಿ

25 ವರ್ಷಗಳ ಹಿಂದೆ

ಶನಿವಾರ, 9-1-1999

• ಗೂಂಡಾ ವಿರೋಧಿ ಕಾಯ್ದೆ ಜಾರಿಗೆ ಸರ್ಕಾರದ ನಿರ್ಧಾರ

ಬೆಂಗಳೂರು, ಜ. 8– ಸುರತ್ಕಲ್ ಮತ್ತು ಮಂಗಳೂರಿನಲ್ಲಿ ನಡೆಯುತ್ತಿರುವ ಗಲಭೆಯನ್ನು ಹತ್ತಿಕ್ಕಲು ಗೂಂಡಾ ವಿರೋಧಿ ಕಾಯ್ದೆಯನ್ನು ಜಾರಿಗೊಳಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

'ಕಳೆದ ಹತ್ತು ದಿನಗಳಿಂದ ಸುರತ್ಕಲ್ ಮತ್ತು ಮಂಗಳೂರಿನಲ್ಲಿ ನಡೆಯುತ್ತಿರುವ ಗಲಭೆಯನ್ನು ನಿಯಂತ್ರಿಸುವ ಬಗ್ಗೆ ಇಂದು ನಡೆದ ಸಚಿವ ಸಂಪುಟ ಸಭೆ ಚರ್ಚಿಸಿತು. ಹಿಂಸಾಚಾರದ ಘಟನೆಗಳಲ್ಲಿ ಭಾಗಿಯಾಗಿರುವ ಹಾಗೂ ಇದಕ್ಕೆ ಪ್ರಚೋದನೆ ನೀಡುತ್ತಿರುವ ದುಷ್ಕರ್ಮಿಗಳ ವಿರುದ್ಧ ಗೂಂಡಾ ವಿರೋಧಿ ಕಾಯ್ದೆಯನ್ವಯ ಕ್ರಮ ಜರುಗಿಸಲು ಸಭೆ ತೀರ್ಮಾನಿಸಿತು' ಎಂದು ಪಂಚಾಯತ್ ರಾಜ್ ಸಚಿವ ಎಂ.ಪಿ.ಪ್ರಕಾಶ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

• 100 ಕೋಟಿ ವೆಚ್ಚದಲ್ಲಿ ನಾಲೆ ದುರಸ್ತಿಗೆ ಸರ್ಕಾರ ಕ್ರಮ

ಬೆಂಗಳೂರು, ಜ. 8– ಭದ್ರಾ ನೀರಾವರಿ ಯೋಜನೆಯ ಒಟ್ಟು 173 ಕಿ.ಮೀ ಉದ್ದದ ಎಡ ಮತ್ತು ಬಲ ದಂಡೆ ನಾಲೆಗಳು, ಉಪ ನಾಲೆಗಳ ದುರಸ್ತಿ ಹಾಗೂ ಆಧುನೀಕರಣವನ್ನು ಸುಮಾರು 100 ಕೋಟಿ ರೂಪಾಯಿ ವೆಚ್ಚದಲ್ಲಿ ಕೈಗೊಳ್ಳಲು ಇಂದು ಸಚಿವ ಸಂಪುಟ ಸಭೆ ಅನುಮೋದನೆ ನೀಡಿತು.

ಸುಮಾರು ನಾಲ್ಕು ದಶಕಗಳಷ್ಟು ಹಳೆಯದಾದ ಈ ಯೋಜನೆಯ ನಾಲೆಗಳ ಆಧುನೀಕರಣ ಬಹಳ ಅಗತ್ಯವಾಗಿದ್ದುದರಿಂದ ಈ ನಿರ್ಣಯವನ್ನು ತೆಗೆದುಕೊಳ್ಳಲಾಯಿತು ಎಂದು, ಸಂಪುಟ ಸಭೆಯ ನಂತರ ಸಚಿವ ಎಂ.ಪಿ. ಪ್ರಕಾಶ್ ಅವರು ಸಭೆಯ ವಿವರಗಳನ್ನು ನೀಡಿದರು.

50 ವರ್ಷಗಳ ಹಿಂದೆ

ಬುಧವಾರ, 9-1-1974

• ವಿಮಾ ಸಂಸ್ಥೆಯ ನಗರ ವಿಭಾಗ ಕಚೇರಿಯಲ್ಲಿ ಇಂದಿನಿಂದ ಲಾಕೌಟ್

ಬೆಂಗಳೂರು, ಜ. 8– ಜೀವ ವಿಮಾ ಕಾರ್ಪೊರೇಷನ್ನಿನ ಬೆಂಗಳೂರು ಡಿವಿಜನ್ ಕಾರ್ಯಾಲಯದಲ್ಲಿ ನಾಳೆ ಬುಧವಾರ ಬೆಳಿಗ್ಗೆ 5.30ರಿಂದ ಲಾಕೌಟ್ ಘೋಷಿಸಲಾಗಿದೆ.

ಈ 'ಲಾಕೌಟ್' ಜೀವನ ಪ್ರಕಾಶ ಮತ್ತು ಯುನೈಟೆಡ್ ಇಂಡಿಯಾ ಕಟ್ಟಡಗಳಲ್ಲಿ ಕೆಲಸ ಮಾಡುವ ಎಲ್ಲ ವಿಭಾಗಗಳ ಮೂರು ಮತ್ತು ನಾಲ್ಕನೇ ದರ್ಜೆ ನೌಕರರಿಗೆ ಅನ್ವಯಿಸುತ್ತದೆ.

ಉಳಿದ ಎಲ್ಲ ಶಾಖಾ ಕಾರ್ಯಾಲಯಗಳಲ್ಲೂ ಕೆಲಸ ನಡೆಯುತ್ತದೆ.

ಕಳೆದ ಕೆಲವು ವಾರಗಳಿಂದ ನೌಕರರು ನಡೆಸುತ್ತಿರುವ ಚಳವಳಿಯ ಪರಿಣಾಮವಾಗಿ ಕಾರ್ಯಾಲಯದ ಕೆಲಸವು 'ಅಸ್ತವ್ಯಸ್ತ' ಆಗಿರುವುದರಿಂದ ಲಾಕೌಟ್ ಘೋಷಿಸಲು ಜೀವ ವಿಮಾ ಕಾರ್ಪೊರೇಷನ್ ಈ ನಿರ್ಧಾರ ಕೈಗೊಂಡಿತೆಂದು ತಿಳಿದುಬಂದಿದೆ.

• ಮಹಾರಾಷ್ಟ್ರದ ಕುತಂತ್ರಕ್ಕೆ ಅರಸು ಬಲಿ: ಹೆಗಡೆ

ಬೆಂಗಳೂರು, ಜ. 8– ಮಹಾರಾಷ್ಟ್ರಕ್ಕೆ ಅದು ಬೇಕಿಲ್ಲದಿದ್ದರೆ ಕರ್ನಾಟಕವೂ ಮಹಾಜನ ವರದಿಯನ್ನು ನಿರಾಕರಿಸುವುದೆಂದು ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ಹೇಳುವ ಮೂಲಕ ಮಹಾರಾಷ್ಟ್ರದ ಬೋನಿನೊಳಗೆ ಬೀಳುತ್ತಿದ್ದಾರೆಂದು ಸಂಸ್ಥಾ ಕಾಂಗ್ರೆಸ್ ಉಪಾಧ್ಯಕ್ಷ ರಾಮಕೃಷ್ಣ ಹೆಗಡೆ ಅವರು ಇಂದು ಇಲ್ಲಿ ಆಪಾದಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮಹಾರಾಷ್ಟ್ರಕ್ಕೆ ಬೇಕಾಗಿರುವುದು ಮಹಾಜನ ವರದಿಯನ್ನು ಬದಿಗೊತ್ತುವುದೇ ಆಗಿದೆ. ನಮ್ಮ ಮುಖ್ಯಮಂತ್ರಿಗಳೇಕೆ ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಾರೋ ನನಗೆ ಅರ್ಥವಾಗದು' ಎಂದರು.

ಶುದ್ಧ ಕುಡಿಯುವ ನೀರು: ತಾಂತ್ರಿಕ ಪರಿಹಾರದ ಜೊತೆ ಬೇಕು ಸಾಮಾಜಿಕ ಜವಾಬ್ದಾರಿ

ನೀರಿನ ಲೋಟದಲ್ಲಿ ತಂತ್ರಜ್ಞಾನದ ಅಲೆ



ವಿಶ್ಲೇಷಣೆ

ಕೇಶವ ಎಚ್. ಕೊರ್ಸೆ

ಬೇಸಿಗೆ ಕಾಲಿಡುವ ಮುನ್ನವೇ ತಾಪಮಾನ ಬಿರುಸಾಗಿ ಏರುತ್ತಿದೆ. ಬರದ ಛಾಯೆ ದಟ್ಟವಾಗುತ್ತ, ನೀರಿನ ಕೊರತೆ ಎಲ್ಲೆಡೆ ಕಾಡುತ್ತಿದೆ. ಒಬ್ಬ ವ್ಯಕ್ತಿಗೆ ಪ್ರತಿದಿನ ಕನಿಷ್ಠ ಐವತ್ತೈದು ಲೀಟರ್ ನೀರು ಒದಗಿಸಬೇಕೆಂಬ ಮಹತ್ವಾಕಾಂಕ್ಷೆಯೊಂದಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಂಟಿಯಾಗಿ ಅನುಷ್ಠಾನಕ್ಕೆ ತರುತ್ತಿರುವ 'ಜಲಜೀವನ ಮಿಷನ್' ಯೋಜನೆಯ ಅಗತ್ಯ ಅರಿವಾಗುವ ಗಳಿಗೆಯಿದು.

ನೀರು ಒದಗಿಸಿದ ನಂತರವೂ ಎದುರಾಗುವ ಸವಾಲೆಂದರೆ, ಅದರ ಶುದ್ಧತೆ ಖಚಿತಪಡಿಸಿಕೊಳ್ಳುವುದು. ಬಹುಪಾಲು ಹಳ್ಳಿ, ಪಟ್ಟಣ ಹಾಗೂ ನಗರಗಳ ಕುಟುಂಬಗಳಿಗೆ ನಿರೀಕ್ಷೆಯ ಮಟ್ಟದ ಶುದ್ಧ ನೀರು ಈಗಲೂ ದೊರಕುತ್ತಿಲ್ಲ. ಇದಕ್ಕೆ ಪ್ರಮುಖವಾಗಿ ಎರಡು ಕಾರಣಗಳು. ಮೊದಲಿನದು, ನೀರು ಒದಗಿಸುವ ಬಾವಿ, ಕೆರೆ, ಹೊಳೆ, ನದಿ ಹಾಗೂ ಕೊಳವೆಬಾವಿಯಂಥ ಜಲಮೂಲಗಳ ಮಾಲಿನ್ಯ. ಅಲ್ಲಲ್ಲ ಸಾವಯವ ತ್ಯಾಜ್ಯಗಳು ಹಾಗೂ ಲವಣಾಂಶಗಳು ಮಿತಿಮೀರಿ ಶೇಖರವಾಗುತ್ತಿವೆ. ಅವು, ರೋಗಕಾರಕ ವೈರಸ್, ಬ್ಯಾಕ್ಟೀರಿಯಾ ಹಾಗೂ ಕೀಟಗಳ ಅಡಗುತಾಣಗಳಾಗುತ್ತಿವೆ. ಹಲವೆಡೆ ಹೆಪ್ಟಾಕ್ಲೋರ್, ಎಂಡೊಸಲ್ಫಾನ್, ಅಲ್ಡ್ರಿನ್, ಡಿಡಿಟಿ, ಎಂಡ್ರಿನ್ ತರಹದ, ದೀರ್ಘಕಾಲ ನೀರಿನಲ್ಲೇ ಉಳಿಯಬಲ್ಲ ಅಪಾಯಕಾರಿ ಕೀಟನಾಶಕಗಳ ಅಂಶ ಕಂಡುಬಂದದ್ದೂ ಇದೆ. ಹೀಗಾಗಿ, ಜಲಮೂಲಗಳ ಶುದ್ಧತೆ ಕಾಪಾಡಿಕೊಳ್ಳುವುದೇ ದೊಡ್ಡ ಸವಾಲು. ಜಲಾನಯನ ಅಭಿವೃದ್ಧಿ ತತ್ವದಡಿ ಸ್ಥಳೀಯ ನಿವಾಸಿಗಳು ಹಾಗೂ ಸರ್ಕಾರ ಜೊತೆಯಾಗಿ ಕಾರ್ಯನಿರ್ವಹಿಸಿದರೆ ಮಾತ್ರ ಇದಕ್ಕೆ ಪರಿಹಾರ ಕಂಡುಕೊಳ್ಳಬಹುದು.

ಇನ್ನೊಂದು ಕಾರಣ, ಪೂರೈಕೆ ವ್ಯವಸ್ಥೆಯ ದೋಷಗಳು. ಜಲಮೂಲದಿಂದ ಮೇಲಕ್ಕೆತ್ತಿ, ಕೊಳವೆ ಮಾರ್ಗಗಳಲ್ಲಿ ಸಾಗಿಸಿ, ಜಲಾಗಾರಗಳಲ್ಲಿ ಸಂಗ್ರಹಿಸಿ, ಮನೆಮನೆಗೆ ವಿತರಿಸುವ ಹಂತಗಳಲ್ಲೆಲ್ಲ ಅಧ್ವಾನಗಳ ಸರಮಾಲೆಯೇ ಇದೆ. ಮಾರ್ಗದಲ್ಲಿ ಸೋರಿಕೆ, ಚರಂಡಿ ನೀರಿನ ಮಿಶ್ರಣ, ಪ್ರಾಥಮಿಕ ಶುದ್ಧೀಕರಣ ಘಟಕವೇ ಕೆಟ್ಟುನಿಂತಿರುವುದು, ಅಗತ್ಯವಿದ್ದಷ್ಟು ಕ್ಲೋರಿನ್, ಅಯೋಡಿನ್, ಪೊಟಾಶಿಯಂ ಪರಮಾಂಗನೇಟ್ ತರಹದ ಶುದ್ಧಿಕಾರಕಗಳ ಕೊರತೆ...! ಆಡಳಿತದ ಭ್ರಷ್ಟಾಚಾರವೇ ಇದಕ್ಕೆ ಕಾರಣ ತಾನೇ? ಈ ವಿಷಮಸ್ಥಿತಿಯಿಂದ ಹೊರಬರಬೇಕಿದೆ.

ಇನ್ನು, ಲಭ್ಯವಾಗುವ ನೀರಿನ ಗುಣಮಟ್ಟವಾದರೂ ಎಂಥದ್ದು? ಜನವಸತಿಗಳ ಮಾಲಿನ್ಯ, ಕೈಗಾರಿಕಾ ತ್ಯಾಜ್ಯ, ಕೃಷಿಭೂಮಿಯ ಕ್ರಿಮಿನಾಶಕ ಹಾಗೂ ಕಳೆನಾಶಕ ಇವೆಲ್ಲ ಸೇರಿ ಜಲಮೂಲಗಳೆಲ್ಲ ಮಲಿನವಾಗುತ್ತಿವೆ. ಬಣ್ಣ, ವಾಸನೆ, ರುಚಿಯಲ್ಲಿ ಪ್ರಕಟವಾಗದೆಯೂ ನೀರು ಅಪಾಯಕಾರಿಯಾಗಬಲ್ಲದು. ಹೀಗಾಗಿ, ಕುಡಿಯುವ ನೀರು ಬಳಸುವ ಮೊದಲು ಹೆಚ್ಚಿನ ಶುದ್ಧೀಕರಣ ಕೈಗೊಳ್ಳುವುದು ಅನಿವಾರ್ಯ. ಶುದ್ಧಬಟ್ಟೆಯಲ್ಲಿ ನೀರನ್ನು ಸೋಸಿ, ಕುದಿಸಿ ಕುಡಿಯುವುದು ಎಲ್ಲರೂ ಬಲ್ಲ ಪಾರಂಪರಿಕ ವಿಧಾನ. ಸೋಸುವಿಕೆಯು ಕಸ, ಕಡ್ಡಿ, ಕೊಳೆಯಂಥ ಸಾವಯವ ವಸ್ತು ಹಾಗೂ ಲವಣಾಂಶಗಳನ್ನು ಬೇರ್ಪಡಿಸಿದರೆ, ನೀರನ್ನು ಕುದಿಸಿದಾಗ ರೋಗಕಾರಕ ಸೂಕ್ಷ್ಮಾಣುಜೀವಿಗಳು ಸಾಯಬಲ್ಲವು. ಈ ಸರಳಕ್ರಮಗಳನ್ನು ಮನೆ, ಬಿಸಿಯೂಟ ನೀಡುವ ಶಾಲೆ-ಕಾಲೇಜು, ಸಾಮೂಹಿಕ ಊಟ ನೀಡುವ ಸ್ಥಳಗಳಲ್ಲಿ ಅಗತ್ಯವಾಗಿ ಪಾಲಿಸಬೇಕಿದೆ.

ಆದರೆ, ಈ ಸರಳ ವಿಧಾನಗಳೂ ಸಾಧ್ಯವಾಗದ ವೇಗದ ಜೀವನಕ್ರಮ ಇಂದಿನದಾಗುತ್ತಿದೆ. ಹೀಗಾಗಿಯೇ, ಹಲವಾರು ಬಗೆಯ ಚಿಕ್ಕ ಶುದ್ಧೀಕರಣ ಘಟಕಗಳು ಮಾರುಕಟ್ಟೆಯಲ್ಲಿ ಇಂದು ಕಾಲಿಟ್ಟಿವೆ. ಕಾರ್ಯವಿಧಾನದ ತತ್ವಗಳ ಆಧಾರದಲ್ಲಿ, ಅವನ್ನು ಸ್ಥೂಲವಾಗಿ ನಾಲ್ಕು ಬಗೆಯಲ್ಲಿ ವಿಂಗಡಿಸಬಹುದು.

ಮೊದಲಿನದು, ಸೋಸುವಿಕೆ ತತ್ವದ 'ನೀರಿನ ಫಿಲ್ಟರು'ಗಳು. ಇವುಗಳಲ್ಲಿ ಸೋಸುಕಡ್ಡಿಗಳು (ಕ್ಯಾಂಡಲ್) ಇರುತ್ತವೆ. ಮರದಪುಡಿ, ಮರಳು, ಸಿರಾಮಿಕ್, ಶುದ್ಧ ಸಿಲಿಕಾದಂತಹವುಗಳಿಂದ ಮಾಡಿರುವ ಈ ಸೋಸುಕಡ್ಡಿಗಳ ಮೂಲಕ ನೀರು ಜಾರಿಹೋಗುವಾಗ, ಮಾಲಿನ್ಯಕಾರಕ ಅಂಶಗಳೆಲ್ಲ ಅವಕ್ಕೆ ಅಂಟಿಕೊಂಡು ಶುದ್ಧನೀರು ಪ್ರತ್ಯೇಕವಾಗುತ್ತದೆ. ಕೆರೆ-ಬಾವಿಗಳ ನೀರು ಅಥವಾ ನಗರ-ಪಟ್ಟಣಗಳು ಒದಗಿಸುವ ಕೊಳವೆ ನೀರನ್ನು ಇವುಗಳಲ್ಲಿ ಶುದ್ಧೀಕರಿಸಬಹುದು. ಹಾಗೆ ಸೋಸಿದ ನೀರನ್ನು ಕುದಿಸಿದರೆ, ಸೂಕ್ಷ್ಮಾಣುಜೀವಿಗಳೂ ಸಾಯುತ್ತವೆ. ಇತ್ತೀಚೆಗೆ ಅಭಿವೃದ್ಧಿಗೊಳಿಸಿರುವ, ಪುನಶ್ಚೇತನಗೊಳಿಸಿದ ಶುದ್ಧ ಇಂಗಾಲದ ನುಣುಪಾದ ಪುಡಿಯ ಸೋಸುಕಡ್ಡಿಗಳಂತೂ ಮತ್ತಷ್ಟು ಪರಿಣಾಮಕಾರಿಯಾಗಿವೆ. ನೀರಿನಲ್ಲಿರುವ ಅನವಶ್ಯಕ ಅನಿಲ ಹಾಗೂ ದುರ್ವಾಸನೆಯನ್ನೂ ಅವು ದೂರಮಾಡಬಲ್ಲವು. ಕಡಿಮೆ ವೆಚ್ಚದ ಹಾಗೂ ವಿದ್ಯುತ್ ಅವಶ್ಯಕತೆ ಇರದ ಈ ಘಟಕಗಳ ಬಳಕೆ ಇಂದು ವ್ಯಾಪಕವಾಗಿದ್ದರೂ, ಬಹುಪಾಲು ವನವಾಸಿಗಳಿಗೆ ಹಾಗೂ ಕಡುಬಡ ಕುಟುಂಬಗಳಿಗೆ ಅವಿನ್ನೂ ತಲುಪಬೇಕಿದೆ.

ಎರಡನೇ ಬಗೆಯದು, ಅಲ್ಪಪ್ರಮಾಣದ ವಿದ್ಯುತ್ ಬಳಸುವ 'ಅಯಾನ್ ವಿನಿಮಯ' ವಿಧಾನ. ವಿದ್ಯುತ್ ಸಂಪರ್ಕವಿರುವ ಇಂಗಾಲದ ಸಂಯುಕ್ತಗಳ ತೆಳುಪದರದ ಮೇಲೆ ನೀರು ಹಾಯುವಾಗ, ಅದು ನೀರಿನಲ್ಲಿರುವ ಮ್ಯಾಗ್ನೀಶಿಯಂ, ಕ್ಯಾಲ್ಸಿಯಂನಂತಹ ಅಂಶಗಳನ್ನು ಹೀರಿಕೊಂಡು, ಜಲಜನಕವನ್ನು ಬಿಟ್ಟುಕೊಡುತ್ತದೆ. ಲವಣಾಂಶ ಹಾಗೂ ಇಂಗಾಲದ ಸಂಯುಕ್ತಗಳೆಲ್ಲ ಬೇರ್ಪಟ್ಟು, ಗಡಸುನೀರು ಮೆದುವಾಗುತ್ತದೆ. ಕೊಳವೆಬಾವಿ ನೀರು ಶುದ್ಧಿ ಮಾಡಲು ಇದು ಪರಿಣಾಮಕಾರಿ. ಸೋಸುವಿಕೆ ಮತ್ತು ಅಯಾನ್ ವಿನಿಮಯ- ಈ ಎರಡೂ ತತ್ವ ಆಧರಿಸಿದ 'ಹೈಬ್ರಿಡ್' ಘಟಕಗಳೂ ಈಗ ಲಭ್ಯವಿದ್ದು, ಅವಕ್ಕೆ ಹೆಚ್ಚಿನ ಕ್ಷಮತೆಯಿದೆ.



ಮೂರನೇ ಬಗೆಯದೆಂದರೆ, 'ಅತಿನೇರಳೆ ಕಿರಣ' ಬಳಸುವ 'ಫಿಲ್ಟರ್'ಗಳು. ಸೂಕ್ಷ್ಮಾಣುಜೀವಿಗಳೂ ಇದರಲ್ಲಿ ಸಾಯಬಲ್ಲವು. ಬೇಸಿಗೆಯಲ್ಲಿ ಹರಿಯುವ ನೀರಿಲ್ಲದೆ ಜಲಮೂಲಗಳು ಪಾಚಿಕಟ್ಟಿ, ಹಸಿರುಬಣ್ಣಕ್ಕೆ ತಿರುಗಿ ದುರ್ವಾಸನೆ ಬೀರುತ್ತಿರುತ್ತವೆ ತಾನೇ? ಅಂಥ ನೀರನ್ನು ಸೋಸಿ-ಕುದಿಸಿದರೂ, ಸೂಕ್ಷ್ಮಾಣುಜೀವಿಗಳು ಉಳಿದು-ಬಿಡಬಲ್ಲವು. ಭೇದಿ, ಟೈಫಾಯಿಡ್, ಕಾಲರಾ ಬರಲು ಹಾಗೂ ಜಂತುಹುಳುವಿನಂತಹವು ಹರಡಲು ಇದೇ ಕಾರಣ. ನೀರಿನಲ್ಲಿರುವ ಅಂತಹ ವೈರಸ್, ಬ್ಯಾಕ್ಟೀರಿಯಾ, ಶಿಲೀಂಧ್ರ, ಏಕಕೋಶ ಸಸ್ಯ, ಹುಳದಂತಹವುಗಳನ್ನು ನಾಶಪಡಿಸಲು ಇದು ಪರಿಣಾಮಕಾರಿ ತಂತ್ರ.


ಅಂತಿಮವಾಗಿ, ಈ ಸೋಸುವಿಕೆಗೆಂದೇ ಅಭಿವೃದ್ಧಿ-ಪಡಿಸುವ ವಿಶಿಷ್ಟ 'ಪೊರೆ'ಗಳನ್ನು ಬಳಸುವ 'ರಿವರ್ಸ್ ಆಸ್ಮಾಸಿಸ್' (ಆರ್.ಒ.) ತಂತ್ರ. ಜೀವಿಗಳ ಜೀವಕೋಶಗಳಲ್ಲಿ ಅವಶ್ಯಕ ಅಂಶಗಳನ್ನು ಮಾತ್ರ ಒಳಸೇರಿಸಿ, ಅನಗತ್ಯವಾದದ್ದನ್ನು ಹೊರಗಿಡುವ 'ಜೀವಪೊರೆ'ಗಳಿರುತ್ತವೆ. ಆ ತತ್ವ ಆಧರಿಸಿ, ಈ 'ಕೃತಕ ಪೊರೆ'ಗಳನ್ನು ಅಭಿವೃದ್ಧಿಪಡಿಸಲಾಗಿದೆ. ಕಡಲಿನ ಉಪ್ಪುನೀರೂ ಸೇರಿದಂತೆ ಯಾವುದೇ ನೀರನ್ನು ಈ ತಂತ್ರದಲ್ಲಿ ಕುಡಿಯಲು ಯೋಗ್ಯವಾಗಿಸಬಹುದು. ಸಲ್ಫೇಟ್, ಫಾಸ್ಫೇಟ್, ನೈಟ್ರೇಟ್, ಫ್ಲೋರೈಡ್, ಕ್ರಿಮಿನಾಶಕ, ಕಳೆನಾಶಕ ಹಾಗೂ ಭಾರಲೋಹಗಳಾದ ಸೀಸ, ಪಾದರಸ, ಆರ್ಸೆನಿಕ್ ಸೇರಿದಂತೆ ಅಪಾಯಕಾರಿ ರಾಸಾಯನಿಕವನ್ನೂ ಬೇರ್ಪಡಿಸಬಹುದು. ಉಳಿದೆಲ್ಲ ತಂತ್ರಜ್ಞಾನಗಳಿಗಿಂತ ಇದು ಹೆಚ್ಚು ಪರಿಣಾಮಕಾರಿ.

ಆದರೆ, ಈ ತಂತ್ರಜ್ಞಾನದಲ್ಲಿ ಒಂದು ನ್ಯೂನತೆಯಿದೆ. ದೇಹಕ್ಕೆ ಅಗತ್ಯವಿರುವ ಲವಣಗಳ ಕನಿಷ್ಠ ಪ್ರಮಾಣವೂ ಇಲ್ಲದಂತೆ ಈ ಯಂತ್ರಗಳು ನೀರನ್ನು ಸೋಸಿಬಿಡುತ್ತವೆ! ಅಂಥ ನೀರನ್ನೇ ದೀರ್ಘಕಾಲ ಕುಡಿದರೆ ಕ್ಯಾಲ್ಸಿಯಂ, ಮ್ಯಾಗ್ನೀಶಿಯಂ, ಝಿಂಕ್‌ನಂತಹವುಗಳ ಕೊರತೆಯಾಗಿ, ರಕ್ತದೊತ್ತಡ, ಹೃದಯಕಾಯಿಲೆ, ಮೂತ್ರಕೋಶದಂತಹ ಸಮಸ್ಯೆಗಳು ಹೆಚ್ಚಾಗಬಹುದು. ಈ ಅಪಾಯವರಿತು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು ಗೃಹಬಳಕೆಗೆ ಈ ಶುದ್ಧೀಕರಣ ಯಂತ್ರಗಳನ್ನು 2020ರಲ್ಲೊಮ್ಮೆ ನಿಷೇಧಿಸಿತ್ತು ಸಹ! ಒಂದು ಲೀಟರ್ ನೀರಿನಲ್ಲಿ 300- 500 ಮಿ.ಗ್ರಾಂ. ಲವಣಾಂಶ ಕಾಯ್ದುಕೊಳ್ಳುವ ತಂತ್ರಜ್ಞಾನ ಇರಬೇಕು ಎಂಬ ಸುಪ್ರೀಂ ಕೋರ್ಟ್‌ನ ಷರತ್ತಿನೊಂದಿಗೆ, 'ಪರಿಷ್ಕೃತ ಆರ್.ಒ.' ಈಗ ಪುನಃ ಮಾರುಕಟ್ಟೆ ಪ್ರವೇಶಿಸಿದೆ.

ಕುಡಿಯುವ ನೀರೂ ವಾಣಿಜ್ಯೋದ್ಯಮವಾಗಿರುವಾಗ, ನವೀನ ತಂತ್ರಜ್ಞಾನಗಳು ಬರುತ್ತಲೇ ಇರುತ್ತವೆ. ಇಂಥ ಸಂದರ್ಭದಲ್ಲಿ, ಜನಸಾಮಾನ್ಯರಿಗೆ ಶುದ್ಧನೀರು ಹಾಗೂ ಸೂಕ್ತ ಶುದ್ಧೀಕರಣ ತಂತ್ರಜ್ಞಾನ ಕೈಗೆಟಕುವಂತೆ ಮಾಡುವಲ್ಲಿ ಸರ್ಕಾರದ ಹೊಣೆಯಿದೆ. ಕರ್ನಾಟಕ ಸರ್ಕಾರದ 2022ರ ಜಲನೀತಿಯಲ್ಲೂ ಈ ಆಶಯವಿದೆ.

ಬೇಸಿಗೆ-ಬರದಲ್ಲಷ್ಟೇ 'ಜಲ-ಜಾಗೃತಿ'ಯಾದರೆ ಸಾಲದು! ನೀರಿನ ಲೋಟ ತುಂಬಿಸುವ ನೈಸರ್ಗಿಕ ಜಲಚಕ್ರವನ್ನು ಕಾಪಾಡುವ ಹೊಣೆಯನ್ನು ಸರ್ಕಾರ ಹಾಗೂ ಸಮಾಜ ಸದಾ ನಿರ್ವಹಿಸಬೇಕು.

ಚುರುಮುರಿ



ಬೋರ್ಡ್ ಭವಿಷ್ಯ

• ಸಿ.ಎನ್.ರಾಜು

ಅನು, ಗಿರಿ ಸಂಕಟ ಹೇಳಿಕೊಂಡು ಫ್ಯಾಮಿಲಿ ಜ್ಯೋತಿಷಿ ಬಳಿಗೆ ಬಂದರು.

'ಗುರೂಜಿ, ನನ್ನ ಗಂಡನ ಜಾತಕದಲ್ಲಿ ಬೋರ್ಡ್ ಚೇರ್ಮನ್ ಆಗುವ ಯೋಗ ಇದೆಯೇ ನೋಡಿ...' ಎಂದಳು ಅನು.

'ಹೈಕಮಾಂಡ್‌ಗೆ ಕಳಿಸಿರುವ ನಿಗಮ, ಮಂಡಳಿ ನೇಮಕಾತಿ ಶಿಫಾರಸು ಪಟ್ಟಿಯಲ್ಲಿ ನನ್ನ ಹೆಸರಿದೆಯೇ ಅಂತ ಚೆಕ್ ಮಾಡಿ ಗುರೂಜಿ' ಗಿರಿ ಕೇಳಿಕೊಂಡ.

ಜಾತಕ ನೋಡಿ, ಕೂಡಿ, ಕಳೆದು, ಗುಣಿಸಿ, ಭಾಗಿಸಿದ ಜ್ಯೋತಿಷಿ, 'ಯೋಗವೂ ಇದೆ, ಪಟ್ಟಿಯಲ್ಲಿ ಹೆಸರೂ ಇದೆ. ಆದರೆ ಹೈಕಮಾಂಡ್‌ಗೆ ಪಾರ್ಲಿಮೆಂಟ್ ಕಾಟ ಇರುವುದರಿಂದ ಪಟ್ಟಿ ಬಿಡುಗಡೆ ವಿಳಂಬ ಆಗ್ತಿದೆ' ಎಂದರು.

'ಸಂಕ್ರಾಂತಿ ವೇಳೆಗೆ ನಿಗಮ, ಮಂಡಳಿಗಳಿಗೆ ನೇಮಕವಾಗುತ್ತದೆ, ಅಧ್ಯಕ್ಷರಾದವರು ಆನಂದವಾಗಿ ಎಳ್ಳು ಬೆಲ್ಲ ಹಂಚಬಹುದು ಅಂತ ದೊಡ್ಡ ನಾಯಕರು ಹೇಳಿದ್ದಾರೆ ಗುರೂಜಿ'.

'ಆಗುತ್ತೆ, ಸಂಕ್ರಾಂತಿಗೆ ಆಗದಿದ್ದರೆ ಶಿವರಾತ್ರಿ ಕಳೆದು ಯುಗಾದಿ ವೇಳೆಗೆ ನೇಮಕವಾಗಿ ನೀವು ಬೇವು ಬೆಲ್ಲ ಹಂಚಬಹುದು'.

'ಇದೇನು ಗುರೂಜಿ, ಬೋರ್ಡ್ ಚೇರ್ಮನ್ ಅನ್ನೋದು ಹಬ್ಬದ ಆಫರ್ ಅನ್ನುವಂತೆ ಹೇಳ್ತಿದ್ದೀರಿ?!' ಎಂದಳು ಅನು.

'ಹೌದಮ್ಮ, ಹೈಕಮಾಂಡ್ ಕೃಪಾಕಟಾಕ್ಷ ದೊರೆಯುವವರೆಗೂ ಕಾಯಲೇಬೇಕು'.

'ಹೋಮ, ಹವನ, ಪೂಜೆಪುನಸ್ಕಾರದಿಂದ ಹೈಕಮಾಂಡನ್ನು ಒಲಿಸಿಕೊಳ್ಳಲು ಸಾಧ್ಯವಿಲ್ಲವೇ ಗುರೂಜಿ?' ಕೇಳಿದ ಗಿರಿ.

'ಪೂಜೆಗೀಜೆಗೆ ಹೈಕಮಾಂಡ್ ಜಗ್ಗುವುದಿಲ್ಲ. 'ನನ್ನ ಬಂಧಿಸಿ' ಅಂತ ಬೋರ್ಡ್ ಇಟ್ಟುಕೊಂಡು ಕೆಲವರು ಹೋರಾಟ ಮಾಡಿದಂತೆ, 'ನನ್ನನ್ನು ಗುರುತಿಸಿ' ಎಂಬ ಬೋರ್ಡ್ ಪ್ರದರ್ಶಿಸಿ ಹೈಕಮಾಂಡ್ ಗಮನ ಸೆಳೆದರೆ ಫಲ ಸಿಗಬಹುದು'.

'ಈ ಬಾರಿ ಬೋರ್ಡ್ ಚೇರ್ಮನ್ ಸ್ಥಾನ ಸಿಗದಿದ್ದರೆ ನಾನು ರಾಜಕಾರಣ ತ್ಯಜಿಸ್ತೀನಿ. ನಿಮ್ಮ ಶಿಷ್ಯನಾಗಿ ಜ್ಯೋತಿಷ ಕಲಿತು, ರಾಜಕಾರಣಿಗಳೇ ನನ್ನ ಬಳಿಗೆ ಬಂದು ತಮ್ಮ ಭವಿಷ್ಯ ಕೇಳುವಂತಹ ಪ್ರಭಾವಿ ಜ್ಯೋತಿಷಿಯಾಗುತ್ತೇನೆ' ಎಂದ ಗಿರಿ. ಹೌದೆಂದು ಅನು ತಲೆಯಾಡಿಸಿದಳು.

ಸಂಗತ

ಕ್ಯಾಂಪಸ್ ಸಂದರ್ಶನ: ಮುಕ್ತವಾಗಿರಲಿ

ಕ್ಯಾಂಪಸ್ ಸಂದರ್ಶನವನ್ನು ಎಲ್ಲ ಶೈಕ್ಷಣಿಕ ಸಂಸ್ಥೆಗಳಿಗೂ ವಿಸ್ತರಿಸಬೇಕು. ಕಂಪನಿಗಳು ತಮ್ಮ ಅವಶ್ಯಕತೆಗೆ ಅನುಗುಣವಾಗಿ ಮುಕ್ತ ಮನಸ್ಸಿನಿಂದ ನೇಮಕಾತಿ ಪ್ರಕ್ರಿಯೆ ನಡೆಸುವಂತೆ ಆಗಬೇಕು

• ಪ್ರೊ. ಎಂ.ಎಸ್.ರಘುನಾಥ್

ಶಿಕ್ಷಣದ ಮೂಲ ಉದ್ದೇಶ ಏನೇ ಇರಲಿ, ಅದರಿಂದ ಉದ್ಯೋಗ ಖಾತರಿ ಎಂಬುದನ್ನು ಮನಗಂಡೇ ಬಹುತೇಕ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿರುವುದು ವಾಸ್ತವ. ಇದನ್ನು ಅರಿತೇ, ಒಂದೆಡೆ ಶಿಕ್ಷಣ ಸಂಸ್ಥೆಗಳು, ಮತ್ತೊಂದೆಡೆ ಉದ್ಯೋಗದಾತರು ವಿದ್ಯಾರ್ಥಿಗಳ ಭವಿಷ್ಯದ ಜೊತೆ ಒಂದು ರೀತಿಯಲ್ಲಿ ಚೆಲ್ಲಾಟವಾಡುತ್ತಿರುವುದು ಶಿಕ್ಷಣ ಕ್ಷೇತ್ರದಲ್ಲಿನ ಶೋಷಣೆಗಳಲ್ಲಿ ಒಂದು.

ಈ ನಡೆ ಉನ್ನತ ಶಿಕ್ಷಣದಲ್ಲಿ, ಅದರಲ್ಲೂ ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ 'ಕ್ಯಾಂಪಸ್ ಸಂದರ್ಶನ' ಎಂಬ ಆಕರ್ಷಕ ಹೆಸರುಳ್ಳ ಪ್ರಲೋಭನೆಗೆ ಕಾರಣ ಆಗುತ್ತಿದೆ. ತಮ್ಮ ಮಕ್ಕಳನ್ನು ತಾಂತ್ರಿಕ ಕೋರ್ಸ್‌ಗೆ ಸೇರಿಸಲು ಪೋಷಕರು ಪ್ರಧಾನವಾಗಿ ಪರಿಗಣಿಸುತ್ತಿರುವುದು, ಈ ಸಂಸ್ಥೆಗಳಲ್ಲಿ ನಡೆಯುವ ಕ್ಯಾಂಪಸ್ ಸಂದರ್ಶನವನ್ನು. ಅಂದರೆ, ಪ್ರತಿಷ್ಠಿತ ಕಂಪನಿಗಳು ಪದವಿಯ ಮುಕ್ತಾಯಕ್ಕೆ ಮುಂಚೆಯೇ ವಿದ್ಯಾರ್ಥಿಗಳನ್ನು ನೇರವಾಗಿ ಉದ್ಯೋಗಕ್ಕೆ ಆಯ್ಕೆ ಮಾಡಿಕೊಳ್ಳುವುದನ್ನು ಖಾತರಿಪಡಿಸಿಕೊಳ್ಳುವುದೇ ಆಗಿದೆ. ಇದು ಒಂದು ರೀತಿಯಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಕ್ಯಾಂಪಸ್‌ಸಹಿತ ಅಥವಾ ಕ್ಯಾಂಪಸ್‌ರಹಿತ ಎಂಬ ಕೃತಕ ವರ್ಗೀಕರಣಕ್ಕೆ ಒಳಪಡಿಸಿದೆ.

ದೊಡ್ಡ ಕಂಪನಿಗಳು ಪ್ರತಿಷ್ಠಿತ ಕಾಲೇಜುಗಳಿಗೆ ಭೇಟಿ ನೀಡಿ, ವಿದ್ಯಾರ್ಥಿಗಳನ್ನು ಸಂದರ್ಶನದ ಮೂಲಕ ತರಬೇತಿಗಾಗಿಯೋ ಉದ್ಯೋಗಕ್ಕಾಗಿಯೋ ನೇಮಕ ಮಾಡಿಕೊಳ್ಳುವ ಈ ಆಕರ್ಷಕ ಪ್ರಕ್ರಿಯೆ ಅನೇಕ ವರ್ಷಗಳಿಂದ ಮುಂದುವರಿದುಕೊಂಡು ಬಂದಿದೆ. ಇಲ್ಲಿ ಪರೀಕ್ಷೆಗೆ ಒಳಪಡುವುದು ಪ್ರತಿಭೆ ಮಾತ್ರವೋ ಅಥವಾ ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವವೋ ಎಂಬುದು ಕಂಪನಿಗಳ ವಿವೇಚನೆಗೆ ಬಿಟ್ಟ ಸಂಗತಿಯಾಗಿರುತ್ತದೆ. ಆದರೆ ಈ ರೀತಿಯ ಸಂದರ್ಶನ ನಡೆಯುವುದು ಆಯ್ದ ಕಾಲೇಜುಗಳಲ್ಲಿ ಅದರಲ್ಲೂ ನಗರದಲ್ಲಿರುವ ಕೆಲವು ಸಂಸ್ಥೆಗಳಲ್ಲಿ ಮಾತ್ರ. ಅಂದರೆ, ಆ ಕಂಪನಿಗಳು ಹೊಂದಿರುವ ಅಭಿಪ್ರಾಯದ ಪ್ರಕಾರ, ಪ್ರತಿಭಾವಂತರು ಅಥವಾ ತಮ್ಮ ಕಂಪನಿಯಲ್ಲಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಉಳ್ಳವರು ದೊರೆಯುವುದು ಈ ಕಾಲೇಜುಗಳಲ್ಲಿ ಮಾತ್ರ. ಹಾಗಾಗಿಯೇ, ಆ ಕಂಪನಿಗಳಿಗೆ ಈ ಕಾಲೇಜುಗಳು ಮಾತ್ರ ಪಥ್ಯ, ಮಿಕ್ಕವು ಅಪಥ್ಯ ಎಂಬಂತಾಗಿದೆ. ಅದಕ್ಕಾಗಿ ಇಂತಹ ಕಾಲೇಜುಗಳಲ್ಲಿ ಶುಲ್ಕದ ಪ್ರಮಾಣ ತುಸು ಹೆಚ್ಚೇ ಇರುವುದು ಗೊತ್ತಿಲ್ಲದ ಸಂಗತಿಯೇನಲ್ಲ.

ಪೋಷಕರಿಗಂತೂ ಇಂತಹ ಕಾಲೇಜುಗಳಿಗೆ ಮಕ್ಕಳನ್ನು ಸೇರಿಸುವುದು ಪ್ರತಿಷ್ಠೆಯ ಸಂಗತಿ. ಶುಲ್ಕ ಭರಿಸಲು ಸಾಧ್ಯವಿಲ್ಲದ ವಿದ್ಯಾರ್ಥಿಗಳಿಗೆ, ಅಂತಹ ಕಾಲೇಜುಗಳೂ ಆಕರ್ಷಕ ಉದ್ಯೋಗದ ಪ್ರಲೋಭನೆಗಳೂ ಗಗನಕುಸುಮವೇ ಆಗಿರುತ್ತವೆ.

ಮಕ್ಕಳು ಪದವಿಯನ್ನು ಮುಗಿಸಲಿ, ಮುಗಿಸದಿರಲಿ ಉದ್ಯೋಗ ಖಾತರಿ ಎಂಬ ಜೀವನದ ಬಹುಮುಖ್ಯವಾದ ಮಜಲಿಗೆ ಒಡ್ಡಿಕೊಂಡಿರುವುದರ ದ್ಯೋತಕ ಕ್ಯಾಂಪಸ್ ಸಂದರ್ಶನ. ಈ 'ಉದ್ಯೋಗ ಭಾಗ್ಯ'ದಿಂದ ಅನೇಕ ಕಾಲೇಜುಗಳ ಮಕ್ಕಳು ವಂಚಿತರಾಗುವುದರಿಂದ, ಎಲ್ಲ ರಂಗಗಳಲ್ಲೂ ಕಾಣಸಿಗುವ ಒಂದಲ್ಲ ಒಂದು ರೀತಿಯ ತಾರತಮ್ಯವು ಇಲ್ಲಿಗೂ ಈ ರೂಪದಲ್ಲಿ ವಿಸ್ತರಿಸಿದೆ. ಕಂಪನಿಗಳವರು ತಮ್ಮ ಅವಶ್ಯಕತೆಗಳಿಗೆ ಅನುಗುಣವಾಗಿ ಈ ಕಾಲೇಜುಗಳಿಗೆ ಸಂದರ್ಶನ ನಡೆಸಲು ಭೇಟಿ ನೀಡುತ್ತಾರೋ ಅಥವಾ ಕಾಲೇಜುಗಳೇ ತಮ್ಮ ಸಾಮಾಜಿಕ, ಶೈಕ್ಷಣಿಕ ಪ್ರತಿಷ್ಠೆ ಕಾಪಾಡಿಕೊಳ್ಳಲು, ಹೆಚ್ಚು ವಿದ್ಯಾರ್ಥಿಗಳನ್ನು ಆಕರ್ಷಿಸಲು, ಸಂದರ್ಶನ ನಡೆಸುವಂತೆ ಕಂಪನಿಗಳನ್ನು ಒತ್ತಾಯಪಡಿಸುತ್ತವೋ ಎಂಬುದು ಸ್ಪಷ್ಟ ಆಗುವುದಿಲ್ಲ.

ಏನಾದರಾಗಲಿ, ವಿದ್ಯಾರ್ಥಿಗಳಿಗೆ ಉದ್ಯೋಗ ಭಾಗ್ಯ ದೊರಕುವುದು ಮಾತ್ರ ಅತ್ಯುತ್ತಮವಾದ ಆಶಾದಾಯಕ ಬೆಳವಣಿಗೆಯೇ ಸರಿ. ಆದರೆ, ಇದರಲ್ಲಿ ಸ್ಪಷ್ಟವಾಗಿ ಕಾಣುವ ತಾರತಮ್ಯ ಎಷ್ಟರ ಮಟ್ಟಿಗೆ ಸಮರ್ಥನೀಯ ಎಂಬುದರ ಬಗ್ಗೆ ಯಾರೂ ಯೋಚಿಸುವುದಿಲ್ಲ.



ಕಲಬುರಗಿಯ ತಾಂತ್ರಿಕ ಸಂಸ್ಥೆಯೊಂದರ ಪ್ರಾಂಶುಪಾಲರು ಈ ವ್ಯವಸ್ಥೆಯ ಬಗ್ಗೆ ಇತ್ತೀಚೆಗೆ ದನಿ ಎತ್ತಿದ್ದರು. 'ನಾವು ಸಹ ನಮ್ಮ ಸಂಸ್ಥೆಗಳಲ್ಲಿ ಅತ್ಯುತ್ತಮವಾದ ಬೋಧಕರನ್ನು ನೇಮಿಸಿಕೊಂಡಿರುವುದಲ್ಲದೆ, ಉತ್ಕೃಷ್ಟ ಸೌಲಭ್ಯಗಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಈ ಮೂಲಕ ವಿದ್ಯಾರ್ಥಿಗಳಿಗೆ ಅತ್ಯುತ್ತಮವಾದ ಶೈಕ್ಷಣಿಕ ಪರಿಸರದಲ್ಲಿ ಶಿಕ್ಷಣ ಒದಗಿಸುವುದೇ ನಮ್ಮ ಗುರಿ. ಇಂತಹದರಲ್ಲೂ ಪೋಷಕರು ಮಾತ್ರ ಬೆಂಗಳೂರು, ಮೈಸೂರಿನ, ಅದರಲ್ಲೂ ಆಯ್ದ ಕೆಲವು ಪ್ರತಿಷ್ಠಿತ ಕಾಲೇಜುಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುವುದಕ್ಕೆ ಆದ್ಯತೆ ನೀಡುತ್ತಾರೆ. ಅಲ್ಲೆಲ್ಲೂ ಪ್ರವೇಶ ದೊರೆಯದಿದ್ದರೆ ಅಥವಾ ಯಾವುದೋ ಕಾರಣಕ್ಕೆ ಅಲ್ಲಿಗೆ ಕಳುಹಿಸಲು ಸಾಧ್ಯ ಆಗದಿದ್ದರಷ್ಟೇ ಈ ಪ್ರದೇಶದ ಕಾಲೇಜುಗಳಿಗೆ ತಮ್ಮ ಮಕ್ಕಳಿಗೆ ಪ್ರವೇಶ ಕೊಡಿಸುತ್ತಾರೆ. ಇದಕ್ಕೆಲ್ಲಾ ಮುಖ್ಯ ಕಾರಣ, ಕ್ಯಾಂಪಸ್ ಸಂದರ್ಶನ ಎಂಬ ಮುಖ್ಯ ಪ್ರಲೋಭನೆ. ಇಂತಹ ಬೆಳವಣಿಗೆ ಆತಂಕಕಾರಿ ಅಲ್ಲವೇ' ಎಂದು ಅವರು ಪ್ರಶ್ನಿಸಿದ್ದರು.

ವೇಗವಾಗಿ ಬದಲಾಗುತ್ತಿರುವ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಯಿಂದಾಗಿ, ಎಲ್ಲ ಬಗೆಯ ವಿದ್ಯಾರ್ಥಿಗಳೂ ಉನ್ನತಿ ಸಾಧಿಸುತ್ತಿದ್ದಾರೆ. ಹಾಗಾಗಿ, ಅವರಿರುವುದು ಕೆಲವೇ ಕಾಲೇಜುಗಳಲ್ಲಿ ಎಂಬ ಪೂರ್ವಗ್ರಹವನ್ನು ಮೊದಲು ತೊಡೆದುಹಾಕಬೇಕಾಗಿದೆ. ಎಲ್ಲಾ ವರ್ಗದ ವಿದ್ಯಾರ್ಥಿಗಳ ಹಿತರಕ್ಷಣೆ ಮುಖ್ಯವಾಗಬೇಕು. ಕ್ಯಾಂಪಸ್ ಸಂದರ್ಶನ ಪ್ರಕ್ರಿಯೆಯನ್ನು ಎಲ್ಲ ಶೈಕ್ಷಣಿಕ ಸಂಸ್ಥೆಗಳಿಗೂ ವಿಸ್ತರಿಸಬೇಕು. ಕಂಪನಿಗಳು ತಮ್ಮ ಅವಶ್ಯಕತೆಗೆ ಅನುಗುಣವಾಗಿ ಮುಕ್ತ ಮನಸ್ಸಿನಿಂದ ನೇಮಕಾತಿ ಪ್ರಕ್ರಿಯೆ ನಡೆಸುವಂತಾಗಬೇಕು.

ವಾಚಕರ ವಾಣಿ

ಅಭಿಮಾನ ಇರಲಿ, ಅಂಧಾಭಿಮಾನ ಸಲ್ಲದು

ಚಿತ್ರನಟ ಯಶ್ ಅವರ ಜನ್ಮದಿನಾಚರಣೆಗಾಗಿ ಕಟೌಟ್ ಕಟ್ಟುವ ವೇಳೆ ಸಂಭವಿಸಿದ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟ ಮೂವರು ಯುವಕರು ಹಾಗೂ ಗಾಯಗೊಂಡವರೆಲ್ಲರೂ ಕೂಲಿಕಾರ್ಮಿಕರು, ತಮ್ಮ ಕುಟುಂಬದ ನಿರ್ವಹಣೆ ಹೊಣೆ ಹೊತ್ತವರೇ ಆಗಿದ್ದುದು ಅತ್ಯಂತ ನೋವಿನ ಸಂಗತಿ. ಇಂದು ಅನೇಕ ಜನಪ್ರಿಯ ನಟರ ಅಭಿಮಾನಿ ಬಳಗಗಳು ಹುಟ್ಟಿಕೊಂಡಿದ್ದು, ಅವರವರ ಚಿತ್ರಗಳ ಬಿಡುಗಡೆ ಸಮಯದಲ್ಲಿ, ಅವರ ಜನ್ಮದಿನಗಳಂದು ಮುಗಿಲೆತ್ತರದ ಕಟೌಟ್‌ಗಳನ್ನು ನಿಲ್ಲಿಸಿ ಹಾಲಿನ ಅಭಿಷೇಕ ಮಾಡುವುದು, ಹೂಹಣ್ಣುಗಳ ಬೃಹತ್ ಹಾರಗಳಿಂದ ಅಲಂಕರಿಸಿ ಅಭಿಮಾನ ಮೆರೆಯುವುದು ಸಾಮಾನ್ಯವಾಗಿದೆ. ಹಲವು ಬಾರಿ ಅಭಿಮಾನಿ ಸಂಘಗಳ ಮಧ್ಯೆ ಗಲಾಟೆಗಳೂ ಸಂಭವಿಸಿವೆ.

ಅಭಿಮಾನಿಗಳು ವಿಶೇಷ ಸಂದರ್ಭಗಳಲ್ಲಿ ಹೀಗೆ ಅಂಧಾಭಿಮಾನ ಮೆರೆಯದೆ, ಸಮಾಜಕ್ಕೆ ಉಪಯೋಗ ಎನಿಸುವ ರಕ್ತದಾನದಂತಹ ಕಾರ್ಯಕ್ರಮಗಳನ್ನು ಆಯೋಜಿಸಲಿ. ಅಭಿಮಾನಿಗಳಿಗೆ ಆಯಾ ನಟರೇ ತಿಳಿಹೇಳಬೇಕು. ಅತಿರೇಕ ಬೇಡ ಎಂದು ಅಭಿಮಾನಿಗಳ ಮನವೊಲಿಸಬೇಕು.

ಸಮೀರ ಹಾದಿಮನಿ, ಆಲಮೇಲ

ಕಬ್ಬಿನ ಗದ್ದೆಗೆ ಬೆಂಕಿ: ಸಲ್ಲದ ಕ್ರಮ

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಬಸರಕೋಡು ಗ್ರಾಮದಲ್ಲಿ ಕಬ್ಬಿನ ಗದ್ದೆಗೆ ಆಕಸ್ಮಿಕವಾಗಿ ಬಿದ್ದ ಬೆಂಕಿಯಲ್ಲಿ ಸಿಲುಕಿದ್ದ ತೋಳದ ಮರಿಗಳನ್ನು ಗ್ರಾಮದ ಯುವಕರು ರಕ್ಷಿಸಿರುವುದಾಗಿ ವರದಿಯಾಗಿದೆ. ಕಬ್ಬಿನ ಗದ್ದೆಯ ಕಟಾವಾದ ನಂತರ ಬಹಳಷ್ಟು ಕಡೆಗಳಲ್ಲಿ ರೈತರೇ ಒಣಗಿದ ಕಬ್ಬಿನ ಗರಿಗೆ (ವಗಡು) ಬೆಂಕಿ ಹಾಕುತ್ತಾರೆ. ಬಹುಶಃ ಆಗ ಈ ತೋಳದ ಮರಿಗಳು ಪತ್ತೆಯಾಗಿರಬಹುದು. ಇದು ಏನೇ ಇರಲಿ, ಕಬ್ಬಿನ ಗರಿಗೆ ಬೆಂಕಿ ಹಾಕುವುದು ಸರಿಯಲ್ಲ. ಏಕೆಂದರೆ, ಅಲ್ಲಿ ಅಪರೂಪದ ತೋಳದ ಮರಿಗಳಷ್ಟೇ ಸಾಯುವುದಿಲ್ಲ, ಆ ವಗಡನ್ನು ತಿನ್ನಲೆಂದೇ ಮೇಲೆ ಬಂದು, ತಿಂದಾದ ಮೇಲೆ ಸಾವಯವ ಗೊಬ್ಬರವನ್ನು ನೀಡುವ, ರೈತರ ಮಿತ್ರನೆಂದೇ ಪರಿಗಣಿಸಲಾಗಿರುವ ಎರೆಹುಳುಗಳು ಸಹ ಸಾಯುತ್ತವೆ. ಈ ರೀತಿಯ ಪರಿಸರಸ್ನೇಹಿ ಸಂಬಂಧಗಳನ್ನು ಅರ್ಥ ಮಾಡಿಕೊಂಡು ರೈತರು ಕಬ್ಬಿನ ಗದ್ದೆಗೆ ಬೆಂಕಿ ಹಾಕುವುದನ್ನು ನಿಲ್ಲಿಸಬೇಕು. ಅಂದಹಾಗೆ, ಈ ತೋಳದ ಮರಿಗಳನ್ನು ರಕ್ಷಿಸಿದ ರೈತರು ಮತ್ತು ಪರಿಸರಪ್ರೇಮಿಗಳನ್ನು ಶ್ಲಾಘಿಸಲೇಬೇಕು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಕಣದಲ್ಲಿ ನಡೆಯಲಿ ಒಕ್ಕಣೆ

ಚಳಿಗಾಲದಲ್ಲಿ ಕೆಲ ರೈತರು ತಮ್ಮ ಜಮೀನಿನಲ್ಲಿ ಕಣ ಸಿದ್ಧಮಾಡಿ ಅಲ್ಲಿ ದವಸ ಧಾನ್ಯಗಳನ್ನು ಸಂಗ್ರಹಿಸಿ, ಶುದ್ಧ ಮಾಡಿಕೊಂಡು ಮನೆಗೆ ತರುವುದು ಸಾಮಾನ್ಯ ಸಂಗತಿ. ಇದರಿಂದ ಯಾವುದೇ ತರಹದ ಹಾನಿ ಯಾರಿಗೂ ಉಂಟಾಗುವುದಿಲ್ಲ. ಆದರೆ ಕೆಲವರು ರಸ್ತೆಯಲ್ಲಿಯೇ ಒಕ್ಕಣೆ ಮಾಡುತ್ತಾರೆ. ಇದರಿಂದ, ರಸ್ತೆಯಲ್ಲಿ ಓಡಾಡುವ ಜನರಿಗೆ, ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತದೆ. ಜೊತೆಗೆ ಇದರಿಂದ ದುರ್ಘಟನೆಗಳು ಸಂಭವಿಸಿರುವ ಉದಾಹರಣೆಗಳಿವೆ. ಇನ್ನು ಮುಂದಾದರೂ ರೈತರು ಎಚ್ಚೆತ್ತುಕೊಂಡು, ಹೀಗಾಗದಂತೆ ನೋಡಿಕೊಳ್ಳಬೇಕಾಗಿದೆ.

ಎ.ಎಸ್.ಗೋವಿಂದೇಗೌಡ, ಮೈಸೂರು

ಬಿಲ್ ಪಾವತಿಸದೆ ಸೇವೆ ನಿರೀಕ್ಷಿಸುವುದು ಹೇಗೆ?

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಬಿಎಸ್‌ಎನ್‌ಎಲ್‌ಗೆ ₹ 36.29 ಕೋಟಿ ಮೊತ್ತದ ಬಿಲ್ ಪಾವತಿಸದೆ ಬಾಕಿ ಉಳಿಸಿಕೊಂಡಿವೆ ಎಂದು ವರದಿಯಾಗಿದೆ. ಹೀಗಿರುವಾಗ, ಬಿಎಸ್‌ಎನ್‌ಎಲ್‌ನಿಂದ ವೇಗದ ಇಂಟರ್ನೆಟ್ ಸೌಲಭ್ಯವನ್ನು ಬಯಸುವುದು ಹೇಗೆ? ಜನರು ಹಲವು ಸೇವೆಗಳಿಗೆ ಸರ್ಕಾರಿ ಕಚೇರಿಗಳಿಗೆ ಹೋದಾಗ ಅಧಿಕಾರಿಗಳು ನೆಟ್‌ವರ್ಕ್ ಇಲ್ಲ, ಸರ್ವರ್ ಸರಿಯಿಲ್ಲ ಎಂಬಂತಹ ಹತ್ತಾರು ಸಮಸ್ಯೆಗಳನ್ನು ಮುಂದಿಡುತ್ತಾರೆ, ರಿಪೇರಿ ಮಾಡಲು ಬಿಎಸ್‌ಎನ್‌ಎಲ್ ಸಿಬ್ಬಂದಿ ಬಂದಿಲ್ಲ ಎನ್ನುತ್ತಾರೆ. ಸರ್ಕಾರಿ ಇಲಾಖೆಗಳೇ ಬಿಲ್ ಪಾವತಿ ಮಾಡದಿದ್ದರೆ, ಸರ್ಕಾರಿ ಸಂಸ್ಥೆಯಾದ ಬಿಎಸ್‌ಎನ್‌ಎಲ್ ಹೇಗೆ ತಾನೇ ಉತ್ತಮ ಸೇವೆ ನೀಡುತ್ತದೆ ಮತ್ತು ಖಾಸಗಿಯವರಿಗೆ ಪೈಪೋಟಿ ಒಡ್ಡುತ್ತದೆ?

ಸುನಿಲ್ ಟಿ.ಪಿ., ತಳಗವಾದಿ, ಮಳವಳ್ಳಿ

ಪದವಿ ಶಿಕ್ಷಣ: ಶುಲ್ಕ ಏರಿಕೆ ಅನುಚಿತ

ಪದವಿ ಕಾಲೇಜುಗಳ ಶೈಕ್ಷಣಿಕ ಶುಲ್ಕ ಹೆಚ್ಚಿಸುವ ವಿಶ್ವವಿದ್ಯಾಲಯಗಳ ಪ್ರಸ್ತಾವಕ್ಕೆ ಉನ್ನತ ಶಿಕ್ಷಣ ಇಲಾಖೆ ಸಮ್ಮತಿ ನೀಡುವ ಮೂಲಕ, ವಿದ್ಯಾರ್ಥಿಗಳಿಗೆ ಆಘಾತ ನೀಡಿದೆ. ಯಾವುದೇ ರಾಜ್ಯ ಅಭಿವೃದ್ಧಿ ಆಗಬೇಕಾದರೆ ಅಲ್ಲಿನ ಜನರಿಗೆ ಶಿಕ್ಷಣ, ಆರೋಗ್ಯ ಮತ್ತು ಕಾನೂನು ಸೇವೆಯು ಉಚಿತವಾಗಿ ಇಲ್ಲವೇ ಕೈಗೆಟಕುವ ದರದಲ್ಲಿ ಸಿಗಬೇಕು. ಆದರೆ ಸರ್ಕಾರ ಬೇರೆ ಬೇರೆ ಭಾಗ್ಯಗಳನ್ನು ಉಚಿತವಾಗಿ ನೀಡಿ, ಶೈಕ್ಷಣಿಕ ಶುಲ್ಕ ಏರಿಸಿ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುವುದು ಸರಿಯಲ್ಲ. ಇಲಾಖೆಯು ಈ ಕೂಡಲೇ ಆದೇಶವನ್ನು ಹಿಂಪಡೆದು, ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ನೆಮ್ಮದಿ ನೀಡಬೇಕು.

ಬಿ.ನಾಗರಾಜು, ಬೆಂಗಳೂರು

ಶೋಭೆ ತಾರದ ಹೇಳಿಕೆ

ಆರ್‌ಎಸ್‌ಎಸ್, ವಿಎಚ್‌ಪಿ, ಬಜರಂಗದಳ ಮತ್ತು ಶಿವಸೇನೆಯಂಥ ಕೋಮು ಸಂಘಟನೆಗಳನ್ನು ನಿಷೇಧಿಸಬೇಕು ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ಆಗ್ರಹಿಸಿರುವ 25 ವರ್ಷಗಳ ಹಿಂದಿನ ಸುದ್ದಿ (ಪ್ರ.ವಾ., ಜ. 8) ಓದಿ ಅಚ್ಚರಿಯಾಯಿತು. ಆಗ ಹೀಗೆ ಮಾತನಾಡಿದ್ದ ದೇವೇಗೌಡರು ಈಗ ಅವೇ ಸಂಘಟನೆಗಳ ಜತೆ ಸಹಯೋಗ ಹೊಂದಿರುವ ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡು, ತಾವು ಪ್ರಧಾನಿಯಾಗಲು ಕಾರಣವಾಗಿದ್ದ ಕಾಂಗ್ರೆಸ್ಸನ್ನು 'ಶೀಘ್ರದಲ್ಲೇ ಸಂಪೂರ್ಣ ನಿರ್ನಾಮವಾಗಲಿದೆ' ಎಂದು ಹೇಳಿರುವುದು ವಿಷಾದಕರ. ಒಬ್ಬ ಮುತ್ಸದ್ದಿ ರಾಜಕಾರಣಿಗೆ ಪ್ರಜಾತಂತ್ರದಲ್ಲಿ ಹಾಗೆಲ್ಲಾ ವಿರೋಧಪಕ್ಷವಿಲ್ಲದೆ ಒಂದೇ ಪಕ್ಷದ ಆಡಳಿತ ಇರಲು ಸಾಧ್ಯವಿಲ್ಲ ಎಂಬುದು ಗೊತ್ತಿಲ್ಲದ ಸಂಗತಿಯೇನೂ ಆಗಿರಲಾರದು. ದೇವೇಗೌಡರಂಥ ಮೇರು ವ್ಯಕ್ತಿತ್ವದವರಿಗೆ ಇಂತಹ ಹೇಳಿಕೆ ಶೋಭೆ ತರುವುದಿಲ್ಲ.

ರವಿಕಿರಣ್ ಶೇಖರ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬಿಲ್ಕಿಸ್ ಬಾನು ಪ್ರಕರಣ: ಶಿಕ್ಷೆ ರದ್ದು ಮಾಡುವ ಪ್ರಕ್ರಿಯೆ

ಗುಜರಾತ್ ಸರ್ಕಾರಕ್ಕೆ ಅಧಿಕಾರ ಇರಲಿಲ್ಲವೇಕೆ...

ಬಿಲ್ಕಿಸ್ ಬಾನು ಅತ್ಯಾಚಾರ ಪ್ರಕರಣದಲ್ಲಿ ಶಿಕ್ಷೆಯ ಅವಧಿಗೂ ಮುನ್ನ ಅಪರಾಧಿಗಳನ್ನು ಬಿಡುಗಡೆ ಮಾಡಿದ್ದ ಗುಜರಾತ್ ಸರ್ಕಾರದ ಕ್ರಮ ಕಾನೂನುಬಾಹಿರ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಈ ಪ್ರಕರಣದಲ್ಲಿ ಅಂತಹ ಅಧಿಕಾರ ಗುಜರಾತ್ ಸರ್ಕಾರಕ್ಕೆ ಇಲ್ಲ ಎಂದೂ ನ್ಯಾಯಾಲಯ ಹೇಳಿದೆ. ಅಂತಹ ಅಧಿಕಾರ ಯಾವ ಸರ್ಕಾರಕ್ಕೆ ಇರುತ್ತದೆ ಮತ್ತು ಯಾವ ಸಂದರ್ಭದಲ್ಲಿ ಇಂತಹ ಅಧಿಕಾರ ರಾಜ್ಯ ಸರ್ಕಾರಕ್ಕೆ ಬಂದೊದಗುತ್ತದೆ ಎಂಬ ವಿವರ ಇಲ್ಲಿದೆ

ಕಾನೂನು ಹೇಳುವುದೇನು? ಅಪರಾಧ ನಿಗದಿಯಾಗಿ ಶಿಕ್ಷೆಗೆ ಗುರಿಯಾದ ಯಾವುದೇ ಅಪರಾಧಿಯ ಶಿಕ್ಷೆ ಪ್ರಮಾಣವನ್ನು ಕಡಿತ ಮಾಡುವ ಅಥವಾ ರದ್ದುಗೊಳಿಸುವ ಅಧಿಕಾರವನ್ನು 'ಅಪರಾಧ ದಂಡ ಪ್ರಕ್ರಿಯಾ ಸಂಹಿತೆ'ಯು (ಸಿಆರ್‌ಪಿಸಿ) ಸರ್ಕಾರಗಳಿಗೆ ನೀಡಿದೆ. ಆದರೆ ಈ ಅಧಿಕಾರವನ್ನು ಹೇಗೆ ಬಳಸಬೇಕು ಎಂಬುದನ್ನೂ ಸಂಹಿತೆಯ ವಿವಿಧ ಸೆಕ್ಷನ್‌ಗಳಲ್ಲಿ ವಿವರಿಸಲಾಗಿದೆ. ಸಿಆರ್‌ಪಿಸಿಯ 432, ಅದರ ಉಪಸೆಕ್ಷನ್‌ಗಳು ಮತ್ತು 433ಎ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ

ಶಿಕ್ಷೆ ಕಡಿಮೆ ಮಾಡುವ, ರದ್ದು ಮಾಡುವ ಅಧಿಕಾರ

432(1): ಶಿಕ್ಷೆಗೊಳಗಾದ ಮತ್ತು ಶಿಕ್ಷೆ ಅನುಭವಿಸುತ್ತಿರುವ ಯಾವುದೇ ವ್ಯಕ್ತಿಯ ಶಿಕ್ಷೆಯನ್ನು ಕಡಿಮೆ ಮಾಡುವ ಅಥವಾ ರದ್ದುಪಡಿಸುವ ಅಧಿಕಾರ 'ಸೂಕ್ತ ಸರ್ಕಾರ'ಕ್ಕೆ ಇದೆ. ಷರತ್ತುಗಳ ಆಧಾರದಲ್ಲಿ ಅಥವಾ ಯಾವುದೇ ಷರತ್ತು ಇಲ್ಲದೇ ಶಿಕ್ಷೆಯನ್ನು ಕಡಿಮೆ ಮಾಡುವ ಅಥವಾ ರದ್ದುಪಡಿಸುವ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬಹುದು

432(2): ಶಿಕ್ಷೆಯನ್ನು ಕಡಿಮೆ ಮಾಡುವ ಅಥವಾ ರದ್ದುಪಡಿಸುವ ಮುನ್ನ ಆ ಶಿಕ್ಷೆಯನ್ನು ನೀಡಿದ್ದ ನ್ಯಾಯಾಲಯದ ನ್ಯಾಯಾಧೀಶರ ಅಭಿಪ್ರಾಯವನ್ನು 'ಸೂಕ್ತ ಸರ್ಕಾರ' ತೆಗೆದುಕೊಳ್ಳಬೇಕು. ಆ ಅಭಿಪ್ರಾಯವು/ವರದಿಯು ಈ ಕೆಳಕಂಡ ವಿವರಗಳನ್ನು ಒಳಗೊಂಡಿರಬೇಕು.
- ಶಿಕ್ಷೆಯನ್ನು ಕಡಿಮೆ ಅಥವಾ ರದ್ದು ಮಾಡಬೇಕೇ ಅಥವಾ ಅಂತಹ ಅರ್ಜಿಯನ್ನು ತಿರಸ್ಕರಿಸಬೇಕೇ ಎಂಬುದನ್ನು ನ್ಯಾಯಾಧೀಶರು ಸ್ಪಷ್ಟವಾಗಿ ಹೇಳಬೇಕು. ತಾವು ಅಂತಹ ನಿರ್ಧಾರಕ್ಕೆ ಬರಲು ಕಾರಣಗಳೇನು ಎಂಬುದನ್ನು ಅ ವರದಿಯಲ್ಲಿ ಸ್ಪಷ್ಟವಾಗಿ ವಿವರಿಸಿರಬೇಕು. ಈ ಕಾರಣಗಳು ಸತ್ಯಾಸತ್ಯತೆಗಳನ್ನು ಆಧರಿಸಿರಬೇಕು
- ಜತೆಗೆ ಈ ಸಂಬಂಧ ನಡೆದ ವಿಚಾರಣೆ ಮತ್ತು ಹೇಳಿಕೆಗಳನ್ನು ಒಳಗೊಂಡ ದಾಖಲೆಗಳು ಇದ್ದರೆ, ಅದರ ದೃಢೀಕೃತ ನಕಲು ಪ್ರತಿಯನ್ನು ವರದಿಯೊಟ್ಟಿಗೆ ನೀಡಬೇಕು

ಈ ನ್ಯಾಯಾಧೀಶನು ಅಪರಾಧಿ ಜೈಲುಶಿಕ್ಷೆ ಅನುಭವಿಸುತ್ತಿರುವ ಜೈಲಿನ ಸಲಹಾ ಸಮಿತಿಯ ಸದಸ್ಯನಾಗಿರಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ

ಅಪರಾಧ ನಿಗದಿ ಮಾಡಿದ ಮತ್ತು ಶಿಕ್ಷೆ ನಿಗದಿ ಮಾಡಿದ ನ್ಯಾಯಾಲಯದ ಹಾಲಿ ನ್ಯಾಯಾಧೀಶರ ಅಭಿಪ್ರಾಯವನ್ನು ಪಡೆದುಕೊಳ್ಳುವುದು ಕಡ್ಡಾಯ (ಈ ಸೆಕ್ಷನ್‌ನಲ್ಲಿ ಇರುವ 'may' ಎಂಬುದನ್ನು 'shall' ಎಂದೇ ಓದಿಕೊಳ್ಳಬೇಕು) ಎಂದು ಸುಪ್ರೀಂ ಕೋರ್ಟ್ ಹೇಳಿದೆ


432(7): 432(1)ರಲ್ಲಿ ಹೇಳಲಾಗಿರುವ 'ಸೂಕ್ತ ಸರ್ಕಾರ' ಎಂಬುದನ್ನು 432(7) ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಅಪರಾಧ ಕೃತ್ಯಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆದ, ಅಪರಾಧವನ್ನು ನಿಗದಿಮಾಡಿದ ಮತ್ತು ಶಿಕ್ಷೆಯನ್ನು ನೀಡಿದ ನ್ಯಾಯಾಲಯ ಇರುವ ರಾಜ್ಯದ ಸರ್ಕಾರವೇ 'ಸೂಕ್ತ ಸರ್ಕಾರ'

433ಎ: ಶಿಕ್ಷೆಯನ್ನು ಕಡಿಮೆ ಮಾಡುವ ಅಥವಾ ರದ್ದು ಮಾಡುವ ಅಧಿಕಾರಕ್ಕೆ ನಿರ್ಬಂಧಗಳು ಸಿಆರ್‌ಪಿಸಿಯ 432 ಸೆಕ್ಷನ್ ಮತ್ತು ಅದರ ಯಾವುದೇ ಉಪಸೆಕ್ಷನ್‌ಗಳು 433ಎ ವಿವರಿಸುವ ನಿರ್ಬಂಧಗಳಿಗೆ ಅನ್ವಯವಾಗುವುದಿಲ್ಲ. ಮರಣ ದಂಡನೆ ವಿಧಿಸಬಹುದಾದ ಅಪರಾಧ ಕೃತ್ಯದಲ್ಲಿ ಜೀವಿತಾವಧಿ ಶಿಕ್ಷೆಗೆ ಗುರಿಯಾದ ಮತ್ತು ಮರಣದಂಡನೆಯನ್ನು ಜೀವಿತಾವಧಿ ಶಿಕ್ಷೆಗೆ ಇಳಿಸಿದ ಪ್ರಕರಣಗಳಲ್ಲಿ, ಅಪರಾಧಿಯು ಕನಿಷ್ಠ 14 ವರ್ಷಗಳ ಸೆರೆವಾಸವನ್ನು ಅನುಭವಿಸಿರಬೇಕು. 14 ವರ್ಷಗಳ ಸೆರೆವಾಸವನ್ನು ಅನುಭವಿಸದೇ ಇದ್ದರೆ, ಶಿಕ್ಷೆ ಕಡಿಮೆ ಮಾಡುವಂತೆ ಅಥವಾ ಶಿಕ್ಷೆಯ ಅವಧಿಗೂ ಮುನ್ನವೇ ಬಿಡುಗಡೆ ಮಾಡಿ ಎಂದು ಅರ್ಜಿ ಸಲ್ಲಿಸುವಂತಿಲ್ಲ

ಗುಜರಾತ್ ಸರ್ಕಾರ ಮಾಡಿದ್ದೇನು?: 'ಸುಪ್ರೀಂ' ವಿವರ

ಈ ಪ್ರಕರಣದಲ್ಲಿ ವಿಚಾರಣೆ, ಅಪರಾಧ ನಿಗದಿ ಮತ್ತು ಶಿಕ್ಷೆ ನಿಗದಿ ಮಾಡಿದ್ದು ಮುಂಬೈನ ಸಿಬಿಐ ವಿಶೇಷ ನ್ಯಾಯಾಲಯ. ಸಿಆರ್‌ಪಿಸಿಯ 432(1) ಸೆಕ್ಷನ್ ಪ್ರಕಾರ ಶಿಕ್ಷೆಯನ್ನು ಕಡಿಮೆ ಮಾಡುವ ಅಥವಾ ರದ್ದು ಮಾಡುವ ಅಧಿಕಾರ ಇರುವುದು ಮಹಾರಾಷ್ಟ್ರ ಸರ್ಕಾರಕ್ಕೆ ಮಾತ್ರ. ಆದರೆ ತನಗೆ ಇಲ್ಲದ ಅಧಿಕಾರವನ್ನು ಗುಜರಾತ್ ಸರ್ಕಾರ ಚಲಾಯಿಸಿದೆ

- ಈ ಸಂಬಂಧ ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶರ ಅಭಿಪ್ರಾಯವನ್ನು ಕೇಳಲಾಗಿತ್ತು. ಅವರು ಅಪರಾಧಿಗಳ ಶಿಕ್ಷೆಯನ್ನು ಕಡಿಮೆ ಮಾಡುವುದು ಅಥವಾ ಅವರನ್ನು ಶಿಕ್ಷೆಯ ಅವಧಿಗೂ ಮುನ್ನ ಬಿಡುಗಡೆ ಮಾಡುವುದು ಸೂಕ್ತವಲ್ಲ ಎಂದು ವರದಿ ನೀಡಿದ್ದರು. ಆ ವರದಿಯನ್ನು ಮರೆಮಾಚಿ, ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿತ್ತು. ಈ ವರದಿಯನ್ನು ಕಡೆಗಣಿಸಿದ್ದು ಮತ್ತು ಮರೆಮಾಚಿದ್ದು ಕಾನೂನು ಬಾಹಿರ
- 2022ರಲ್ಲಿ ಕೃತ್ಯ ನಡೆದಿದ್ದ ಗೋದ್ರಾ ಪಟ್ಟಣವಿರುವ ಗುಜರಾತ್‌ನ ಪಂಚಮಹಲ್ ಜಿಲ್ಲಾ ನ್ಯಾಯಾಧೀಶರ ಅಭಿಪ್ರಾಯವನ್ನೂ ಗುಜರಾತ್ ಸರ್ಕಾರ ಕೇಳಿತ್ತು. ಪಂಚಮಹಲ್ ಜಿಲ್ಲಾ ನ್ಯಾಯಾಧೀಶರು ಅಪರಾಧಿಗಳ ಶಿಕ್ಷೆಯನ್ನು ಕಡಿಮೆ ಮಾಡುವ ಅಥವಾ ಶಿಕ್ಷೆಯ ಅವಧಿಗೂ ಮುನ್ನ ಬಿಡುಗಡೆ ಮಾಡುವ ಕ್ರಮವು ಸೂಕ್ತವಲ್ಲ ಎಂದು ವರದಿ ನೀಡಿದ್ದರು. ಈ ನಿರ್ಧಾರವು ಸರಿಯಾದುದಾದರೂ, ಈ ಪ್ರಕರಣವು ಅವರ ವ್ಯಾಪ್ತಿಗೆ ಬರುವುದಿಲ್ಲವಾದ ಕಾರಣ ಈ ವರದಿಗೆ ಕಾನೂನಿನಲ್ಲಿ ಯಾವುದೇ ಮಾನ್ಯತೆ ಇಲ್ಲ



- ಆನಂತರ ಅಪರಾಧಿಗಳು ಸೆರೆವಾಸ ಅನುಭವಿಸುತ್ತಿದ್ದ ಕಾರಾಗೃಹವಿದ್ದ ದಾಹೋದ್ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರ ಅಭಿಪ್ರಾಯವನ್ನು ಗುಜರಾತ್ ಸರ್ಕಾರ ಕೇಳಿತ್ತು. ಅವರು ಅಪರಾಧಿಗಳ ಅರ್ಜಿಯನ್ನು ಪರಿಗಣಿಸುವಂತೆ ವರದಿ ನೀಡಿದ್ದರು. ವರದಿ ನೀಡುವಲ್ಲಿ ಪಾಲಿಸಬೇಕಾದ (ಕಾರಣಗಳು ವಿವರಿಸುವ) ನಿಯಮಗಳನ್ನು ಉಲ್ಲಂಘಿಸಲಾಗಿತ್ತು. ದಾಹೋದ್ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರ ವ್ಯಾಪ್ತಿಗೆ ಇದು ಬರುವುದಿಲ್ಲವಾದ ಕಾರಣ, ಅವರ ವರದಿಗೆ ಕಾನೂನಿನ ಮಾನ್ಯತೆ ಇಲ್ಲ. ಜತೆಗೆ ಅವರು ಕಾರಾಗೃಹ ಸಲಹಾ ಸಮಿತಿಯ ಸದಸ್ಯರೂ ಆಗಿರುವ ಕಾರಣದಿಂದಲೂ ಈ ವರದಿ ಗಣನೆಗೆ ಬರುವುದೇ ಇಲ್ಲ

ಅಪರಾಧಿಗಳು ಒಟ್ಟು 14 ವರ್ಷಕ್ಕಿಂತ ಹೆಚ್ಚಿನ ಅವಧಿ ಸೆರೆವಾಸದಲ್ಲಿ ಇದ್ದರೂ, ಅವರು ಆ ಅವಧಿಯಲ್ಲಿ ಪೆರೋಲ್ ಮತ್ತು ಪರ್ಲೋ ಆಧಾರದಲ್ಲಿ ಹಲವು ತಿಂಗಳು ಜೈಲಿನಿಂದ ಹೊರಗೆ ಇದ್ದರು. ದಂಡ ಕಟ್ಟದೇ ಇದ್ದುದಕ್ಕೆ ಪ್ರತಿಯಾಗಿ ಅನುಭವಿಸಬೇಕಿದ್ದ ಹೆಚ್ಚುವರಿ ಜೈಲುಶಿಕ್ಷೆಯನ್ನು ಅನುಭವಿಸಿಲ್ಲ. ಅದನ್ನು ಮನ್ನಿಸಿ ಶಿಕ್ಷೆಯನ್ನು ಕಡಿತ ಮಾಡುವ ಅಥವಾ ಅವಧಿಗೂ ಮುನ್ನ ಬಿಡುಗಡೆ ಮಾಡುವ ಅಧಿಕಾರ ಸರ್ಕಾರಕ್ಕಿಲ್ಲ

ಈ ಎಲ್ಲಾ ಉಲ್ಲಂಘನೆಗಳ ಮೂಲಕ ಗುಜರಾತ್ ಸರ್ಕಾರವು ಅತ್ಯಾಚಾರಿಗಳನ್ನು ಶಿಕ್ಷೆಯ ಅವಧಿ ಪೂರ್ಣಗೊಳ್ಳುವುದಕ್ಕೂ ಮುನ್ನ ಬಿಡುಗಡೆ ಮಾಡಿತ್ತು

ಕ್ಷಮಾದಾನ ಅರ್ಜಿ ಪರಿಗಣನೆಗೆ ಇವೆ ಐದು ಅಂಶಗಳು

ಯಾವುದೇ ಅಪರಾಧಿಯ ಕ್ಷಮಾದಾನದ ಅರ್ಜಿಯನ್ನು ಬಹಳ ವಿವೇಚನೆ ಬಳಸಿ ಪರಿಗಣಿಸಬೇಕಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆದರೆ, ಬಿಲ್ಕಿಸ್ ಬಾನು ಪ್ರಕರಣದ ಅಪರಾಧಿಗಳ ಕ್ಷಮಾದಾನ ಅರ್ಜಿಯನ್ನು ಪರಿಗಣಿಸುವಾಗ ಗುಜರಾತ್ ಸರ್ಕಾರ ವಿವೇಚನೆಯನ್ನೇ ಬಳಸಿಲ್ಲ ಎನ್ನುವುದು ಸುಪ್ರೀಂ ಕೋರ್ಟ್‌ನ ಅಭಿಪ್ರಾಯ

1. ಅಪರಾಧಿಯು ಎಸಗಿರುವ ಕೃತ್ಯವು ಸಮಾಜದ ಮೇಲೆ ಬೀರುವ ಪರಿಣಾಮವನ್ನು ಪ್ರಮುಖವಾಗಿ ಗಮನಿಸಬೇಕು. ಜೊತೆಗೆ, ಅಪರಾಧಿಯ ಕೃತ್ಯವು ಯಾವುದೋ ಸರಣಿ ಅಥವಾ ಸಾಮೂಹಿಕ ಅಪರಾಧಗಳ ಭಾಗವಾಗಿತ್ತೇ ಅಥವಾ ಪ್ರತ್ಯೇಕ ಅಪರಾಧವಾಗಿತ್ತೇ ಎನ್ನುವುದು ಮುಖ್ಯವಾಗಿ ಪರಿಗಣಿಸಬೇಕು
2. ಅಪರಾಧ ಕೃತ್ಯ ಎಸಗಿದ ವ್ಯಕ್ತಿಯು ಬಿಡುಗಡೆಗೊಂಡರೆ, ಆತ ಮುಂದೊಂದು ದಿನ ಮತ್ತೆ ಅಂತಹ ಅಪರಾಧ ಕೃತ್ಯ ಎಸಗುವುದಿಲ್ಲ ಎನ್ನುವ ಖಚಿತತೆ ಇದೆಯೇ ಎಂಬುದನ್ನು ಪರಿಗಣಿಸಬೇಕು
3. ಅಂತಹ ಅಪರಾಧ ಕೃತ್ಯವನ್ನು ಮತ್ತೆ ಎಸಗುವ ಎಲ್ಲಾ ಸ್ವರೂಪದ ಸಾಮರ್ಥ್ಯಗಳು ಅಪರಾಧಿಗೆ ಇವೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಗಣಿಸಬೇಕು
4. ಅಪರಾಧಿಯ ಶಿಕ್ಷೆಯನ್ನು ಕಡಿಮೆ ಮಾಡುವ ಅಥವಾ ರದ್ದು ಪಡಿಸುವ ಕ್ರಮದಿಂದ ನಿಜವಾಗಿಯೂ ಉಪಯೋಗವಿದೆಯೇ ಎಂಬುದನ್ನು ಸರ್ಕಾರವು ವಿವೇಚಿಸಬೇಕು
5. ಅಪರಾಧಿಯ ಕುಟುಂಬದ ಸಾಮಾಜಿಕ-ಆರ್ಥಿಕ ಸ್ಥಿತಿಗತಿಯನ್ನು ಗಮನದಲ್ಲಿ ಇರಿಸಿಕೊಳ್ಳಬೇಕು

ರಾಜ್ಯ ಸರ್ಕಾರಗಳು ಅಪರಾಧಿಯ ಶಿಕ್ಷೆಯನ್ನು ಕಡಿಮೆ ಮಾಡುವ ಅಥವಾ ಶಿಕ್ಷೆಯನ್ನು ರದ್ದುಪಡಿಸುವ ಮುನ್ನ ಈ ಅಂಶಗಳನ್ನು ಪರಿಗಣಿಸಬೇಕು ಎಂದು ರಾಮ ಚಂದರ್ ವರ್ಸಸ್ ಹರಿಯಾಣ ಸರ್ಕಾರದ ಪ್ರಕರಣದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಹೇಳಿತ್ತು. ನಂತರದ ಹಲವು ಪ್ರಕರಣಗಳ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಈ ಅಂಶಗಳನ್ನು ಪದೇ-ಪದೇ ಉಲ್ಲೇಖಿಸಿದೆ



11 ಮಂದಿ ಅಪರಾಧಿಗಳಿಗೆ ಕ್ಷಮಾದಾನ ನೀಡಿ, ಆಗಸ್ಟ್ 15, 2022ರಲ್ಲಿ ಗೋಧ್ರಾ ಸಬ್‌ಜೈಲಿನಿಂದ ಬಿಡುಗಡೆಗೊಳಿಸಲಾಗಿತ್ತು. ಸನ್ನಡತೆ ತೋರಿದ್ದಕ್ಕಾಗಿ ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳು ಸಂದಿದ ದಿನವೇ ಅವರನ್ನು ಬಿಡುಗಡೆ ಮಾಡಲಾಗಿತ್ತು. ಜೈಲಿನಿಂದ ಹೊರಬಂದ ಅಪರಾಧಿಗಳನ್ನು ಕೆಲವು ಮಹಿಳೆಯರು ತಿಲಕವಿಟ್ಟು ಸ್ವಾಗತಿಸಿದರು. ಕೆಲವರು, ಅಪರಾಧಿಗಳಿಗೆ ಹೂವಿನ ಹಾರವನ್ನೂ ಹಾಕಿದ್ದರು —ಪಿಟಿಐ ಚಿತ್ರ

ಕಟ್ಟದ ದಂಡ: ಹೆಚ್ಚುವರಿ ಶಿಕ್ಷೆ ಕಡ್ಡಾಯ

ಮುಂಬೈನ ಸಿಬಿಐನ ವಿಶೇಷ ನ್ಯಾಯಾಲಯವು ಅಪರಾಧಿಗಳಿಗೆ ಶಿಕ್ಷೆ ವಿಧಿಸುವ ಸಂದರ್ಭದಲ್ಲಿ ದಂಡವನ್ನೂ ವಿಧಿಸಿತ್ತು. ಒಂದುವೇಳೆ ದಂಡ ಪಾವತಿಸಲು ಅಪರಾಧಿಗಳು ವಿಫಲವಾದರೆ, ಮತ್ತೆ ಜೈಲುಶಿಕ್ಷೆ ಅನುಭವಿಸಬೇಕು ಎಂದೂ ಹೇಳಿತ್ತು. ಆದರೆ, ಅಪರಾಧಿಗಳು ದಂಡದ ಮೊತ್ತವನ್ನು 2022ರವರೆಗೂ ಪಾವತಿಸಿರಲಿಲ್ಲ. ಈ ಅಂಶವನ್ನು ಕಡೆಗಣಿಸಿ, ಗುಜರಾತ್ ಸರ್ಕಾರ ಅಪರಾಧಿಗಳಿಗೆ ಕ್ಷಮಾದಾನ ನೀಡಿ, ಜೈಲಿನಿಂದ ಬಿಡುಗಡೆಗೊಳಿಸಿತ್ತು. ಇದನ್ನು ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಕಟುವಾಗಿ ಟೀಕಿಸಿದೆ.

ಸಿಬಿಐ ವಿಶೇಷ ನ್ಯಾಯಾಲಯ ಏನು ಹೇಳಿತ್ತು?: ಕೊಲೆ ಹಾಗೂ ಅತ್ಯಾಚಾರ ಎಸಗಿದ ಅಪರಾಧಕ್ಕಾಗಿ ಸಿಬಿಐ ನ್ಯಾಯಾಲಯವು ಪ್ರತ್ಯೇಕವಾದ ದಂಡವನ್ನು ವಿಧಿಸಿತ್ತು. ಪ್ರತಿಯೊಬ್ಬ ಅಪರಾಧಿಯೂ ಒಟ್ಟು ₹34,000 ದಂಡವನ್ನು ಪಾವತಿಸಬೇಕು ಎಂದು ಕೋರ್ಟ್ ಹೇಳಿತ್ತು. ಒಂದು ವೇಳೆ ದಂಡವನ್ನು ಪಾವತಿಸಲು ಅಪರಾಧಿಗಳು ವಿಫಲರಾದರೆ, 34 ವರ್ಷಗಳ ಹೆಚ್ಚುವರಿ ಜೈಲುಶಿಕ್ಷೆಯನ್ನು ಅನುಭವಿಸಬೇಕು ಎಂದಿತ್ತು. ಆದರೆ, 11 ಮಂದಿ ಅಪರಾಧಿಗಳು ದಂಡವನ್ನು ಕಟ್ಟಲಿಲ್ಲ ಮತ್ತು ಹೀಗೆ ದಂಡ ಕಟ್ಟದಿದ್ದಕ್ಕಾಗಿ ಅನುಭವಿಸಬೇಕಿದ್ದ ಶಿಕ್ಷೆಯನ್ನು ರದ್ದು ಪಡಿಸಲಾಗದು. ಅದನ್ನು ಪ್ರತ್ಯೇಕವಾಗಿಯೇ ಅನುಭವಿಸಬೇಕು ಎಂದು ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ.

ಆಧಾರ: ಸುಪ್ರೀಂ ಕೋರ್ಟ್ ತೀರ್ಪು, ಅಪರಾಧ ದಂಡ ಪ್ರಕ್ರಿಯಾ ಸಂಹಿತೆ

ಸಿನಿ ಬಿಟ್ಸ್



'ಯುಐ' ಟೀಸರ್‌ನಲ್ಲಿ ಕತ್ತಲೆ ಲೋಕ ಸೃಷ್ಟಿಸಿ ಅಭಿಮಾನಿಗಳ ಕುತೂಹಲ ಹೆಚ್ಚಿಸಿದ್ದ ನಟ ಉಪೇಂದ್ರ ಕೊನೆಗೂ ಫಸ್ಟ್‌ಲುಕ್ ಬಿಡುಗಡೆ ಮಾಡುವ ಮೂಲಕ ಸಿನಿಮಾದ ಝಲಕ್ ಹಾಗೂ ಸಿನಿಮಾದೊಳಗಿನ ಉಪೇಂದ್ರನನ್ನು ಜನರಿಗೆ ಪರಿಚಯಿಸಿದ್ದಾರೆ.

ನಟರಾದ ಶಿವರಾಜ್‌ಕುಮಾರ್ ಹಾಗೂ ಕಿಚ್ಚ ಸುದೀಪ್, ತೆಲುಗಿನ ಖ್ಯಾತ ನಿರ್ಮಾಪಕ ಅಲ್ಲು ಅರವಿಂದ್ ಅವರು ಸೋಮವಾರ(ಜ.8) 'ಯುಐ' ಸಿನಿಮಾದ ಫಸ್ಟ್‌ಲುಕ್ ಹಾಗೂ ಟೀಸರ್ ಬಿಡುಗಡೆಗೊಳಿಸಿದರು.

''ಸಿನಿಮಾ ಬಗ್ಗೆ ಜನರೇ ಮಾತನಾಡಬೇಕು. ಮನುಷ್ಯ ತನ್ನ ಜೀವನದಲ್ಲಿ ಮೂರು ಹಂತಗಳನ್ನು ನೋಡುತ್ತಾನೆ. 'ನಾನು ಸರಿ ಇದ್ದೇನೆ, ಪ್ರಪಂಚ ಸರಿ ಇಲ್ಲ' ಎನ್ನುವ ಒಂದು ಹಂತ. ಆವಾಗ ಒಂದಿಷ್ಟು ಸಿನಿಮಾ ಮಾಡಿದೆ. 'ನನ್ನಲ್ಲೇನೋ ಸಮಸ್ಯೆ ಇದೆ. ಪ್ರಪಂಚ ಸರಿಯಾಗಿದೆ' ಎನ್ನುವ ಎರಡನೇ ಹಂತ. ಈವಾಗ 'ನಾನೂ ಸರಿ ಇದ್ದೇನೆ. ಪ್ರಪಂಚವೂ ಸರಿಯಾಗಿದೆ' ಎನ್ನುವ ಹಂತಕ್ಕೆ ಬಂದಿದ್ದೇನೆ. ಹೀಗಿರುವಾಗ ಸುಮ್ಮನೆ ನಟಿಸುತ್ತಾ ಸಾಗಿದೆ. ಆದರೂ ಒಂದು ಶಕ್ತಿ ನನ್ನಿಂದ ಈ ಸಿನಿಮಾ ಮಾಡಿಸಿದೆ. ಈ ಸಿನಿಮಾ ಮಾಡಿರುವುದೇ ಪ್ರೇಕ್ಷಕರು ಮಾತನಾಡಬೇಕು ಎಂದು. 'ಯು' ಎನ್ನುವುದು 'ಐ' ಆಗಬೇಕು. ಎಂದರೆ 'ನೀವೆಲ್ಲರೂ ನಾನು ಆಗಬೇಕು' ಅದೇ ಸಿನಿಮಾ'' ಎಂದು ಸಿನಿಮಾದ ಆಳ ಅಗಲ ಬಿಚ್ಚಿಟ್ಟರು ಉಪೇಂದ್ರ.

ನಟರಾದ ಉಪೇಂದ್ರ, ರವಿಶಂಕರ್, ಅಚ್ಯುತ್‌ಕುಮಾರ್, ಸಾಧುಕೋಕಿಲ ಈ ಸಿನಿಮಾದಲ್ಲಿ ಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎನ್ನುವುದಕ್ಕೆ ಸಾಕ್ಷ್ಯದಂತಿದೆ ಟೀಸರ್. ಇಲ್ಲಿ ಆರ್ಟಿಫಿಷಿಯಲ್ ಇಂಟಲಿಜೆನ್ಸ್ (ಎಐ) ವರ್ಲ್ಡ್‌ನಂತೆ ಉಪೇಂದ್ರ ಅವರು ತಮ್ಮ 'ಯುಐ ವರ್ಲ್ಡ್' ಸೃಷ್ಟಿಸಿದ್ದಾರೆ. ಎಂಟು ಭಾಷೆಗಳಲ್ಲಿ ಈ ಸಿನಿಮಾ ಬಿಡುಗಡೆಯಾಗಲಿದೆ.

'10 ವರ್ಷ ಬಿಟ್ಟು 'ಓಂ-2' ಆಗಲಿ': 'ಓಂ-2 ಆಗಲಿ ಬಿಡಿ. ಮುಂದಿನ ವರ್ಷವೇ ಆಗಬೇಕೆಂದಿಲ್ಲ. ಇನ್ನೊಂದು ಹತ್ತು ವರ್ಷ ಬಿಟ್ಟು ಆಗಲಿ. ಶಿವಣ್ಣ ಹಾಗೆಯೇ ಇರುತ್ತಾನೆ' ಎಂದು ಶಿವರಾಜ್‌ಕುಮಾರ್ ಅಭಿಮಾನಿಗಳ ನಿರೀಕ್ಷೆಗೆ ಉತ್ತರಿಸಿದರು. ಪ್ರತಿಯಾಗಿ, 'ನಿರೀಕ್ಷೆ ಎನ್ನುವುದು ಆರೋಗ್ಯಕ್ಕೆ ಹಾನಿಕಾರಕ. ಆಗಬೇಕಿದ್ದ ಸಂದರ್ಭದಲ್ಲಿ ಓಂ-2 ಆಗುತ್ತದೆ' ಎಂದು ಉಪೇಂದ್ರ ಹೇಳಿದರು.

ಫೆ.8ಕ್ಕೆ ಸುನಿಯ 'ಸರಳ ಪ್ರೇಮಕಥೆ'



ವಿನಯ್ ರಾಜ್‌ಕುಮಾರ್

ವಿನಯ್ ರಾಜ್‌ಕುಮಾರ್ ನಟನೆಯ, ಸಿಂಪಲ್ ಸುನಿ ನಿರ್ದೇಶನದ 'ಒಂದು ಸರಳ ಪ್ರೇಮಕಥೆ' ಚಿತ್ರದ ಶೂಟಿಂಗ್ ಪೂರ್ಣಗೊಂಡಿದ್ದು, ಪ್ರೇಮಿಗಳ ದಿನದ ಸಮೀಪ ಎಂದರೆ ಫೆ.8ರಂದು ಚಿತ್ರ ಬಿಡುಗಡೆಗೆ ದಿನಾಂಕ ನಿಗದಿಪಡಿಸಿದ್ದಾರೆ.

ಮ್ಯೂಸಿಕಲ್ ಲವ್‌ಸ್ಟೋರಿ ಸಬ್ಜೆಕ್ಟ್ ಒಳಗೊಂಡ ಈ ಚಿತ್ರದ ಮೂಲಕ ತಮಿಳಿನ ಹಿಟ್ ಸಿನಿಮಾ 'ವಿಕ್ರಮ್'ನಲ್ಲಿ ನಟಿಸಿದ್ದ ಸ್ವತಿಷ್ಠ ಕೃಷ್ಣನ್ ಚಂದನವನ ಪ್ರವೇಶಿಸುತ್ತಿದ್ದಾರೆ. ಚಿತ್ರಕ್ಕೆ ಪ್ರಸನ್ನ ಕಥೆ ಬರೆದಿದ್ದು, ಚಿತ್ರಕಥೆ, ಸಂಭಾಷಣೆ ಬರೆದು ಸುನಿ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಚಿತ್ರದ ಮೊದಲ ಹಾಡು, 'ನೀನ್ಯಾರೆಲೆ.. ನಿನಗಾಗಿಯೇ..ಈ ಜೀವ ಭಾವ ಸೋಜಿಗ..' ಬಿಡುಗಡೆಯಾಗಿದ್ದು, ಸಿದ್ದು ಕೋಡಿಪುರ ಹಾಗೂ ಸುನಿ ಸಾಹಿತ್ಯ ಈ ಹಾಡಿಗಿದೆ. ಈ ಮಧುರ ಹಾಡಿಗೆ ಅರ್ಮಾನ್ ಮಲಿಕ್ ಧ್ವನಿಯಾಗಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಅನವಶ್ಯಕ ಮಾತನಾಡದಿರಿ

ನುಡಿ ಬೆಳಗು





ಪಿ. ಚಂದ್ರಿಕಾ

ಅಧ್ಯಯನದಲ್ಲಿ ತೊಡಗಿದ್ದ ಗುರುವಿನ ಬಳಿಗೆ ಶಿಷ್ಯ ಮಾಧವ ಬಂದ. ಅವನಿಗೆ ತನ್ನ ಸಹಪಾಠಿಯ ಬಗ್ಗೆ ಹೇಳುವುದಿತ್ತು. 'ಗುರುಗಳೇ ಆ ಶ್ಯಾಮ ಇದ್ದಾನಲ್ಲಾ, ಅವನು ಒಂದು ಮಾತನ್ನು ಹೇಳುತ್ತಿದ್ದ' ಎಂದ. ಗುರುಗಳು ಅವನನ್ನು ನೋಡುತ್ತಾ 'ಹೌದೇ ಮಾಧವಾ, ಬಾ ಇಲ್ಲಿ ಕುಳಿತುಕೋ' ಎಂದರು. ಗುರುಗಳು ತನ್ನ ಮಾತುಗಳನ್ನು ಕೇಳುತ್ತಾರೆಂದು ಮಾಧವ ಉತ್ಸಾಹದಿಂದ ಶ್ಯಾಮನ ಬಗ್ಗೆ ಹೇಳಲು ಆರಂಭಿಸಿದನು.

ಗುರುಗಳು ಅವನ ಉತ್ಸಾಹವನ್ನು ಮುರಿಯುವವರಂತೆ 'ಅವನಿಂದ ನಿನಗೇನಾದರೂ ತೊಂದರೆಯಾಯಿತೇ' ಎಂದು ಕೇಳಿದರು. 'ಇಲ್ಲ ಗುರುಗಳೇ ಆದರೆ, ಅವನು ಆಡುತ್ತಿದ್ದ ಮಾತುಗಳು...' ಎನ್ನುವಾಗ ಆ ಮಾತನ್ನು ಅರ್ಧಕ್ಕೆ ತುಂಡರಿಸುತ್ತಾ 'ಅವನು ಹೇಳಿದ್ದು ನಿನ್ನ ಬಗ್ಗೆಯಾ' ಎಂದು ಕೇಳಿದರು.

'ಇಲ್ಲ ಗುರುಗಳೇ' ಎಂದ ಮಾಧವ. ಗುರುಗಳು ದೀರ್ಘವಾಗಿ ಉಸಿರು ತೆಗೆದುಕೊಳ್ಳುತ್ತಾ 'ಹಾಗಾದರೆ ಅದು ನನ್ನ ಬಗ್ಗೆಯೇ ಇರಬೇಕು' ಎಂದರು. ಶಿಷ್ಯನಿಗೆ ಇನ್ನೂ ಬೇಸರವಾಯಿತು.

'ಛೇ. ಇಲ್ಲ ಗುರುಗಳೇ ಅದು ನಿಮ್ಮ ಬಗ್ಗೆಯೂ ಅಲ್ಲ. ನನ್ನ ಬಗ್ಗೆಯೂ ಅಲ್ಲ' ಎಂದ ಶಿಷ್ಯ.

'ಸರಿ ನಮ್ಮಿಬ್ಬರ ಬಗ್ಗೆಯೂ ಅಲ್ಲ ಎಂದರೆ ಆ ಮಾತುಗಳಿಂದ ಯಾರಿಗಾದರೂ ಮನಸ್ಸಿಗೆ ನೋವಾಗುತ್ತಿದೆಯೇ' ಮರುಪ್ರಶ್ನೆ ಗುರುಗಳದು. ಶಿಷ್ಯ ಮತ್ತಷ್ಟು ತಗ್ಗಿದ, 'ಇಲ್ಲ ಗುರುಗಳೇ' ಎಂದ. ಮತ್ತೆ ಗುರುಗಳು 'ಅದರಿಂದ ಯಾರಿಗಾದರೂ ಉಪಯೋಗವಾಗುತ್ತಿದೆಯೇ' ಎಂದು ಕೇಳಿದರು. ಅದಕ್ಕೂ ಶಿಷ್ಯ 'ಇಲ್ಲ' ಎಂದ.

'ಹಾಗಿದ್ದರೆ ನಾವಿಬ್ಬರೂ ಶ್ಯಾಮನ ಬಗ್ಗೆ ಮಾತನಾಡುವುದರಲ್ಲಿ ಅರ್ಥವೇ ಇಲ್ಲ. ನಿರ್ದಿಷ್ಟವಾಗಿ ಯಾರಿಗೂ ಸಂಬಂಧಿಸದ, ಪ್ರಯೋಜನವೂ ಇಲ್ಲದ ಮಾತುಗಳಿಂದ ನಿನ್ನ ಅಧ್ಯಯನದ ಸಮಯವನ್ನು ವ್ಯರ್ಥ ಮಾಡಿಕೊಂಡೆ. ಮತ್ತು ನನ್ನದನ್ನು ಕೂಡಾ. ಇಂಥಾ ವಿಷಯಗಳಿಗೆ ಮನಸ್ಸು ಕೊಡುವ ಬದಲು ಆ ಸಮಯವನ್ನು ಸದುಪಯೋಗ ಮಾಡಿಕೋ' ಎನ್ನುತ್ತ ತಮ್ಮ ಅಧ್ಯಯನದಲ್ಲಿ ತೊಡಗಿಕೊಂಡರು.

ಉಪಯುಕ್ತ ಮಾತುಗಳಿಗೆ ಮಾತ್ರವೇ ಮಹತ್ವ ಇರುವುದೆಂದು ಅರಿತ ಶಿಷ್ಯ ಮತ್ತೆಂದೂ ವ್ಯರ್ಥ ಮಾತುಗಳನ್ನು ಆಡಲಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜನವರಿ 9, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ತ್ರಯೋದಶಿ ಗಂ. 22-25 ನಕ್ಷತ್ರ: ಜ್ಯೇಷ್ಠ ಗಂ. 21-11 ಯೋಗ: ವೃದ್ಧಿ ಗಂ. 24-22 ಕರಣ: ಗರ ಗಂ. 11-18, ಧನು ಮಾಸದ 24 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 4.
ರಾಹುಕಾಲ: ಮಧ್ಯಾಹ್ನ 03-00 – 04-30
ಸೂರ್ಯೋದಯ : 07-00 ಸೂರ್ಯಾಸ್ತ : 06-15
ಮುಸ್ಲಿಂ ದಿನಾಂಕ : 26 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 5, 3

ಮೇಷ: ಈ ದಿನ ಪ್ರಾರಂಭಿಸಿದ ಕೆಲಸವನ್ನು ಸಂಪೂರ್ಣವಾಗಿ ಕೊನೆಗಾಣಿಸುವ ಬಗ್ಗೆ ಜವಾಬ್ದಾರಿ ಇರಲಿ. ದ್ರವ ರೂಪದ ವಸ್ತುಗಳ ಮಾರಾಟಗಾರರಿಗೆ ಅಧಿಕ ಲಾಭ. ಕೆಲಸದಲ್ಲಿ ಸಣ್ಣ-ಪುಟ್ಟ ಸಮಸ್ಯೆ ಎದುರಾಗಬಹುದು.

ವೃಷಭ: ಹಲವು ವರ್ಷಗಳ ಹಿಂದೆಯೇ ಸಂಕಲ್ಪಿಸಿದ ಕೆಲಸವೊಂದು ಈ ದಿನ ನಡೆಯುವಂತಾಗಲಿದೆ. ಇನ್ನೊಬ್ಬರ ನಯ ಮಾತುಗಳಿಗೆ ಮರುಳಾಗಬೇಡಿ. ಮಿತ್ರರ ಉಪಾಯವೊಂದರಿಂದ ಸಂಕಟದಿಂದ ಪಾರಾಗುವಂತಾಗಲಿದೆ.

ಮಿಥುನ: ಧಾರ್ಮಿಕ ನಾಯಕರಿಗೆ ನಾಸ್ತಿಕನ ಮನಸ್ಸನ್ನು ಪರಿವರ್ತನೆ ಮಾಡುವ ಕೆಲಸ ಸಿಗಲಿದೆ. ಪ್ರತಿಭೆಗೆ ತಕ್ಕಂತಹ ಫಲ ದೊರೆತು ಸಂತೋಷವಾಗುವುದು. ಆರೋಗ್ಯದಲ್ಲಿ ಗಮನಾರ್ಹ ಸುಧಾರಣೆ ಇರಲಿದೆ.

ಕರ್ಕಾಟಕ: ದುಷ್ಟರ ಸಹವಾಸದಿಂದ ದೂರವಿರುವ ಪ್ರಯತ್ನ ಮಾಡುವುದು ಗೌರವವನ್ನು ಕಾಪಾಡುತ್ತದೆ. ನೆರೆಹೊರೆಯವರ ಸಮಸ್ಯೆ ಬಗೆಹರಿಸುವ ಬಗ್ಗೆ ಪ್ರಯತ್ನವಿರಲಿ. ಗುರು ಹಿರಿಯರ ದರ್ಶನ ಯೋಗ ಇರಲಿದೆ.

ಸಿಂಹ: ವೃತ್ತಿ ಸಂಬಂಧಿತ ಪೈಪೋಟಿಯನ್ನು ಸಮರ್ಥವಾಗಿ ಎದುರಿಸುವಿರಿ. ಆದರೆ ಯಾವ ಕಾರಣಕ್ಕೂ ನಿಮ್ಮ ಸ್ವಾರ್ಥಕ್ಕಾಗಿ ಇನ್ನೊಬ್ಬರ ಜೀವನದಲ್ಲಿ ಆಟವಾಡಬೇಡಿ. ಕೌಟುಂಬಿಕ ಆತಂಕ ಕಡಿಮೆಯಾಗಲಿದೆ.

ಕನ್ಯಾ: ಜಲೋತ್ಪನ್ನ ವಸ್ತುಗಳ ಮಾರಾಟಗಾರರಿಗೆ ಅಥವಾ ನೀರಿಗೆ ಸಂಬಂಧಿಸಿದ ವ್ಯವಹಾರ ನಡೆಸುವವರಿಗೆ ಅಧಿಕ ಆದಾಯ ಇರಲಿದೆ. ಸಮಸ್ಯೆಗೆ ಧೈರ್ಯವೇ ಪರಿಹಾರ ಎಂಬುವುದನ್ನು ಮರೆಯದಿರಿ.

ತುಲಾ: ಅಭಿವೃದ್ಧಿಯ ಅವಕಾಶಗಳು ಸಿಕ್ಕಿದರೂ, ಬಳಸಿಕೊಳ್ಳಲು ಅಸಾಧ್ಯ-ವಾಗುವಂತಹ ಪರಿಸ್ಥಿತಿಗೆ ತಲುಪುವಿರಿ. ಕಾಡುತ್ತಿದ್ದ ಸಮಸ್ಯೆಗೆ ದೇವರೆ ದಾರಿ ತೋರಿದಂತೆ ಅಪರಿಚಿತನೊಬ್ಬನ ಭೇಟಿಯಿಂದ ಉತ್ತರ ಸಿಗುತ್ತದೆ.

ವೃಶ್ಚಿಕ: ಮಕ್ಕಳ ಸಂತೋಷಕ್ಕಾಗಿ ಆಟಿಕೆಗಳಿಂದ ಅಥವಾ ಆಲಂಕಾರಿಕ ವಸ್ತುಗಳ ಖರೀದಿಯಿಂದ ಹಣ ವ್ಯಯ ಆಗಲಿದೆ. ರಕ್ಷಣಾ ಕ್ಷೇತ್ರದಲ್ಲಿರುವವರಿಗೆ ಅಭಿವೃದ್ಧಿ ತೋರಿ ಬರಲಿದೆ. ವಿವಾಹ ವಿಷಯಗಳು ಚಾಲನೆಗೊಳ್ಳಲಿವೆ.

ಧನು: ಹಣಕಾಸು ನಿರ್ವಹಣೆಯ ವಿಚಾರದಲ್ಲಿ ಕುಶಲಮತಿಯಾಗಿರು ನೀವು, ಅವಸರದಲ್ಲಿ ಇಂದು ಸಣ್ಣ-ಪುಟ್ಟ ತಪ್ಪುಗಳನ್ನು ಮಾಡುವ ಲಕ್ಷಣಗಳಿವೆ. ಸೇವಾ ಹಿರಿತನದಿಂದ ಹೆಚ್ಚಿನ ಸ್ಥಾನಮಾನಗಳು ದೊರೆಯುವುದು.

ಮಕರ: ನಾಲ್ಕಾರು ಜನರ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಏಳಿಗೆಗೆ ದಾರಿಯಾಗಲಿದೆ. ವ್ಯಾಪಾರ ವಹಿವಾಟುಗಳಲ್ಲಿ ಮುನ್ನಡೆ ಇರುವುದು. ವ್ಯವಹಾರದಲ್ಲಿ ವಿಚಾರವಂತಿಕೆಯಿಂದ ವ್ಯವಹರಿಸಿ.

ಕುಂಭ: ವೃತ್ತಿಯಲ್ಲಿ ಪರಿಸ್ಥಿತಿಯನ್ನು ಹತೋಟಿಗೆ ತರಲು ನಾಯಕನನ್ನು ಜಾಗೃತಗೊಳಿಸುವಿರಿ. ಪೂಜಾದಿ ಕೆಲಸಗಳಿಂದ ಮನಸ್ಸು ಉಲ್ಲಾಸಗೊಳ್ಳಲಿದೆ. ಅಧಿಕಾರಿಗಳಿಗೆ ನಿಮ್ಮ ಮೇಲಿದ್ದ ಅಸಮಾಧಾನ ದೂರಾಗುವುದು.


ಮೀನ: ಜೀವನದಲ್ಲಿ ನಡೆದ ಕಹಿಯ ಘಟನೆಯ ನೆನಪಿನಿಂದ ದುಃಖ ಉಂಟಾಗುವುದು. ಸರ್ಕಾರಿ ವ್ಯವಹಾರಗಳಲ್ಲಿ ಅನುಕೂಲಕರ ವಾತಾವರಣ ಸಿಗಲಿದೆ. ನಿಗದಿಯಾಗಿರುವ ಕಾಲಮಿತಿಯೊಳಗೆ ಕೆಲಸ ಪೂರ್ಣಗೊಳಿಸಿ.

ಪದಬಂಧ 5555

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೋಟೆಯ ರಕ್ಷಕನಿವನು (4)
3.ಕನ್ನಡಿಗರ ನಾಡು (4)
5.ಬಳ್ಳಿ ಇಲ್ಲಿ ಹಬ್ಬಿದೆ (3)
6.ಕಾಠಿಣ್ಯ ಅಥವಾ ಬಿರುಸು (3)
8.ಕೊಳ್ಳುವಾಗ ಚಾಚಿದ ಕುತ್ತಿಗೆ (3)
9.ಚಾರ ಹೇಳಿದ ಸಂಗತಿ (3)
10.ಜಿನ ವಾಸಿಮಾಡಿರುವ ಕಾಹಿಲೆ! (3)
12.ಅಂಕುರ ಇಲ್ಲಿ ಕಾಣುತ್ತಿದೆ (3)
14.ಹರನಿಂದ ಪ್ರಾರಂಭಿಸಿದ ಸಂಪು (4)
15.ರತ್ನಗಳು ಅಡಗಿರುವ ಸಮುದ್ರ (4)

ಮೇಲಿಂದಕೆಳಕ್ಕೆ
1.ಹಳೆ ಕಾಲದ ಒಂದು ಅಳತೆ (3)
2.ಲವಣ ಹಿಡಿದಿರುವ ರಾಮನ ಮಗ (2)
3.ಕಮರಿ ಹತ್ತಿರವಿರುವ ಆನೆ (2)
4.ಕರುವಿನ ಪಚನಾಂಗವಿದು (3)
7.ಈತ ಕೊಳ್ಳೆ ಹೊಡೆಯುವವನು (5)
8.ಅಂತ್ಯದ ಶ್ವಾಸ! (5)
9.ವಿವಾದವಿಲ್ಲದೆ ನಡೆದ ಮದುವೆ (3)
11.ಗರ ಬಡಿದ ಶಹರು (3)
12.ಮೊಳಕೆಯಲ್ಲಿರುವ ಒಂದು ಅಳತೆಯನ್ನು ಹುಡುಕಿ! (2)
13.ಕೆಸರಲ್ಲಿರುವ ಮೆಟ್ಟು! (2)



5554ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪುರೋಹಿತ 3.ಕರಣಿಕ
5.ಟಗರು 7.ಪದ
8.ಸುಮನೋಹರ 10.ರುದ್ರನಾಟಕ
12.ಸರಿ 13.ಪರಶು
15.ತಿರುಪತಿ 16.ಕಲ್ಕುಟಿಗ

ಮೇಲಿಂದ ಕೆಳಕ್ಕೆ:
1.ಪುಡಿಗಾಸು 2.ತಟ
3.ಕರು 4.ಕಶದ
6.ಗಮಾರ 7.ಪರದಾಟ
9.ಮಧುಕರಿ 10.ರುಧಿರ
11.ಕವಾಡಿಗ 12.ಸವತಿ
13.ಪತಿ 14.ಶುಕ

ಸುಡೊಕು 5940

	6	3		9				8
1			8			5		
		2		6			9	7
		7			9	6		
4	2			3			5	9
6			7		8			
2		5	4		7	9		6
	4						7	
9		6	3		5		4	1


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5939 ಸುಡೊಕು

8	7	3	2	1	9	4	6	5
6	2	9	4	5	8	7	1	3
4	1	5	6	7	3	9	2	8
5	4	2	7	9	6	8	3	1
3	6	7	8	4	1	5	9	2
1	9	8	3	2	5	6	4	7
9	8	1	5	6	2	3	7	4
2	3	4	9	8	7	1	5	6
7	5	6	1	3	4	2	8	9

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,710
ಇಂದಿನ ಅಂತ್ಯ	21,513
▼	197
ದಿನದ ಕನಿಷ್ಠ	21,492

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹575
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹575

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1600)
ಸೋಯಾ (ರಿಫೈನ್ಡ್)	₹885 (880)
ಸೂರ್ಯಕಾಂತಿ (ರಿಫೈನ್ಡ್)	₹910 (910)
ಪಾಮೋಲಿನ್	₹825 (824)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹212-480
ದ್ವಿತಳಿ (ಬಿ.ವಿ)	₹223-572

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹13750
ಎಸಿ	₹7840
ಆರ್‌ಪಿ	₹11000
ಆರ್‌ಸಿ	₹6880

ವಿನಿಮಯ ದರ

$ ಡಾಲರ್	83.14
£ ಪೌಂಡ್	105.63
€ ಯುರೊ	90.95
¥ ಯೆನ್ (100ಕ್ಕೆ)	58

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7000-10000
ತಿಪಟೂರು	₹8000-9500
ತುರುವೇಕೆರೆ	₹9100-9100

ತಮಿಳುನಾಡು: ₹6.64 ಲಕ್ಷ ಕೋಟಿ ಹೂಡಿಕೆಗೆ ಒಪ್ಪಂದ

ಚೆನ್ನೈ (ಪಿಟಿಐ): ತಮಿಳುನಾಡಿನ ಚೆನ್ನೈನಲ್ಲಿ ಸೋಮವಾರ ಮುಕ್ತಾಯವಾದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಒಟ್ಟು ₹6.64 ಲಕ್ಷ ಕೋಟಿ ಬಂಡವಾಳ ಹೂಡಿಕೆಗೆ ಸಂಬಂಧಿಸಿದಂತೆ ವಿವಿಧ ಕಂಪನಿಗಳ ಜೊತೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ನೇತೃತ್ವದ ಸರ್ಕಾರವು ಒಪ್ಪಂದಕ್ಕೆ ಸಹಿ ಹಾಕಿದೆ.

ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ 29 ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ ಎಂದು ಸರ್ಕಾರ ಹೇಳಿದೆ.

ಹೈಡ್ರೋಜನ್ ಸಂಪನ್ಮೂಲ ಕೇಂದ್ರ ಸ್ಥಾಪನೆ ಸೇರಿದಂತೆ ವಿವಿಧ ಉದ್ದೇಶಗಳಿಗೆ ಹುಂಡೈ ಕಂಪನಿಯು ₹6,180 ಕೋಟಿ ಹೂಡಿಕೆ ಮಾಡಲಿದೆ.

ರಾಯಲ್ ಎನ್‌ಫೀಲ್ಡ್‌ನಿಂದ ಹೂಡಿಕೆ: ಮುಂದಿನ ಎಂಟು ವರ್ಷಗಳಲ್ಲಿ ಹೊಸ ಉತ್ಪನ್ನಗಳ ತಯಾರಿಕೆಗೆ ರಾಯಲ್ ಎನ್‌ಫೀಲ್ಡ್ ಕಂಪನಿಯು ₹3 ಸಾವಿರ ಕೋಟಿ ಹೂಡಿಕೆ ಮಾಡಲು ಒಪ್ಪಂದಕ್ಕೆ ಸಹಿ ಹಾಕಿದೆ.

'ಮುಂದಿನ 20 ವರ್ಷಗಳಲ್ಲಿ ತಮಿಳುನಾಡಿನ ಅಭಿವೃದ್ಧಿಗೆ ಈ ಹೂಡಿಕೆಯು ನೆರವಾಗಲಿದೆ' ಎಂದು ಮುಖ್ಯಮಂತ್ರಿ ಸ್ಟಾಲಿನ್ ತಿಳಿಸಿದ್ದಾರೆ.



ಅಮೆರಿಕದ ಫ್ಲಾರಿಡಾದಲ್ಲಿರುವ ಉಡ್ಡಯನ ಕೇಂದ್ರದಿಂದ ನಾಸಾದ ಬಾಹ್ಯಾಕಾಶ ಯೋಜನೆಯ 'ಸರ್ಟ್ –1'ರ ಲೂನಾರ್ ಲ್ಯಾಂಡರ್ ಹೊತ್ತ ರಾಕೆಟ್ ಸೋಮವಾರ ನಭಕ್ಕೆ ಚಿಮ್ಮಿತು. 'ಸ್ಟಾರ್ ಟ್ರೆಕ್' ಟಿ.ವಿ ಸರಣಿಯ ನಿರ್ಮಾತೃ ಜಿ. ರೊಡೆನ್‌ಬೆರ್ರಿ ಮತ್ತು ಇದರಲ್ಲಿ ಉಹುರಾ ಪಾತ್ರಧಾರಿಯಾಗಿದ್ದ ನಿಶೆಲ್ಲೆ ನಿಕೋಲ್ಸ್ ಅವರ ಚಿತಾಭಸ್ಮವನ್ನು ಗಗನನೌಕೆ ಜತೆಗೆ ಕಳುಹಿಸಲಾಯಿತು – ಎಎಫ್‌ಪಿ ಚಿತ್ರ

ಮುಂಬೈ ಧಾರಣೆ

ಶೇಂಗಾ

08-01-2024

ಜಾವಾ 70/80(ಹೊಸ)	12000-12100
ಜಾವಾ 80/90(ಹೊಸ)	11300-11400
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1610)
ಒಂದು ವಾರದ ಡೆಲಿವರಿ	1605 (1605)
ಸೋಯಾ ಕಚ್ಚಾ	845 (845)
ಪಾಮ್ ವಾರದ ಡೆಲಿವರಿ	823 (822)
ಸೂರ್ಯಕಾಂತಿ ಎಣ್ಣೆ ಕಚ್ಚಾ	835 (835)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
62,000 (62,450)
ಬೆಳ್ಳಿ ಕೆ.ಜಿ 71,400 (71,900)

ಆವರಣದಲ್ಲಿ ಶನಿವಾರದ ಧಾರಣೆ

ಹೂಡಿಕೆದಾರರಿಗೆ ₹2.91 ಲಕ್ಷ ಕೋಟಿ ನಷ್ಟ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ ಸೋಮವಾರ ಇಳಿಕೆ ಕಂಡಿದ್ದರಿಂದ ಹೂಡಿಕೆದಾರರ ಸಂಪತ್ತು ₹2.91 ಲಕ್ಷ ಕೋಟಿ ಕರಗಿತು.

ಸೆನ್ಸೆಕ್ಸ್ 670 ಅಂಶ ಇಳಿದು, 71,355ಕ್ಕೆ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 197 ಅಂಶ ಕುಸಿದು, 21,513ಕ್ಕೆ ವಹಿವಾಟು ಕೊನೆಗೊಂಡಿತು.

ಎಸ್‌ಬಿಐ, ಐಟಿಸಿ, ನೆಸ್ಲೆ, ಏಷ್ಯನ್ ಪೇಂಟ್ಸ್, ಟೆಕ್ ಮಹೀಂದ್ರ, ಮಹೀಂದ್ರ ಆ್ಯಂಡ್ ಮಹೀಂದ್ರ, ಹಿಂದೂಸ್ತಾನ್ ಯೂನಿಲಿವರ್ ನಷ್ಟ ಕಂಡಿವೆ.

'ಹೂಡಿಕೆದಾರರ ಚಿತ್ತವು ಏಷ್ಯನ್ ಮತ್ತು ಯುರೋಪಿಯನ್ ಮಾರುಕಟ್ಟೆಯತ್ತ ಹೊರಳಿತು. ಮತ್ತೊಂದೆಡೆ ಅಮೆರಿಕ ಬಾಂಡ್‌ನ ಮೌಲ್ಯವು ಶೇ 4ರಷ್ಟು ವೃದ್ಧಿಸಿತು. ಈ ಅಂಶಗಳೇ ಮುಂಬೈ ಷೇರುಪೇಟೆಯಲ್ಲಿ ಕುಸಿತಕ್ಕೆ ಕಾರಣವಾಗಿವೆ' ಎಂದು ಮೆಹ್ತಾ ಈಕ್ವಿಟೀಸ್ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ (ಸಂಶೋಧನೆ) ಪ್ರಶಾಂತ್ ತಾಪ್ಸೆ ಹೇಳಿದ್ದಾರೆ.

ಕಲಬುರಗಿ: ಕೃಷಿ ಉತ್ಪನ್ನ ಮಾರುಕಟ್ಟೆಗೆ ಒಂದೇ ದಿನ 9,065 ಕ್ವಿಂಟಲ್ ಆವಕ

ತೊಗರಿ ದರ ಕುಸಿತ: ರೈತರು ಕಂಗಾಲು

ಪ್ರಜಾವಾಣಿ ವಾರ್ತೆ

ಕಲಬುರಗಿ: ಬರಗಾಲದ ನಡುವೆಯೂ ಅಳಿದುಳಿದ ತೊಗರಿಯು ಎಪಿಎಂಸಿಗೆ ಹೆಚ್ಚಿನ ಪ್ರಮಾಣದಲ್ಲಿ ಆವಕವಾಗುತ್ತಿದೆ. ಇದರಿಂದ ತೊಗರಿ ದರ ಪ್ರತಿ ಕ್ವಿಂಟಲ್‌ಗೆ ₹9,000ಕ್ಕೆ ಕುಸಿದಿದೆ.

ನಾಲ್ಕು ತಿಂಗಳ ಹಿಂದೆ ಕ್ವಿಂಟಲ್‌ಗೆ ₹12 ಸಾವಿರದಂತೆ ಮಾರಾಟ ಮಾಡಿದ್ದ ರೈತರು ಈಗ ಕಂಗಾಲಾಗಿದ್ದಾರೆ.

'ತೊಗರಿ ಕಣಜ' ಎಂದೇ ಹೆಸರಾಗಿರುವ ಕಲಬುರಗಿ ಜಿಲ್ಲೆಯಲ್ಲಿ ಈ ಬಾರಿ ನಿರೀಕ್ಷಿಸಿದಷ್ಟು ಮಳೆಯಾಗಿಲ್ಲ. ಹೀಗಾಗಿ, ತೊಗರಿ ಹೆಚ್ಚಿನ ಪ್ರಮಾಣದಲ್ಲಿ ಬಿತ್ತನೆಯಾಗಲಿಲ್ಲ. ಆದಾಗ್ಯೂ, ಚಿತ್ತಾಪುರ, ಸೇಡಂ, ಜೇವರ್ಗಿ, ಶಹಾಬಾದ್, ಜೇವರ್ಗಿ, ಕಲಬುರಗಿ ತಾಲ್ಲೂಕಿನ ಹಲವೆಡೆ ಬಿತ್ತಿದ ತೊಗರಿಯು ಇದೀಗ ಮಾರುಕಟ್ಟೆಗೆ ಬರುತ್ತಿದೆ.

ಸೋಮವಾರ ಒಂದೇ ದಿನ 9,065 ಕ್ವಿಂಟಲ್ ಆವಕವಾಗಿದೆ. ಹೀಗಾಗಿ, ವಾರದಿಂದ ತೊಗರಿ ದರ ಕುಸಿತ ಕಾಣುತ್ತಿದೆ. ಆದಾಗ್ಯೂ, ಸರ್ಕಾರ ₹7 ಸಾವಿರ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಿದೆ. ಅದಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟವಾಗುತ್ತಿರುವುದು ರೈತರಲ್ಲಿ ಕೊಂಚ ನೆಮ್ಮದಿ ಮೂಡಿಸಿದೆ.

'ನಾಲ್ಕು ತಿಂಗಳಿನ ಹಿಂದೆ ಇದ್ದ ದರ ಸಿಕ್ಕಿದ್ದರೆ ಖರ್ಚನ್ನು ಕಳೆದು ಒಂದಷ್ಟು ಲಾಭ ಸಿಗುತ್ತಿತ್ತು. ಇದೀಗ ಮಾರಾಟ ಮಾಡಬೇಕೆಂದರೂ ಹೆಚ್ಚಿನ ತೊಗರಿ ನಮ್ಮ ಬಳಿ ಇಲ್ಲ. ಹೀಗಾಗಿ, ರೈತರ ಹಿತದೃಷ್ಟಿಯಿಂದ ಕನಿಷ್ಠ ಬೆಂಬಲ ಬೆಲೆಯನ್ನು ಸರ್ಕಾರ ₹10 ಸಾವಿರಕ್ಕೆ ಹೆಚ್ಚಿಸಬೇಕು' ಎನ್ನುತ್ತಾರೆ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷ ಶರಣಬಸಪ್ಪ ಮಮಶೆಟ್ಟಿ.



ಕಲಬುರಗಿಯ ಕೃಷಿ ಉತ್ಪನ್ನ ಮಾರುಕಟ್ಟೆ

ತೊಗರಿ ದರ ಇಳಿಕೆಯಾಗುತ್ತಿದ್ದಂತೆ ಇದರ ಲಾಭ ಗ್ರಾಹಕರಿಗೂ ಲಭಿಸುತ್ತಿದ್ದು, ವಾರದ ಹಿಂದೆ ಪ್ರತಿ ಕೆ.ಜಿ.ಗೆ ₹150 ಇದ್ದ ತೊಗರಿಬೇಳೆ ದರ ಇದೀಗ ₹128ಕ್ಕೆ ಕುಸಿದಿದೆ.

ತೊಗರಿ ಆವಕ ಕುರಿತು ಮಾಹಿತಿ ನೀಡಿದ ಕಲಬುರಗಿ ಎಪಿಎಂಸಿ ಕಾರ್ಯದರ್ಶಿ ಅಲ್ಲಾಬಕ್ಷ್, 'ಒಂದು ವಾರದಿಂದ ಜಿಲ್ಲೆಯ ರೈತರು ತೊಗರಿ ರಾಶಿ ಮಾಡುತ್ತಿದ್ದು, ಸೋಮವಾರ ಅತಿಹೆಚ್ಚು ಆವಕವಾಗಿದೆ. ಹೊರಗಡೆಯೂ ದಾಲ್ ಮಿಲ್ ವರ್ತಕರು ರೈತರಿಂದಲೇ ನೇರವಾಗಿ ಖರೀದಿ ಮಾಡಿ ಮಿಲ್‌ಗಳಿಗೆ ಸಾಗಿಸುತ್ತಿದ್ದಾರೆ. ಅದರ ಪ್ರಮಾಣ ಎಷ್ಟು ಎಂಬುದರ ಮಾಹಿತಿ ಲಭ್ಯವಾಗಿಲ್ಲ' ಎಂದರು.

ದ್ವಿದಳ ಅಭಿವೃದ್ಧಿ ಮಂಡಳಿಯು ತೊಗರಿಯನ್ನು ಸಂಸ್ಕರಣೆಗೊಳಿಸಿ 'ಭೀಮಾ ಪಲ್ಸ್' ಹೆಸರಿನಲ್ಲಿ ಪ್ಯಾಕೆಟ್ ಮಾಡಿ ಮಾರಾಟ ಮಾಡಲು ತಯಾರಿ ನಡೆಸಿತ್ತಾದರೂ ಅದು ಇನ್ನೂ ಕೈಗೂಡಿಲ್ಲ.

ಹುಣಸೆ ಹಣ್ಣಿಗೆ ಉತ್ತಮ ಬೆಲೆ

ಪ್ರಜಾವಾಣಿ ವಾರ್ತೆ

ತುಮಕೂರು: ನಗರದ ಎಪಿಎಂಸಿ ಮಾರುಕಟ್ಟೆಯಲ್ಲಿ ಸೋಮವಾರದಿಂದ ಹುಣಸೆ ಹಣ್ಣಿನ ವಹಿವಾಟು ಆರಂಭವಾಗಿದೆ. ಆರಂಭದಲ್ಲೇ ಉತ್ತಮ ಬೆಲೆ ಸಿಕ್ಕಿದ್ದು, ರೈತರ ಮುಖದಲ್ಲಿ ಮಂದಹಾಸ ಮೂಡಿಸಿದೆ.

ಪ್ರಸಕ್ತ ಹಂಗಾಮಿನ ಮೊದಲ ದಿನ ಎಪಿಎಂಸಿಗೆ ಸುಮಾರು ಮೂರು ಟನ್ ಹುಣಸೆ ಹಣ್ಣು ಬಂದಿತ್ತು. ಒಂದು ಕ್ವಿಂಟಲ್ ₹12 ಸಾವಿರದಿಂದ ಆರಂಭವಾಗಿ ₹20 ಸಾವಿರದವರೆಗೂ ಮಾರಾಟವಾಗಿದೆ.

ಒಂದು ಗೂಡೆ (ದೊಡ್ಡ ಬುಟ್ಟಿ) ₹23 ಸಾವಿರಕ್ಕೆ ಮಾರಾಟವಾಗಿರುವುದು ವಿಶೇಷ. ಗೋಟು ಹಣ್ಣು ಕ್ವಿಂಟಲ್ ₹2 ಸಾವಿರ, ಬೀಜ ಮಿಶ್ರಿತ ಹಣ್ಣಿಗೆ ₹4,500ರಿಂದ ₹7 ಸಾವಿರ ಬೆಲೆ ಸಿಕ್ಕಿದೆ.ಮಾರುಕಟ್ಟೆಯ ಮೊದಲ ದಿನವೇ ಹುಣಸೆ ಹಣ್ಣು ಉತ್ತಮ ಬೆಲೆ ಕಂಡುಕೊಂಡಿದೆ. ಮುಂದಿನ ಕೆಲವು ವಾರಗಳ ಕಾಲ ಇದೇ ಬೆಲೆ ಇರುತ್ತದೆ. ಮಾಲು ಬರುವುದು ಹೆಚ್ಚಾದರೆ ಬೆಲೆ ಕುಸಿಯಬಹುದು. ಹೆಚ್ಚಿನ ಸಂಖ್ಯೆಯಲ್ಲಿ ಹೊರಗಡೆಯಿಂದ ಖರೀದಿದಾರರು ಬಂದರೆ ಇದೇ ಬೆಲೆ ಮುಂದುವರಿಯಬಹುದು. ಈಗಲೇ ಬೆಲೆಯ ಬಗ್ಗೆ ಸ್ಪಷ್ಟವಾಗಿ ನಿರ್ಧರಿಸುವುದು ಕಷ್ಟ. ಕಳೆದ ವರ್ಷಕ್ಕಿಂತ ಈ ಬಾರಿ ಉತ್ತಮ ಬೆಲೆ ಸಿಗಬಹುದು ಎಂದು ಮಾರುಕಟ್ಟೆ ಮೂಲಗಳು ಹೇಳಿವೆ.

'ಇನ್ನೂ ವಾತಾವರಣ ತಂಪಾಗಿದೆ. ಒಂದೆರಡು ವಾರ ಮಾರುಕಟ್ಟೆಗೆ ಹಣ್ಣು ಬರುವ ಪ್ರಮಾಣ ಕಡಿಮೆ ಇರುತ್ತದೆ. ಬಿಸಿಲು ಅಧಿಕವಾದಂತೆ ಹುಣಸೆ ಕಾಯಿ ಬಿಡಿಸಿ, ಹಣ್ಣು ಮಾಡಿಕೊಂಡು ಮಾರುಕಟ್ಟೆಗೆ ತರುವುದು ಹೆಚ್ಚಾಗುತ್ತದೆ.ಸದ್ಯಕ್ಕೆ ಸೋಮವಾರ, ಗುರುವಾರ ಮಾರುಕಟ್ಟೆಯಲ್ಲಿ ಹರಾಜು ನಡೆಯಲಿದೆ. ಹಣ್ಣು ಬರು ವುದು ಹೆಚ್ಚಾದರೆ ಹಂಗಾಮು ಮುಗಿಯುವವರೆಗೂ ಪ್ರತಿದಿನವೂ ವಹಿವಾಟು ನಡೆಯಲಿದೆ' ಎಂದು ವರ್ತಕ ಎಚ್.ಪಿ.ದೇವೇಂದ್ರಪ್ಪ ತಿಳಿಸಿದರು.

ಹಳ್ಳಿಗೂ ಜನೌಷಧ ಕೇಂದ್ರ ವಿಸ್ತರಣೆ

ನವದೆಹಲಿ (ಪಿಟಿಐ): 'ಗ್ರಾಮೀಣ ಪ್ರದೇಶದ ಬಡವರು ಮತ್ತು ರೈತರಿಗೆ ಕೈಗೆಟುಕುವ ದರದಲ್ಲಿ ಔಷಧ ನೀಡಲು ದೇಶದ 241 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ (ಪ್ಯಾಕ್ಸ್) ಜನೌಷಧ ಕೇಂದ್ರ ಆರಂಭಿಸಲಾಗಿದೆ' ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ತಿಳಿಸಿದರು.

ಪ್ಯಾಕ್ಸ್‌ಗಳಲ್ಲಿ ಜನೌಷಧ ಕೇಂದ್ರ ಆರಂಭಿಸುವ ಸಂಬಂಧ ಸೋಮವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸಮಾವೇಶದಲ್ಲಿ ಮಾತನಾಡಿದ ಅವರು, 'ನಗರ ಪ್ರದೇಶದಲ್ಲಿ ಜನೌಷಧ ಕೇಂದ್ರಗಳು ಹೆಚ್ಚಿದ್ದು, ಬಡವರಿಗೆ ಹೆಚ್ಚಿನ ಪ್ರಯೋಜನ ಲಭಿಸುತ್ತಿದೆ. ಸದ್ಯ ಗ್ರಾಮೀಣರಿಗೂ ಈ ಸೇವೆ ವಿಸ್ತರಿಸ ಲಾಗಿದೆ' ಎಂದು ತಿಳಿಸಿದರು.

'ಜನೌಷಧ ಕೇಂದ್ರ ಸ್ಥಾಪನೆಗಾಗಿ ಕಳೆದ ಆರು ತಿಂಗಳಲ್ಲಿ ದೇಶದಾದ್ಯಂತ 4,470 ಸಂಘಗಳಿಂದ ಅರ್ಜಿ ಸ್ವೀಕರಿಸಲಾಗಿತ್ತು. ಈ ಪೈಕಿ 2,373 ಸಂಘಗಳಿಗೆ ಅನುಮೋದನೆ ನೀಡಲಾಗಿದೆ' ಎಂದು ವಿವರಿಸಿದರು.

ಗ್ರಾಮೀಣ ಪ್ರದೇಶದ ಮಳಿಗೆಗಳಲ್ಲಿ ಜನರು ಈಗ ಕಡಿಮೆ ದರದಲ್ಲಿ ಜೆನೆರಿಕ್ ಔಷಧ ಖರೀದಿಸಬಹುದು. ಮುಕ್ತ ಮಾರುಕಟ್ಟೆಯಲ್ಲಿ ಕ್ಯಾನ್ಸರ್ ಔಷಧದ ಬೆಲೆ ₹2,250 ಇದೆ. ಈ ಔಷಧವು ಜೆನೆರಿಕ್ ಕೇಂದ್ರಗಳಲ್ಲಿ ₹250ಕ್ಕೆ ಸಿಗಲಿದೆ. ಗ್ರಾಮೀಣ ಹೆಣ್ಣುಮಕ್ಕಳು ₹1ಕ್ಕೆ ಸ್ಯಾನಿಟರಿ ನ್ಯಾಪ್‌ಕಿನ್ ಖರೀದಿಸಬಹುದಾಗಿದೆ ಎಂದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		**ಸಾಗರ**		ಹೊಸಚಾಲಿ	31849-36000
ಬಂಟ್ವಾಳ		ಬಿಳಿಗೋಟು	20289-32119	ರಾಶಿ	47699-48699
ಕೋಕ	15000-27500	ಚಾಲಿ	31899-38199	**ಶಿರಸಿ**	
ಹೊಸತು	27500-37000	ಕೋಕ	23989-32989	ಬೆಟ್ಟೆ	38099-43699
ಹಳತು	42000-44000	ಕೆಂಪುಗೋಟು	27169-37499	ಬಿಳಿಗೋಟು	26011-34899
ಕಾರ್ಕಳ		ರಾಶಿ	32989-49369	ಚಾಲಿ	37099-40599
ಹೊಸತು	25000-37000	ಸಿಪ್ಪೆಗೋಟು	12129-21000	ಕೆಂಪುಗೋಟು	31211-33626
ಹಳತು	30000-44000	**ಶಿವಮೊಗ್ಗ**		ರಾಶಿ	43999-47818
ಕುಮಟ		ಬೆಟ್ಟೆ	43599-54899	**ಯಲ್ಲಾಪುರ**	
ಚಿಪ್ಪು	26899-33099	ಗೊರಬಲು	14009-40577	ಅಪಿ	56779-56779
ಕೋಕ	20169-32019	ರಾಶಿ	36179-49358	ಬಿಳಿಗೋಟು	24299-33599
ಫ್ಯಾಕ್ಟರಿ	11099-22699	ಸರಕು	53399-80510	ಚಾಲಿ	33812-39729
ಹಳೆಚಾಲಿ	37899-40299	**ಸಿದ್ದಾಪುರ**		ಕೋಕ	26812-30169
ಹೊಸಚಾಲಿ	34209-36299	ಬಿಳಿಗೋಟು	31844-33369	ಕೆಂಪುಗೋಟು	27210-37009
ಪುತ್ತೂರು		ಚಾಲಿ	37566-38599	ರಾಶಿ	46009-54290
ಹೊಸತು	27000-36500	ಕೋಕ	27669-30199	ತಟ್ಟಿಬೆಟ್ಟೆ	38509-45400

ಸಚಿವ ಎಂ.ಬಿ.ಪಾಟೀಲಗೆ ಸಜ್ಜನ್ ಜಿಂದಾಲ್ ಸಲಹೆ

'ವಿಮಾನ ನಿಲ್ದಾಣ ಬಳಿ ಕೈಗಾರಿಕಾ ಪಾರ್ಕ್ ನಿರ್ಮಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಮಾನ ನಿಲ್ದಾಣಗಳಿಂದ ಸುಮಾರು ಎರಡು ಗಂಟೆ ರಸ್ತೆ ಪ್ರಯಾಣದ ವ್ಯಾಪ್ತಿಯಲ್ಲಿ ಕೈಗಾರಿಕಾ ಪಾರ್ಕ್‌ಗಳನ್ನು ಸ್ಥಾಪಿಸಿದರೆ ಹೆಚ್ಚಿನ ಹೂಡಿಕೆ ಸೆಳೆಯಲು ಅನುಕೂಲ ಆಗಲಿದೆ'ಎಂದು ಇನ್ವೆಸ್ಟ್ ಕರ್ನಾಟಕ ಫೋರಂ (ಐಕೆಎಫ್) ಸಹ ಅಧ್ಯಕ್ಷರೂ ಆಗಿರುವ ಉದ್ಯಮಿ ಸಜ್ಜನ್ ಜಿಂದಾಲ್ ಸಲಹೆ ನೀಡಿದರು.

ಐಕೆಎಫ್ ಪುನರ್ ರಚನೆಯಾದ ಬಳಿಕ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ನಡೆದ ಮೊದಲ ಸಭೆಯಲ್ಲಿ ಆನ್‌ಲೈನ್ ಮೂಲಕ ಭಾಗವಹಿಸಿದ ಅವರು, 'ವಿಮಾನ ನಿಲ್ದಾಣಗಳಿಗೆ ಹತ್ತಿರವಿರುವ ಪ್ರದೇಶಗಳನ್ನು ಗುರುತಿಸಿ ಕೈಗಾರಿಕಾ ಪಾರ್ಕ್‌ಗಳನ್ನು ಸ್ಥಾಪಿಸುವುದು ಸೂಕ್ತ' ಎಂದು ಅಭಿಪ್ರಾಯಪಟ್ಟರು.

'ಕರ್ನಾಟಕದಲ್ಲಿ ನೆಲೆಸಿರುವ ಒಬ್ಬ ಉದ್ಯಮಿಯಾಗಿ ಈ ರಾಜ್ಯ ಹೂಡಿಕೆ ಮಾಡಲು ಎಷ್ಟು ಸೂಕ್ತ ಎಂಬುದು ನನಗೆ ಚೆನ್ನಾಗಿ ಗೊತ್ತು. ಇಲ್ಲಿನ, ಕಾರ್ಯ ಪರಿಸರವನ್ನು ಸಮರ್ಪಕವಾಗಿ ಬಳಸಿಕೊಂಡರೆ ಯಶಸ್ವಿ ಉದ್ದಿಮೆಗಳನ್ನು ಕಟ್ಟಬಹುದು' ಎಂದೂ ಹೇಳಿದರು.

ಸಜ್ಜನ್ ಅವರ ಸಲಹೆಗೆ ಪ್ರತಿಕ್ರಿಯಿಸಿದ ಸಚಿವರು, 'ಸುಮಾರು 10 ಸಾವಿರ ಎಕರೆ ಪ್ರದೇಶದಲ್ಲಿ ಕೈಗಾರಿಕಾ ಪಾರ್ಕ್‌ಗಳನ್ನು ಸ್ಥಾಪಿಸುವ ಉದ್ದೇಶವಿದೆ. ಉದ್ದಿಮೆ ಸ್ಥಾಪನೆಗೆ ಅನುಕೂಲವಾಗುವಂತೆ ಪ್ಲಗ್- ಇನ್ ವ್ಯವಸ್ಥೆಯನ್ನು ಈ ಪಾರ್ಕ್‌ಗಳಲ್ಲಿ ಕಲ್ಪಿಸಲಾಗುವುದು' ಎಂದರು.

'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸುಮಾರು ₹55 ಸಾವಿರ ಕೋಟಿಯ ಹೂಡಿಕೆ ಖಾತರಿಯಾಗಿದೆ. ಉಳಿದಂತೆ, ₹40 ಸಾವಿರ ಕೋಟಿಯಿಂದ ₹1 ಲಕ್ಷ ಕೋಟಿವರೆಗಿನ ಹಲವು ಪ್ರಸ್ತಾವಗಳು ವಿವಿಧ ಹಂತದ ಪ್ರಕ್ರಿಯೆಯಲ್ಲಿವೆ' ಎಂದು ಸಚಿವರು ಹೇಳಿದರು.

ನೆಟ್‌ವರ್ಕ್ಸ್ ಸಹ ಸ್ಥಾಪಕ ಅಂಕಿತ್ ಫತೇಪುರಿಯ ಆನ್‌ಲೈನ್ ಮೂಲಕ ಸಭೆಯಲ್ಲಿ ಭಾಗವಹಿಸಿದ್ದರು.



ಇನ್ವೆಸ್ಟ್ ಕರ್ನಾಟಕ ಫೋರಂ (ಐಕೆಎಫ್) ಸಭೆಯಲ್ಲಿ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಐಕೆಎಫ್ ನಿರ್ದೇಶಕರಾದ ಕಿರ್ಲೋಸ್ಕರ್ ಸಿಸ್ಟಂ ಅಧ್ಯಕ್ಷೆ ಗೀತಾಂಜಲಿ ಕಿರ್ಲೋಸ್ಕರ್, ಕೆನ್ನಮೆಟಲ್ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ವಿಜಯ್ ಕೃಷ್ಣನ್ ವೆಂಕಟೇಶನ್, ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಮುಖ್ಯ ನಿರ್ವಹಣಾಧಿಕಾರಿ ಸಿ.ಟಿ. ಮುದ್ದುಕುಮಾರ ಭಾಗವಹಿಸಿದ್ದರು.

ಪೈಲಟ್‌ಗಳ ವಿಶ್ರಾಂತಿ ಅವಧಿ ಹೆಚ್ಚಳ

ನವದೆಹಲಿ (ಪಿಟಿಐ): ವಿಮಾನ ಅವಘಡ ತಡೆಯುವುದಕ್ಕೆ ಸಂಬಂಧಿಸಿದಂತೆ ಪೈಲಟ್‌ಗಳ ವಿಶ್ರಾಂತಿ ಅವಧಿಯನ್ನು ಹೆಚ್ಚಿಸುವುದು ಸೇರಿದಂತೆ ಹೊಸ ನಿಯಮಾವಳಿಗಳ ಅನುಷ್ಠಾನಕ್ಕೆ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯವು (ಡಿಜಿಸಿಎ) ನಿರ್ಧರಿಸಿದೆ.

ಪೈಲಟ್‌ಗಳಿಗೆ ಈಗಿರುವ ವಾರದ ವಿಶ್ರಾಂತಿ ಅವಧಿಯನ್ನು 36 ಗಂಟೆಯಿಂದ 48 ಗಂಟೆವರೆಗೆ ಹೆಚ್ಚಿಸಲಾಗುವುದು ಎಂದು ಹೇಳಿದೆ.

ಪೈಲಟ್‌ಗಳಿಗೆ ಆಯಾಸ ಉಂಟು ಮಾಡುವ ಗರಿಷ್ಠ ಹಾರಾಟದ ಸಮಯ, ರಾತ್ರಿಪಾಳಿಯ ಕರ್ತವ್ಯ, ವಾರದ ವಿಶ್ರಾಂತಿ ಅವಧಿ ಸೇರಿದಂತೆ ಹಲವು ಅಂಶಗಳ ಬಗ್ಗೆ ಅಧ್ಯಯನ ನಡೆಸಿ ಈ ನಿಯಮಾವಳಿ ರೂಪಿಸಲಾಗಿದೆ ಎಂದು ಹೇಳಿದೆ.

ರಾತ್ರಿ ವೇಳೆ ಗರಿಷ್ಠ ಹಾರಾಟದ ಸಮಯವನ್ನು ಎಂಟು ಗಂಟೆಗೆ ಹಾಗೂ ಗರಿಷ್ಠ ಮಟ್ಟದ ಕರ್ತವ್ಯದ ಅವಧಿಯನ್ನು 10 ಗಂಟೆಗೆ ನಿಗದಿಪಡಿಸಲಾಗಿದೆ. ಅಂತರರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿ ಈ ನಿಯಮಾವಳಿ ರೂಪಿಸಲಾಗಿದೆ ಎಂದು ತಿಳಿಸಿದೆ.

ಭಾರತೀಯರಿಂದ ಹೊಸ ಬುಕಿಂಗ್ ಸ್ಥಗಿತ

ನವದೆಹಲಿ (ಪಿಟಿಐ): ಎರಡು ದೇಶಗಳ ನಡುವೆ ಉದ್ಭವಿಸಿರುವ ಬಿಕ್ಕಟ್ಟಿನಿಂದಾಗಿ ಭಾರತೀಯ ಪ್ರವಾಸಿಗರಿಂದ ಮಾಲ್ದೀವ್ಸ್‌ಗೆ ಹೊಸ ಬುಕಿಂಗ್ ಸ್ಥಗಿತಗೊಂಡಿದೆ ಎಂದು ಭಾರತೀಯ ಪ್ರವಾಸ ನಿರ್ವಾಹಕರ ಸಂಘ (ಐಎಟಿಒ) ತಿಳಿಸಿದೆ.

'ಮಾಲ್ದೀವ್ಸ್ ಪ್ರವಾಸಕ್ಕೆ ಈಗಾಗಲೇ ಬುಕಿಂಗ್ ಮಾಡಿರುವ ಪ್ರವಾಸಿಗರು ರದ್ದುಪಡಿಸಿಲ್ಲ. ಆದರೆ, ಮುಂದಿನ 15ರಿಂದ 20 ದಿನದೊಳಗೆ ಈ ಬಿಕ್ಕಟ್ಟು ಪ್ರವಾಸದ ಮೇಲೆ ಪರಿಣಾಮ ಬೀರಬಹುದು' ಎಂದು ಐಎಟಿಒ ಅಧ್ಯಕ್ಷ ರಾಜೀವ್ ಮೆಹ್ರಾ ಹೇಳಿದ್ದಾರೆ.

'ಭಾರತೀಯರ ಮೇಲೆ ಆ ದೇಶದ ಪ್ರವಾಸೋದ್ಯಮ ನಿಂತಿದೆ. ಪ್ರವಾಸ ಬಹಿಷ್ಕಾರಕ್ಕೆ ಭಾರತೀಯರು ಕರೆ ನೀಡಿದ್ದಾರೆ. ಇದರಿಂದ ಆ ರಾಷ್ಟ್ರವು ಸಂಕಷ್ಟಕ್ಕೆ ಸಿಲುಕಿದೆ' ಎಂದು ಟ್ರಾವೆಲ್ ಏಜೆಂಟ್ಸ್ ಅಸೋಸಿಯೆಷನ್ ಆಫ್ ಇಂಡಿಯಾ ಅಧ್ಯಕ್ಷೆ ಜ್ಯೋತಿ ಹೇಳಿದ್ದಾರೆ.

ಮಾಲ್ದೀವ್ಸ್‌ಗೆ ಕಾಯ್ದಿರಿಸಿದ ವಿಮಾನ ಟಿಕೆಟ್ ರದ್ದು

ನವದೆಹಲಿ (ಪಿಟಿಐ): ಭಾರತ ಮತ್ತು ಮಾಲ್ದೀವ್ಸ್ ನಡುವೆ ತಲೆದೋರಿರುವ ರಾಜತಾಂತ್ರಿಕ ಬಿಕ್ಕಟ್ಟಿನ ಬೆನ್ನಲ್ಲೇ ಟ್ರಾವೆಲ್ ಏಜೆನ್ಸಿ ಈಸ್‌ಮೈಟ್ರಿಪ್ ಸಂಸ್ಥೆಯು ಮಾಲ್ದೀವ್ಸ್ ಪ್ರವಾಸಕ್ಕೆ ನಾಗರಿಕರು ಕಾಯ್ದಿರಿಸಿದ್ದ ಎಲ್ಲಾ ವಿಮಾನಗಳ ಟಿಕೆಟ್‌ಗಳನ್ನು ರದ್ದುಪಡಿಸಿದೆ.

ಈಸ್‌ಮೈಟ್ರಿಪ್‌ನ ಸಿಇಒ ನಿಶಾಂತ್ ಪಿಟ್ಟಿ ಈ ಕುರಿತು 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದ್ದು, 'ಸಂಸ್ಥೆಯ ಲಾಭಕ್ಕಿಂತ ರಾಷ್ಟ್ರದ ಹಿತಾಸಕ್ತಿ ಮುಖ್ಯ' ಎಂದು ಪ್ರತಿಪಾದಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಭಾರತದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಮಾಲ್ದೀವ್ಸ್ ಸಚಿವರ ನಡೆಯು ಖಂಡನೀಯ. ದೇಶದ ಹಿತಕ್ಕಾಗಿ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

'ಮಾಲ್ದೀವ್ಸ್‌ಗಿಂತಲೂ ಭಾರತದ ಲಕ್ಷದ್ವೀಪದ ಕಡಲ ತೀರಗಳು ನಯನ ಮನೋಹರವಾಗಿವೆ. ಮೋದಿ ಅವರು ಇತ್ತೀಚೆಗೆ ಇಲ್ಲಿಗೆ ಭೇಟಿ ನೀಡಿದ್ದರು' ಎಂದು ಹೇಳಿದ್ದಾರೆ.

'ಅಯೋಧ್ಯೆ ಮತ್ತು ಲಕ್ಷದ್ವೀಪದ ಸೊಬಗು ಪ್ರವಾಸಿಗರಿಗೆ ಮೋಡಿ ಮಾಡುತ್ತದೆ. ಮಾಲ್ದೀವ್ಸ್‌ನ ಪ್ರವಾಸದ ಬುಕಿಂಗ್ ಸ್ಥಗಿತಗೊಳಿಸಿ. ದೇಶದಲ್ಲಿರುವ ಈ ಎರಡು ಅದ್ಭುತ ತಾಣಗಳಿಗೆ ತೆರಳಿ ಅಲ್ಲಿನ ಸೌಂದರ್ಯವನ್ನು ಕಣ್ತುಂಬಿಕೊಳ್ಳಿ. ಈ ತಾಣಗಳ ಪ್ರವಾಸಕ್ಕೆ ವಿಶೇಷ ಪ್ಯಾಕೇಜ್ ನೀಡಲಾಗುವುದು' ಎಂದಿದ್ದಾರೆ.

ವಿಪಕ್ಷಗಳ ಬಹಿಷ್ಕಾರದ ಮಧ್ಯೆಯೂ ಅವಾಮಿ ಲೀಗ್ ಪಕ್ಷಕ್ಕೆ ಪ್ರಚಂಡ ಬಹುಮತ

ಹಸೀನಾ ನಾಲ್ಕನೇ ಅವಧಿಗೂ ಪ್ರಧಾನಿ

ಢಾಕಾ (ಪಿಟಿಐ): ಪ್ರಮುಖ ವಿರೋಧ ಪಕ್ಷವಾದ ಬಿಎನ್‌ಪಿ ಮತ್ತು ಅದರ ಮಿತ್ರ ಪಕ್ಷಗಳ ಚುನಾವಣಾ ಬಹಿಷ್ಕಾರದ ನಡುವೆಯೂ ಬಾಂಗ್ಲಾದೇಶದಲ್ಲಿ ಭಾನುವಾರ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಅವಾಮಿ ಲೀಗ್ ಪಕ್ಷವು ಅಭೂತಪೂರ್ವ ಬಹುಮತ ಗಳಿಸಿದೆ. ಇದರೊಂದಿಗೆ ಪ್ರಧಾನಿ ಶೇಖ್ ಹಸೀನಾ ಅವರು ಸತತ ನಾಲ್ಕನೇ ಬಾರಿಗೆ ಪ್ರಧಾನಿ ಪಟ್ಟ ಅಲಂಕರಿಸಲಿದ್ದಾರೆ.



ಶೇಖ್ ಹಸೀನಾ

ಸಂಸತ್‌ನ ಒಟ್ಟು 300 ಸ್ಥಾನಗಳ ಪೈಕಿ 299 ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ಈ ಪೈಕಿ ಹಸೀನಾ ನೇತೃತ್ವದ ಪಕ್ಷವು 223 ಕ್ಷೇತ್ರಗಳಲ್ಲಿ ಗೆಲುವಿನ ನಗೆ ಬೀರಿದೆ. ಬಾಂಗ್ಲಾದೇಶ್ ನ್ಯಾಷನಲಿಸ್ಟ್ ಪಕ್ಷವು (ಬಿಎನ್‌ಪಿ) ಕೇವಲ 11 ಸ್ಥಾನಗಳಲ್ಲಿ ಗೆಲ್ಲುವ ಮೂಲಕ ತೀವ್ರ ಹಿನ್ನಡೆ ಕಂಡಿದೆ. ಬಾಂಗ್ಲಾದೇಶ ಕಲ್ಯಾಣ್ ಪಕ್ಷ, ಜಾತಿಯಾ ಸಮಾಜತಾಂತ್ರಿಕ್ ದಳ ಮತ್ತು ದಿ ವರ್ಕರ್ಸ್ ಪಕ್ಷಗಳು ತಲಾ ಒಂದೊಂದು ಕ್ಷೇತ್ರದಲ್ಲಿ ಗೆದ್ದಿದ್ದರೆ, ಪಕ್ಷೇತರ ಅಭ್ಯರ್ಥಿಗಳು 62 ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿದ್ದಾರೆ.

ಗೋಪಾಲ್‌ಗಂಜ್ -2 ಕ್ಷೇತ್ರದಿಂದ ಸ್ಪರ್ಧಿಸಿದ್ದ ಹಸೀನಾ ಅವರು ಪ್ರಚಂಡ ಗೆಲುವು ಸಾಧಿಸಿದ್ದಾರೆ. ಈ ಮೂಲಕ ಸತತ ಎಂಟನೇ ಬಾರಿಗೆ ಸಂಸದೆಯಾಗಿ ಆಯ್ಕೆಯಾಗಿದ್ದಾರೆ.

ಮಾಜಿ ಪ್ರಧಾನಿ ಖಾಲಿದಾ ಜಿಯಾ ನೇತೃತ್ವದ ಬಿಎನ್‌ಪಿಯು ಚುನಾವಣೆಯನ್ನು 'ನಕಲಿ' ಎಂದು ಬಣ್ಣಿಸಿದೆ ಮತ್ತು ಮಂಗಳವಾರದಿಂದಲೇ ಶಾಂತಿಯುತ ಕಾರ್ಯಕ್ರಮಗಳ ಮೂಲಕ ಸರ್ಕಾರದ ವಿರೋಧಿ ಚಳವಳಿಯನ್ನು ಮುಂದುವರಿಸುವುದಾಗಿ ಹೇಳಿದೆ.

ಈ ಬಾರಿ ಬಿಎನ್‌ಪಿ ಮತ್ತು ಇತರ 15 ಪಕ್ಷಗಳು ಚುನಾವಣೆಯನ್ನು ಬಹಿಷ್ಕರಿಸಿದ್ದವು. ಚುನಾವಣೆಯಲ್ಲಿ ಶೇ 41.8ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

> **ಭಾರತವು ಬಾಂಗ್ಲಾದೇಶದ ಮಿತ್ರ ದೇಶ. ನನಗೆ, ನನ್ನ ಸಹೋದರಿಗೆ ಮತ್ತು ಕುಟುಂಬಸ್ಥರಿಗೆ ಆಶ್ರಯ ನೀಡಿತ್ತು. ಪ್ರತಿಯೊಂದು ದೇಶದೊಂದಿಗೂ ಉತ್ತಮ ಬಾಂಧವ್ಯ ಹೊಂದಿದ್ದೇವೆ. ಅದೇ ನಮ್ಮ ಧ್ಯೇಯ**
> **ಶೇಖ್ ಹಸೀನಾ,** ಬಾಂಗ್ಲಾದೇಶದ ಪ್ರಧಾನಿ

> **ಚುನಾವಣೆಯನ್ನು ಯಶಸ್ವಿಗೊಳಿಸಿದ ಬಾಂಗ್ಲಾದೇಶದ ಪ್ರಜೆಗಳಿಗೆ ಅಭಿನಂದನೆಗಳು. ಬಾಂಗ್ಲಾದೊಂದಿಗಿನ ಪಾಲುದಾರಿಕೆಯನ್ನು ಬಲಗೊಳಿಸಲು ನಾವು ಬದ್ಧ**
> **ನರೇಂದ್ರ ಮೋದಿ,** ಭಾರತದ ಪ್ರಧಾನಿ

ಬಿಜೆಪಿಯ ದುರಹಂಕಾರಕ್ಕೆ ತಕ್ಕ ಪಾಠ– ರಾಹುಲ್ • ಬಿಜೆಪಿ ವಿರುದ್ಧ 'ಇಂಡಿಯಾ' ಮೈತ್ರಿಕೂಟದ ವಾಗ್ದಾಳಿ

'ನಂಬಿಕೆ ಗಟ್ಟಿಗೊಳಿಸಿದ ಕೋರ್ಟ್ ತೀರ್ಪು'

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಲ್ಕಿಸ್ ಬಾನು ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಅಪರಾಧಿಗಳಿಗೆ ಕ್ಷಮೆ ನೀಡಿ ಬಿಡುಗಡೆಗೊಳಿಸಿದ್ದನ್ನು ರದ್ದು ಮಾಡಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದ ಬಳಿಕ 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಆಡಳಿತಾರೂಢ ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿವೆ.

ಕೇಂದ್ರ ಮತ್ತು ಗುಜರಾತ್‌ನಲ್ಲಿನ ಬಿಜೆಪಿ ಸರ್ಕಾರಗಳು ಅಪರಾಧಿಗಳ ಅವಧಿ ಪೂರ್ವ ಬಿಡುಗಡೆಗೆ ನೆರವು ನೀಡಿವೆ ಎಂದು ಕಾಂಗ್ರೆಸ್ ಆರೋಪಿಸಿದ್ದು ಆಡಳಿತಾರೂಢ ಪಕ್ಷ ದೇಶದ ಮಹಿಳೆಯರ ಕ್ಷಮೆ ಕೋರಬೇಕು ಎಂದು ಒತ್ತಾಯಿಸಿದೆ.

'ಅಪರಾಧಿಗಳಿಗೆ ರಕ್ಷಣೆ ನೀಡಿದ್ದು ಯಾರು ಎಂಬುದು ದೇಶಕ್ಕೆ ಈಗ ಗೊತ್ತಾಗಿದೆ. ಬಿಜೆಪಿಯ ಮಹಿಳಾ ವಿರೋಧಿ ನೀತಿಯು ಬಹಿರಂಗವಾಗಿದೆ. ಬಿಲ್ಕಿಸ್ ಅವರಿಗೆ ಈಗ ನ್ಯಾಯ ದೊರಕಿದೆ. ಅತ್ಯಾಚಾರಿಗಳನ್ನು ಬಿಡುಗಡೆಗೊಳಿಸಿದ ಮತ್ತು ಅವರನ್ನು ಹಾರ ಹಾಕಿ ಸ್ವಾಗತಿಸಿದವರ ಮುಖಕ್ಕೆ ಹೊಡೆದಂತಾಗಿದೆ' ಎಂದು ಹೇಳಿದೆ.

'ಬಿಲ್ಕಿಸ್ ಬಾನು ಅವರ ಅವಿರತ ಹೋರಾಟವು ದುರಂಹಕಾರದ ಬಿಜೆಪಿ ಸರ್ಕಾರದ ವಿರುದ್ಧ ಲಭಿಸಿದ ನ್ಯಾಯದ ಗೆಲುವಿನ ಸಂಕೇತ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರತಿಕ್ರಿಯಿಸಿದ್ದಾರೆ.

ಪಶ್ಚಿಮಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, 'ದೃಢ ಮತ್ತು ದಿಟ್ಟತನದ ತೀರ್ಪು ನೀಡಿರುವ ಸುಪ್ರೀಂ ಕೋರ್ಟ್‌ಗೆ ನಾನು ಆಭಾರಿ' ಎಂದಿದ್ದಾರೆ.

'ಅಂತಿಮವಾಗಿ ನ್ಯಾಯಕ್ಕೆ ಗೆಲುವಾಗಿದೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ಜನರ ವಿಶ್ವಾಸವನ್ನು ಇದು ಮತ್ತಷ್ಟು ಗಟ್ಟಿಗೊಳಿಸಲಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿದ್ದಾರೆ.

ಟಿಎಂಸಿಯ ಹಿರಿಯ ನಾಯಕ ಕುನಾಲ್ ಘೋಷ್ ಅವರು, 'ಈ ತೀರ್ಪು ನ್ಯಾಯದ ಮರೆಯಲಾಗದ ಗೆಲುವು. ಅಪರಾಧಿಗಳ ಬಿಡುಗಡೆಯಾದಾಗ ಅವರನ್ನು ಸತ್ಕರಿಸಿ ಸಂಭ್ರಮಿಸಿದ ಬಿಜೆಪಿ ನಾಯಕರು ಎಂದಿಗೂ ಕಾನೂನು ಮತ್ತು ಸುವ್ಯವಸ್ಥೆ, ಮಹಿಳಾ ಸುರಕ್ಷತೆ ಅಥವಾ ಅಲ್ಪಸಂಖ್ಯಾತರ ಹಕ್ಕುಗಳ ಬಗ್ಗೆ ಮಾತನಾಡುವ ಧೈರ್ಯ ತೋರಬಾರದು' ಎಂದಿದ್ದಾರೆ.

'ಎರಡು ದಶಕಗಳ ಬಳಿಕ ಬಿಲ್ಕಿಸ್ ಬಾನು ಅವರಿಗೆ ನ್ಯಾಯ ದೊರಕಿದೆ. ಸಾಮೂಹಿಕ ಅತ್ಯಾಚಾರ ಮತ್ತು ಕೊಲೆಗಳ ಕ್ರೌರ್ಯವನ್ನು ತಳ್ಳಿಹಾಕಲು ಸಾಧ್ಯವಿಲ್ಲ' ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅಭಿಪ್ರಾಯ ಪಟ್ಟಿದ್ದಾರೆ.

'ನ್ಯಾಯ ದೊರಕಲು ಸಾಧ್ಯ ಎಂಬ ನಂಬಿಕೆಯನ್ನು ಬಲಪಡಿಸುವ ಕ್ಷಣಗಳು ಇವು. ದುರದೃಷ್ಟವಶಾತ್ ಇಂತಹ ಗಳಿಗೆಗಳು ಇತ್ತೀಚೆಗೆ ಬಹಳ ಅಪರೂಪ ಆಗಿದೆ ಎಂಬ ಅನಿಸಿಕೆಯನ್ನು ಆರ್‌ಜೆಡಿಯ ಸಂಸದ ಮನೋಜ್ ಕೆ. ಝಾ ವ್ಯಕ್ತಪಡಿಸಿದ್ದಾರೆ.

ಗೃಹಸಚಿವಾಲಯ ಮತ್ತು ಗುಜರಾತ್ ಸರ್ಕಾರದ 'ದುಷ್ಕೃತ್ಯ'ವನ್ನು ತೀರ್ಪು ಬಯಲಿಗೆಳೆದಿದೆ. 'ಮಗಳನ್ನು ರಕ್ಷಿಸಿ' ಎಂಬುದು 'ಅಪರಾಧಿಗಳನ್ನು ರಕ್ಷಿಸಿ ಆಗಿದೆ'

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಈ ತೀರ್ಪು ಅಪರಾಧಿಗಳ ಆಶ್ರಯದಾತರು ಯಾರು ಎಂಬುದನ್ನು ದೇಶಕ್ಕೆ ತಿಳಿಸಿದೆ. ಚುನಾವಣಾ ಲಾಭಕ್ಕಾಗಿ ನ್ಯಾಯ ಕೊಲ್ಲುವ ಪ್ರವೃತ್ತಿ ಅಪಾಯಕಾರಿ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಅತ್ಯಾಚಾರಿಗಳು ಮುಕ್ತವಾಗಿ ಓಡಾಡಿಕೊಂಡಿದ್ದರು ಮತ್ತು ಅಧಿಕಾರವನ್ನು ಅನುಭವಿಸುತ್ತಿದ್ದರು ಎಂಬುದನ್ನು ಈ ತೀರ್ಪು ಸಾಬೀತುಪಡಿಸಿದೆ

ಮಮತಾ ಬ್ಯಾನರ್ಜಿ
ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಪಟಾಕಿ ಸಿಡಿಸಿ ಬಂಧುಗಳ ಸಂಭ್ರಮ


ಅಬ್ದುಲ್ ರಜಾಕ್

ದಾಹೋದ್, ಗುಜರಾತ್ (ಪಿಟಿಐ): 'ಬಿಲ್ಕಿಸ್ ಬಾನುಗೆ ಇಂದು ನ್ಯಾಯ ದೊರಕಿದೆ ಎಂದು ಈ ಪ್ರಕರಣದ ಸಾಕ್ಷಿಗಳಲ್ಲಿ ಒಬ್ಬರಾಗಿದ್ದ ಬಿಲ್ಕಿಸ್ ಅವರ ಸಂಬಂಧಿ ಅಬ್ದುಲ್ ರಜಾಕ್ ಮನ್ಸೂರಿ ಹೇಳಿದರೆ, ಬಿಲ್ಕಿಸ್ ಅವರ ಇತರ ಕೆಲ ಬಂಧುಗಳು ಜಿಲ್ಲೆಯ ದೇವಗಢ ಬಾರಿಯಾ ಪಟ್ಟಣದಲ್ಲಿ ಪಟಾಕಿ ಸಿಡಿಸಿ ತೀರ್ಪನ್ನು ಸ್ವಾಗತಿಸಿದರು.

'ಈ ಪ್ರಕರಣದ ಸಾಕ್ಷಿಗಳ ಪೈಕಿ ನಾನೂ ಒಬ್ಬ. ಗುಜರಾತ್ ಸರ್ಕಾರದ ನಿರ್ಧಾರವನ್ನು ಸುಪ್ರೀಂಕೋರ್ಟ್ ರದ್ದುಗೊಳಿಸಿರುವುದು ಮತ್ತು ಶರಣಾಗುವಂತೆ ಅಪರಾಧಿಗಳಿಗೆ ಹೇಳಿರುವುದು ನನಗೆ ಸಂತಸ ತಂದಿದೆ. ಇಂದು ನಮಗೆ ನ್ಯಾಯ ಸಿಕ್ಕಂತೆ ಆಗಿದೆ' ಎಂದು ಅಬ್ದುಲ್ ರಜಾಕ್ ಸುದ್ದಿಗಾರರಿಗೆ ತಿಳಿಸಿದರು.
ಬಿಲ್ಕಿಸ್ ಅವರ ದೂರದ ಸಂಬಂಧಿಗಳು ದೇವಗಢ ಬಾರಿಯಾದಲ್ಲಿ ನೆಲೆಸಿದ್ದಾರೆ. ಟೆಲಿವಿಷನ್‌ನಲ್ಲಿ ಸುದ್ದಿ ಪ್ರಸಾರವಾಗುತ್ತಿದ್ದಂತೆಯೇ ಕೆಲವರು ಪಟಾಕಿ ಸಿಡಿಸಿ ತೀರ್ಪನ್ನು ಸ್ವಾಗತಿಸಿದರು.

ಬಿಜೆಪಿಯು ಬಿಲ್ಕಿಸ್ ಅವರ ಕ್ಷಮೆ ಕೋರಲಿ: ಕೆ.ಸಿ. ವೇಣುಗೋಪಾಲ್

ಬಿಜೆಪಿಯ ಇಡೀ ನಾಯಕತ್ವ ಬಿಲ್ಕಿಸ್ ಬಾನು ಅವರಲ್ಲಿ ಕ್ಷಮೆ ಕೋರಬೇಕು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಹೇಳಿದ್ದಾರೆ.

'ಗುಜರಾತ್ ಮತ್ತು ಕೇಂದ್ರದಲ್ಲಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರದಿಂದ ಬಿಲ್ಕಿಸ್ ಬಾನು ಸತತ ಅವಮಾನ ಅನುಭವಿಸಿದ್ದಾರೆ. ಅತ್ಯಾಚಾರಿಗಳನ್ನು ಬಿಡುಗಡೆ ಮಾಡಿದವರಿಗೆ, ಅವರನ್ನು ಹಾರ ಹಾಕಿ ಸ್ವಾಗತಿಸಿದವರಿಗೆ ಸುಪ್ರೀಂ ಕೋರ್ಟ್ ತೀರ್ಪು ಭಾರಿ ಹೊಡೆತ ನೀಡಿದೆ' ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

'ಗುಜರಾತ್ ಸರ್ಕಾರವು ಅತ್ಯಾಚಾರಿಗಳ ಜತೆ ಸೇರಿ ಸತ್ಯವನ್ನು ನಿಗ್ರಹಿಸಿದೆ ಮತ್ತು ನ್ಯಾಯಾಲಯವನ್ನು ತಪ್ಪುದಾರಿಗೆಳೆದಿದೆ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಅತ್ಯಾಚಾರಿಗಳು ಮತ್ತು ಕೊಲೆಗಾರರ ಜತೆ ಬಿಜೆಪಿ ನಿಂತಿದೆ. ಭಾರತದ ಮಹಿಳೆಯರ ಸುರಕ್ಷತೆಗೆ ಈ ಪಕ್ಷವನ್ನು ನಂಬಲು ಸಾಧ್ಯವಿಲ್ಲ' ಎಂದು ಅವರು ತಿಳಿಸಿದ್ದಾರೆ.

'ಅತ್ಯಾಚಾರಿಗಳಿಗೆ ನೆರವು'

- ಗುಜರಾತ್‌ನಲ್ಲಿ ಬಿಜೆಪಿ ಸರ್ಕಾರವು ಅತ್ಯಾಚಾರಿಗಳಿಗೆ ನೆರವು ನೀಡಿದೆ. ಯಾವುದೇ ರಾಜಕೀಯ ವಿಚಾರಧಾರೆ ಹೊಂದಿದ್ದರೂ ಕ್ಷಮಿಸುವುದು ಸಾಧ್ಯವಿಲ್ಲ ಎಂಬ ಸಂದೇಶ ಅತ್ಯಾಚಾರಿಗಳಿಗೆ ತಲುಪಬೇಕು

ಅಸಾದುದ್ದೀನ್ ಓವೈಸಿ, ಎಐಎಂಐಎಂ ಮುಖ್ಯಸ್ಥ

- ಈ ತೀರ್ಪು ತಪ್ಪನ್ನು ಸರಿ ಪಡಿಸಿದೆ. ಪ್ರಕರಣದ ಸ್ಥಿತಿಗತಿ ಮತ್ತು ಅಪರಾಧಿಗಳಿಗೆ ಕ್ಷಮಾದಾನ ನೀಡಿದ್ದು ಗಮನಿಸಿದರೆ ಬಿಜೆಪಿ ದೇಶದಲ್ಲಿ ಅಧಿಕಾರದಲ್ಲಿ ಉಳಿದರೆ ಯಾವ ಪರಿಸ್ಥಿತಿ ಇರಲಿದೆ ಎಂಬುದನ್ನು ಸೂಚಿಸುತ್ತದೆ

ಪಿ.ಕೆ. ಕುಂಞಾಲಿ ಕುಟ್ಟಿ
ಐಯುಎಂಎಲ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

'ನನಗೆ ಇಂದು ಹೊಸ ವರ್ಷ'

ಅಹಮದಾಬಾದ್: 'ನನಗೆ ಇಂದು ಹೊಸ ವರ್ಷ. ನಾನು ಸಮಾಧಾನದ ಕಣ್ಣೀರು ಒರೆಸಿಕೊಂಡಿದ್ದೇನೆ. ಒಂದೂವರೆ ವರ್ಷಕ್ಕೂ ಹೆಚ್ಚಿನ ಅವಧಿಯಲ್ಲಿ ಇದೇ ಮೊದಲ ಬಾರಿಗೆ ನನ್ನ ಮೊಗದಲ್ಲಿ ಮಂದಹಾಸ ಮೂಡಿದೆ. ನನ್ನ ಮಕ್ಕಳನ್ನು ಅಪ್ಪಿಕೊಂಡಿದ್ದೇನೆ' ಎಂದು ಬಿಲ್ಕಿಸ್ ಬಾನು ಅವರು ತಮ್ಮ ವಕೀಲೆ ಶೋಭಾ ಗುಪ್ತ ಅವರ ಮೂಲಕ ಪ್ರತಿಕ್ರಿಯೆ ನೀಡಿದ್ದಾರೆ.

ಎಲ್ಲರಿಗೂ ಸಮಾನ ನ್ಯಾಯದ ಭರವಸೆಯನ್ನು ತಮ್ಮಲ್ಲಿ, ತಮ್ಮ ಮಕ್ಕಳಲ್ಲಿ ಹಾಗೂ ಎಲ್ಲ ಮಹಿಳೆಯರಲ್ಲಿ ಮೂಡಿಸಿದ್ದಕ್ಕಾಗಿ ಸುಪ್ರೀಂ ಕೋರ್ಟ್‌ಗೆ ಅವರು ಧನ್ಯವಾದ ಅರ್ಪಿಸಿದ್ದಾರೆ.

'ನಾನು ಹಿಂದೆಯೂ ಹೇಳಿದ್ದೇನೆ, ಈಗಲೂ ಹೇಳುತ್ತಿದ್ದೇನೆ. ನಾನು ಕಂಡಂತಹ ಪಯಣವನ್ನು ಒಬ್ಬಳೇ ಅನುಭವಿಸಲು ಸಾಧ್ಯವಿಲ್ಲ. ನನ್ನ ಪತಿ ಹಾಗೂ ಮಕ್ಕಳು ನನ್ನ ಜೊತೆ ಇದ್ದರು. ದ್ವೇಷದ ಕಾಲಘಟ್ಟದಲ್ಲಿ ಪ್ರೀತಿಯನ್ನು ನೀಡಿದ ಸ್ನೇಹಿತರು ನನಗಿದ್ದಾರೆ. 20 ವರ್ಷಗಳಿಗಿಂತ ಹೆಚ್ಚಿನ ಅವಧಿಯಿಂದ ನನ್ನ ಜೊತೆ ವಕೀಲೆ ಶೋಭಾ ಅವರು ಇದ್ದಾರೆ' ಎಂದು ಬಿಲ್ಕಿಸ್ ಹೇಳಿದ್ದಾರೆ.

'ನನ್ನ ಕುಟುಂಬವನ್ನು ನಾಶಮಾಡಿದ್ದ ಹಾಗೂ ನನ್ನ ಅಸ್ತಿತ್ವಕ್ಕೇ ಬೆದರಿಕೆಯಾಗಿದ್ದವರು ಬಿಡುಗಡೆ ಆದಾಗ ನಾನು ಕುಸಿದುಹೋಗಿದ್ದೆ. ನನ್ನಲ್ಲಿನ ಧೈರ್ಯ ಮುಗಿದುಹೋಯಿತು ಅನಿಸಿತ್ತು. ಆದರೆ ದೇಶದ ಸಹಸ್ರಾರು ಮಂದಿ ಜನಸಾಮಾನ್ಯರು, ಮಹಿಳೆಯರು ಮುಂದೆ ಬಂದರು. ಅವರು ನನ್ನ ಜೊತೆ ನಿಂತರು. ಕರ್ನಾಟಕದ 29 ಜಿಲ್ಲೆಗಳಿಂದ ನನ್ನ ಪರವಾಗಿ ಜನ ಅನಿಸಿಕೆ ವ್ಯಕ್ತಪಡಿಸಿದರು' ಎಂದು ಅವರು ನೆನಪಿಸಿಕೊಂಡಿದ್ದಾರೆ.

'ನ್ಯಾಯದ ಪರಿಕಲ್ಪನೆಯನ್ನು ನನಗಾಗಿ ಮಾತ್ರವಲ್ಲ, ದೇಶದ ಎಲ್ಲ ಮಹಿಳೆಯರಿಗಾಗಿ ಕಾಪಾಡುವ ಸಲುವಾಗಿ ಹೋರಾಟ ನಡೆಸಲು ಇವರೆಲ್ಲ ನನಗೆ ಮನೋಬಲ ನೀಡಿದರು' ಎಂದು ಕೂಡ ಹೇಳಿದ್ದಾರೆ.

ಕ್ಷಮಾದಾನ ನೀತಿಗೆ ಸೂತ್ರ

ನ್ಯಾಯಮೂರ್ತಿ ನಾಗರತ್ನ ಅವರು ತಮ್ಮ ತೀರ್ಪಿನಲ್ಲಿ ಗ್ರೀಕ್ ತತ್ವಶಾಸ್ತ್ರಜ್ಞ ಪ್ಲೇಟೊನ ಮಾತುಗಳನ್ನು ಉಲ್ಲೇಖಿಸಿದ್ದಾರೆ. 'ಶಿಕ್ಷೆ ವಿಧಿಸುವುದು ಹಗೆ ಸಾಧಿಸುವ ಉದ್ದೇಶದಿಂದ ಅಲ್ಲ. ಏಕೆಂದರೆ, ಆಗಿರುವುದನ್ನು ಸರಿಪಡಿಸಲು ಸಾಧ್ಯವಿಲ್ಲ. ಆದರೆ, ಮುಂದಾಗುವುದನ್ನು ತಡೆಯಲು ಹಾಗೂ ಸುಧಾರಣೆಯ ಉದ್ದೇಶದಿಂದ ಶಿಕ್ಷೆ ವಿಧಿಸಲಾಗುತ್ತದೆ' ಎಂದು ನಾಗರತ್ನ ಹೇಳಿದ್ದಾರೆ.

'ನ್ಯಾಯಪಾಲಕನು ವೈದ್ಯನನ್ನು ಅನುಕರಿಸಬೇಕು ಎಂದು ಪ್ಲೇಟೊ ಹೇಳಿದ್ದಾನೆ. ವೈದ್ಯನಾದವನು ರೋಗಿಗೆ ನೋವಾಗಲಿ ಎಂಬ ಉದ್ದೇಶದಿಂದ ಔಷಧ ನೀಡುವುದಿಲ್ಲ. ಬದಲಿಗೆ, ರೋಗಿಗೆ ಒಳಿತು ಮಾಡುವ ಉದ್ದೇಶದಿಂದ ಹಾಗೆ ಮಾಡುತ್ತಾನೆ. ಪರಿಹಾರಾತ್ಮಕ ಶಿಕ್ಷೆ ಸಿದ್ಧಾಂತವು, ಶಿಕ್ಷೆಗೆ ಗುರಿಯಾಗುತ್ತಿರುವ ವ್ಯಕ್ತಿಯ ಒಳಿತಿಗೆ ನೀಡುವ ಔಷಧವನ್ನಾಗಿ ಶಿಕ್ಷೆಯನ್ನು ಕಾಣುತ್ತದೆ' ಎಂದು ತೀರ್ಪಿನಲ್ಲಿ ಹೇಳಿದ್ದಾರೆ.

ಕ್ರಿಮಿನಲ್ ಅಪರಾಧ ಎಸಗಿದವನಲ್ಲಿ ಸುಧಾರಣೆ ತರಬಹುದು ಎಂದಾದರೆ, ಶಿಕ್ಷಣ ಮತ್ತು ಇತರ ಕ್ರಮಗಳ ಮೂಲಕ ಆತನಲ್ಲಿ ಸುಧಾರಣೆ ತರಬೇಕು. ಉತ್ತಮ ನಾಗರಿಕನನ್ನಾಗಿಸಿ ಆತನನ್ನು ಸ್ವತಂತ್ರನನ್ನಾಗಿಸಬೇಕು. ಈ ಸೂತ್ರವು ಕ್ಷಮಾದಾನ ನೀತಿಯ ಕೇಂದ್ರಬಿಂದು ಎಂದು ಅವರು ವಿವರಿಸಿದ್ದಾರೆ.

ಅಪರಾಧಿಗಳು ಮತ್ತೆ ಜೈಲಿಗೆ

ಒಂದನೇ ಪುಟದಿಂದ...

'ಗುಜರಾತ್ ಸರ್ಕಾರವು ತನ್ನಲ್ಲಿ ಇಲ್ಲದಿದ್ದ ಅಧಿಕಾರವನ್ನು ಚಲಾಯಿಸಿದ ಕಾರಣಕ್ಕಾಗಿ ಕ್ಷಮಾದಾನ ಆದೇಶವನ್ನು ನಾವು ರದ್ದುಪಡಿಸುತ್ತಿದ್ದೇವೆ' ಎಂದು ನ್ಯಾಯಪೀಠ ಹೇಳಿದೆ.

ಕ್ಷಮಾದಾನ ಆದೇಶ ಹೊರಡಿಸಬೇಕಿದ್ದುದು ಗುಜರಾತ್ ಸರ್ಕಾರದ ಕೆಲಸ ಅಲ್ಲವಾಗಿತ್ತು ಎಂದು ತೀರ್ಪಿನಲ್ಲಿ ಕೋರ್ಟ್ ಹೇಳಿದೆ. ಅಪರಾಧ ಎಸಗಿದವರ ವಿಚಾರಣೆ ನಡೆಸಿದ ಹಾಗೂ ಅವರನ್ನು ಶಿಕ್ಷೆಗೆ ಗುರಿಪಡಿಸಿದ ರಾಜ್ಯವು (ಮಹಾರಾಷ್ಟ್ರ) ಕ್ಷಮಾದಾನ ಕೋರಿದ ಮನವಿಯ ಬಗ್ಗೆ ತೀರ್ಮಾನ ಕೈಗೊಳ್ಳಬೇಕಿತ್ತು ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

'ಇತರ ವಿಷಯಗಳ ಬಗ್ಗೆ ನಾವು ಗಮನಹರಿಸಬೇಕಾದ ಅಗತ್ಯ ಇರಲಿಲ್ಲ. ಆದರೆ, ಗಮನ ನೀಡುವ ಕೆಲಸ ಪೂರ್ತಿಯಾಗಬೇಕು ಎಂಬ ಕಾರಣಕ್ಕೆ ನಾವು ಆ ಕೆಲಸ ಮಾಡಿದ್ದೇವೆ. ಗುಜರಾತ್ ಸರ್ಕಾರವು ತನ್ನ ಬಳಿ ಇಲ್ಲದಿದ್ದ ಅಧಿಕಾರವನ್ನು ಚಲಾಯಿಸಿದೆ, ತನ್ನ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡಿದೆ. ಈ ಕಾರಣಕ್ಕಾಗಿಯೂ ಕ್ಷಮಾದಾನದ ಆದೇಶವು ರದ್ದುಪಡಿಸುವುದಕ್ಕೆ ಯೋಗ್ಯವಾಗಿದೆ' ಎಂದು ಪೀಠವು ಹೇಳಿದೆ.

ಅಪರಾಧಿಗಳ ಪೈಕಿ ಒಬ್ಬ (ರಾಧೇಶ್ಯಾಮ್ ಶಾ) ಸಲ್ಲಿಸಿದ್ದ ಕ್ಷಮಾದಾನದ ಅರ್ಜಿಯನ್ನು ಪರಿಗಣಿಸುವಂತೆ ಗುಜರಾತ್ ಸರ್ಕಾರಕ್ಕೆ ಸುಪ್ರೀಂ ಕೋರ್ಟ್‌ನ ಇನ್ನೊಂದು ನ್ಯಾಯಪೀಠವು 2022ರ ಮೇ 13ರಂದು ನೀಡಿದ್ದ ತೀರ್ಪನ್ನು ವಿಭಾಗೀಯ ಪೀಠವು ಅನೂರ್ಜಿತಗೊಳಿಸಿದೆ. ಆ ತೀರ್ಪನ್ನು ನ್ಯಾಯಾಲಯಕ್ಕೆ ವಂಚಿಸಿ, ವಾಸ್ತವ ಸಂಗತಿಗಳನ್ನು ಮರೆಮಾಚಿ ಪಡೆಯಲಾಗಿತ್ತು ಎಂದು ವಿಭಾಗೀಯ ಪೀಠ ಹೇಳಿದೆ.

2022ರ ಮೇ ತಿಂಗಳ ತೀರ್ಪಿನ ಬಗ್ಗೆ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸದ ಗುಜರಾತ್ ಸರ್ಕಾರದ ಕ್ರಮವನ್ನು ಕೋರ್ಟ್ ಕಟುವಾಗಿ ಟೀಕಿಸಿದೆ. '2022ರ ಮೇ ತಿಂಗಳ ತೀರ್ಪಿನ ಲಾಭ ಪಡೆದ ಇತರ ಅಪರಾಧಿಗಳು, ತಾವು ಕೂಡ ಕ್ಷಮಾದಾನ ಕೋರಿ ಅರ್ಜಿ ಸಲ್ಲಿಸಿದರು. ಗುಜರಾತ್ ಸರ್ಕಾರವು ಅಪರಾಧಿಯೊಬ್ಬನ (ಪ್ರತಿವಾದಿ ಸಂಖ್ಯೆ 3) ಈ ತಪ್ಪು ಕೆಲಸದಲ್ಲಿ ತಾನೂ ಭಾಗಿಯಾಗಿತ್ತು. ವಾಸ್ತವಾಂಶಗಳನ್ನು ಮರೆಮಾಚಿ ಈ ಕೋರ್ಟ್‌ನ ದಾರಿ ತಪ್ಪಿಸಲಾಯಿತು' ಎಂದು ವಿಭಾಗೀಯ ಪೀಠವು ಹೇಳಿದೆ.

ಬಿಲ್ಕಿಸ್ ಸೇರಿದಂತೆ ಹಲವರು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ್ದ ವಿಭಾಗೀಯ ಪೀಠವು ಅಕ್ಟೋಬರ್ 12ರಂದು ಆದೇಶವನ್ನು ಕಾಯ್ದಿರಿಸಿತ್ತು.

ಈ ಘಟನೆ ನಡೆದ ವೇಳೆ ನರೇಂದ್ರ ಮೋದಿ ಅವರು ಗುಜರಾತ್‌ನ ಮುಖ್ಯಮಂತ್ರಿ ಆಗಿದ್ದರು. ಗೋಧ್ರಾ ಹತ್ಯಾಕಾಂಡ ನಡೆದ ಕೆಲ ದಿನಗಳಲ್ಲೇ ಈ ಘಟನೆ ನಡೆದಿತ್ತು.



ಬಿಲ್ಕಿಸ್ ಬಾನು ಅತ್ಯಾಚಾರ ಪ್ರಕರಣದ ಅಪರಾಧಿಗಳನ್ನು ಗುಜರಾತ್ ಸರ್ಕಾರವು ಅವಧಿಪೂರ್ವ ಬಿಡುಗಡೆ ಮಾಡಿದ ಬಳಿಕ, 2022ರ ಆಗಸ್ಟ್ 15ರಂದು ಗೋಧ್ರಾ ಉಪ ಕಾರಾಗೃಹದಿಂದ ಬಿಡುಗಡೆಗೊಂಡ ದೃಶ್ಯ —ಪಿಟಿಐ ಚಿತ್ರ

ಕನ್ನಡತಿ ನಾಗರತ್ನ

ನ್ಯಾ. ಬಿ.ವಿ. ನಾಗರತ್ನ ಅವರು ಕರ್ನಾಟಕದವರು. ಈ ಹಿಂದೆ ಕರ್ನಾಟಕ ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿಯಾಗಿ ಕರ್ತವ್ಯ ನಿರ್ವಹಿಸಿದ್ದರು.

ಮುಸ್ಲಿಂ ಸಂಘಟನೆ ಸಂತಸ: ಈ ತೀರ್ಪು ನ್ಯಾಯಾಂಗದ ಕುರಿತು ಜನರ, ಅದರಲ್ಲೂ ಅಲ್ಪಸಂಖ್ಯಾತರ ನಂಬಿಕೆಯನ್ನು ಬಲಪಡಿಸಿದೆ ಎಂದು ಜಮಾತ್ ಉಲೆಮಾ–ಇ–ಹಿಂದ್ ಮುಸ್ಲಿಂ ಸಂಘಟನೆ ಹೇಳಿದೆ.

ಕೋರ್ಟ್ ವಂಚಿಸಿ ತೀರ್ಪು ಪಡೆದಿದ್ದ ರಾಧೇಶ್ಯಾಮ್

ನವದೆಹಲಿ (ಪಿಟಿಐ): ಬಿಲ್ಕಿಸ್ ಬಾನು ಪ್ರಕರಣದ ಅಪರಾಧಿಗಳು ಕ್ಷಮಾದಾನ ಕೋರಿ ಸಲ್ಲಿಸಿದ್ದ ಅರ್ಜಿಗಳನ್ನು ಪರಿಗಣಿಸುವಂತೆ ಗುಜರಾತ್ ಸರ್ಕಾರಕ್ಕೆ ಸೂಚಿಸಿ 2022ರ ಮೇ 13ರಂದು ಸುಪ್ರೀಂ ಕೋರ್ಟ್‌ನ ಇನ್ನೊಂದು ಪೀಠ ನೀಡಿದ್ದ ತೀರ್ಪನ್ನು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಉಜ್ವಲ್ ಭುಯಿಯಾಂ ಅವರಿದ್ದ ವಿಭಾಗೀಯ ಪೀಠವು ಅನೂರ್ಜಿತಗೊಳಿಸಿದೆ. 2022ರ ತೀರ್ಪನ್ನು 'ಕೋರ್ಟ್‌ಗೆ ವಂಚಿಸಿ ಪಡೆಯಲಾಗಿತ್ತು' ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ (ಈಗ ನಿವೃತ್ತ) ಮತ್ತು ವಿಕ್ರಮ್ ನಾಥ್ ಅವರು ಇದ್ದ ಪೀಠವು 2022ರ ಮೇ ತಿಂಗಳಲ್ಲಿ ನೀಡಿದ್ದ ತೀರ್ಪಿನಲ್ಲಿ, ಬಿಲ್ಕಿಸ್ ಬಾನು ಪ್ರಕರಣದ ಅಪರಾಧಿ ರಾಧೇಶ್ಯಾಮ್ ಶಾ ಸಲ್ಲಿಸಿದ್ದ ಕ್ಷಮಾದಾನ ಅರ್ಜಿಯನ್ನು ಪರಿಗಣಿಸುವಂತೆ ಗುಜರಾತ್ ಸರ್ಕಾರಕ್ಕೆ ಸೂಚಿಸಿತ್ತು.

1992ರ ಜುಲೈ 9ರ ಕ್ಷಮಾದಾನ ನೀತಿಗೆ ಅನುಗುಣವಾಗಿ ಅರ್ಜಿಯನ್ನು ಪರಿಗಣಿಸಬೇಕು. ಅಪರಾಧ ಯಾವ ರಾಜ್ಯದಲ್ಲಿ ನಡೆದಿದೆಯೋ ಆ ರಾಜ್ಯದ ಸರ್ಕಾರವು ಅರ್ಜಿಯ ಬಗ್ಗೆ ತೀರ್ಮಾನಿಸುವ ಅಧಿಕಾರ ಹೊಂದಿದೆ ಎಂದು 2022ರ ಮೇ ತಿಂಗಳ ತೀರ್ಪಿನಲ್ಲಿ ಹೇಳಲಾಗಿತ್ತು. ಆದರೆ, ಶಾ ತನ್ನ ಅರ್ಜಿಯನ್ನು ಪರಿಗಣಿಸಲು ಸರ್ಕಾರಕ್ಕೆ ಸೂಚಿಸುವಂತೆ ಕೋರಿ 2019ರಲ್ಲಿ ಗುಜರಾತ್ ಹೈಕೋರ್ಟ್‌ನ ಮೊರೆ ಹೋಗಿದ್ದ ಎಂಬುದನ್ನು ಸೋಮವಾರದ ತೀರ್ಪಿನಲ್ಲಿ ವಿಭಾಗೀಯ ಪೀಠ ಉಲ್ಲೇಖಿಸಿದೆ.

'ಆದರೆ, 2019ರ ಜುಲೈ 17ರಂದು ಆ ಅರ್ಜಿಯನ್ನು ಇತ್ಯರ್ಥಪಡಿಸಿದ್ದ ಹೈಕೋರ್ಟ್, ರಾಧೇಶ್ಯಾಮ್ ಮಹಾರಾಷ್ಟ್ರ ಸರ್ಕಾರದ ಮೊರೆ ಹೋಗಬೇಕು, ಅದೇ ಸೂಕ್ತ ಎಂದು ಹೇಳಿತ್ತು. ಅಲ್ಲದೆ, ಗುಜರಾತ್ ಹೈಕೋರ್ಟ್‌ನಲ್ಲಿ ಈತ ಸಲ್ಲಿಸಿದ್ದ ಎರಡನೆಯ ಅರ್ಜಿಯು ಕೂಡ 2020ರಲ್ಲಿ ವಜಾಗೊಂಡಿತ್ತು' ಎಂದು ಸೋಮವಾರದ ತೀರ್ಪಿನಲ್ಲಿ ವಿವರಿಸಲಾಗಿದೆ.

ನಂತರ ಶಾ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ. ಆದರೆ, 2019ರಲ್ಲಿ ಹೈಕೋರ್ಟ್ ಆದೇಶ ಬಂದ 14 ದಿನಗಳೊಳಗೆ ತಾನು ಮಹಾರಾಷ್ಟ್ರ ಸರ್ಕಾರಕ್ಕೆ ಕ್ಷಮಾದಾನ ಕೋರಿ ಅರ್ಜಿ ಸಲ್ಲಿಸಿದ್ದುದನ್ನು, ತನ್ನ ಪ್ರಕರಣದಲ್ಲಿ ಮುಂಬೈನ ಸಿಬಿಐ ವಿಶೇಷ ನ್ಯಾಯಾಧೀಶರು ಹಾಗೂ ಸಿಬಿಐ ನಕಾರಾತ್ಮಕ ಅಭಿಪ್ರಾಯ ನೀಡಿದ್ದುದನ್ನು ಸುಪ್ರೀಂ ಕೋರ್ಟ್‌ಗೆ ತಿಳಿಸಿರಲಿಲ್ಲ.

'ಹೀಗಾಗಿ, ವಾಸ್ತವವನ್ನು ಮರೆಮಾಚಿ, ಈ ನ್ಯಾಯಾಲಯವನ್ನು ತಪ್ಪುದಾರಿಗೆ ಎಳೆಯಲಾಯಿತು. ರಾಧೇಶ್ಯಾಮ್‌ನ ಕ್ಷಮಾದಾನ ಅರ್ಜಿಯನ್ನು ಪರಿಗಣಿಸುವಂತೆ ಗುಜರಾತ್ ಸರ್ಕಾರಕ್ಕೆ ಸೂಚನೆ ನೀಡಲಾಯಿತು' ಎಂದು ಸೋಮವಾರದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ. ಕೋರ್ಟ್‌ನಿಂದ ತನ್ನ ಪರವಾಗಿ ತೀರ್ಪು ಪಡೆಯಲು ರಾಧೇಶ್ಯಾಮ್ ತಪ್ಪು ಹೇಳಿಕೆಯನ್ನು ಕೂಡ ನೀಡಿದ್ದ ಎಂದು ವಿಭಾಗೀಯ ಪೀಠವು ಹೇಳಿದೆ.

2019 ಹೈಕೋರ್ಟ್ ಆದೇಶವು ಸಮಾಧಾನಕರವಾಗಿ ಇಲ್ಲದಿದ್ದರೆ ರಾಧೇಶ್ಯಾಮ್ ಮೇಲ್ಮನವಿ ಸಲ್ಲಿಸಬಹುದಿತ್ತು. ಆದರೆ ಆತ ಹಾಗೆ ಮಾಡಲಿಲ್ಲ. ಬದಲಿಗೆ, ಮಹಾರಾಷ್ಟ್ರ ಸರ್ಕಾರಕ್ಕೆ 2019ರ ಆಗಸ್ಟ್‌ನಲ್ಲಿ ಕ್ಷಮಾದಾನ ಕೋರಿ ಮನವಿ ಸಲ್ಲಿಸಿದ. ತನ್ನ ವಿರುದ್ಧದ ಅಭಿಪ್ರಾಯ ನಕಾರಾತ್ಮಕವಾಗಿ ಬಂದಾಗ, ವಾಸ್ತವವನ್ನು ಮರೆಮಾಚಿ ಈತ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ, ಗುಜರಾತ್ ಸರ್ಕಾರಕ್ಕೆ ಸೂಚನೆ ನೀಡುವಂತೆ ಕೋರಿದ ಎಂದು ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ.

'ಈ ಕೋರ್ಟ್‌ನಲ್ಲಿ ನಡೆದ ವಿಚಾರಣೆಯಲ್ಲಿ ವಾಸ್ತವವನ್ನು ಮರೆಮಾಚಲಾಗಿತ್ತು, ಕೋರ್ಟನ್ನು ತಪ್ಪುದಾರಿಗೆ ಎಳೆಯಲಾಗಿತ್ತು ಎಂಬುದು ನಮ್ಮ ಅಭಿಪ್ರಾಯ. ಹೀಗಾಗಿ, 2022ರ ಮೇ ತಿಂಗಳ ತೀರ್ಪನ್ನು ಕೋರ್ಟ್‌ಗೆ ವಂಚನೆ ಎಸಗಿ ಪಡೆಯಲಾಗಿತ್ತು. ಇದು ಅನೂರ್ಜಿತವಾಗುತ್ತದೆ' ಎಂದು ವಿಭಾಗೀಯ ಪೀಠವು ಹೇಳಿದೆ.

ಕಳವಳ ತಿಳಿಸಿದ ಭಾರತ

ಒಂದನೇ ಪುಟದಿಂದ...

'ಮಾಲ್ದೀವ್ಸ್ ಸರ್ಕಾರ ಭಾರತದ ಕ್ಷಮೆ ಕೇಳಬೇಕಿತ್ತು': 'ಉಪ ಸಚಿವರ ಹೇಳಿಕೆ ಕುರಿತು ಮಾಲ್ದೀವ್ಸ್ ಸರ್ಕಾರವು ಕ್ಷಮೆ ಕೇಳಬೇಕಿತ್ತು, ಅಧ್ಯಕ್ಷ ಮೊಹಮ್ಮದ್ ಮುಯಿಜು ಅವರು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸಂಪರ್ಕಿಸಿ ರಾಜತಾಂತ್ರಿಕ ಬಿಕ್ಕಟ್ಟನ್ನು ಬಗೆಹರಿಸಿಕೊಳ್ಳಬೇಕಿತ್ತು' ಎಂದು ಮಾಲ್ದೀವ್ಸ್‌ನ ಮಾಜಿ ಉಪಾಧ್ಯಕ್ಷ ಅಹ್ಮದ್ ಅದೀಬ್ ಹೇಳಿದ್ದಾರೆ.

ಪಿಟಿಐ ಸುದ್ದಿಸಂಸ್ಥೆಗೆ ಸಂದರ್ಶನ ನೀಡಿರುವ ಅವರು, 'ಭಾರತದ ಪ್ರಧಾನಿ ಕುರಿತು ದೇಶದ ಉಪ ಸಚಿವರು ಆಡಿರುವ ಮಾತುಗಳು ಸ್ವೀಕಾರಾರ್ಹವಲ್ಲ' ಎಂದಿದ್ದಾರೆ.

'ಈ ರೀತಿಯ ಘಟನೆ ಎಂದಿಗೂ ಆಗಬಾರದಿತ್ತು. ಈ ಕುರಿತು ಮಾಲ್ದೀವ್ಸ್ ಸರ್ಕಾರವು ಇದಕ್ಕೂ ಮುಂಚೆಯೇ ಪ್ರತಿಕ್ರಿಯಿಸಬೇಕಿತ್ತು ಮತ್ತು ಕ್ರಮಗಳನ್ನು ಕೈಗೊಳ್ಳಬೇಕಿತ್ತು. ಈ ವಿಚಾರದಿಂದ ರಾಜತಾಂತ್ರಿಕ ಬಿಕ್ಕಟ್ಟು ಸೃಷ್ಟಿಯಾಗಲು ಬಿಡಬಾರದಿತ್ತು' ಎಂದಿದ್ದಾರೆ.

ಆಡಳಿತಾರೂಢ ಪಕ್ಷದಲ್ಲಿರುವ ಕೆಲ ತೀವ್ರಗಾಮಿಗಳು 'ಭಾರತ ಹೊರಹೋಗಲಿ' ಎಂದು ಕರೆ ನೀಡುತ್ತಿದ್ದಾರೆ. ಆದರೆ, ಸರ್ಕಾರ ನಡೆಸುವವರು ಹೆಚ್ಚು ಜವಾಬ್ದಾರಿಯಿಂದ ವರ್ತಿಸಬೇಕು. ಏಕೆಂದರೆ, ಮಾಲ್ದೀವ್ಸ್ ಜನಜೀವನವು ಅವರದ್ದೇ ಜವಾಬ್ದಾರಿಯಾಗಿದೆ. ಈ ರೀತಿಯ ವಿಚಾರಗಳಲ್ಲಿ ಎಚ್ಚರಿಕೆ ಕಾಯ್ದುಕೊಳ್ಳಬೇಕು ಎಂದು ಅದೀಬ್ ಹೇಳಿದ್ದಾರೆ.

ವೆಬ್‌ಸೈಟ್‌ಗೆ ಭೇಟಿ ಕೊಟ್ಟವರ ಪ್ರಮಾಣದಲ್ಲಿ ಶೇ 3,400ರಷ್ಟು ಹೆಚ್ಚಳ

ನವದೆಹಲಿ(ಪಿಟಿಐ): ಲಕ್ಷದ್ವೀಪಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಭೇಟಿ ನೀಡಿದ ನಂತರ, ಈ ದ್ವೀಪ ಕುರಿತು ಮಾಹಿತಿಗಾಗಿ ತನ್ನ ಆನ್‌ಲೈಲ್ ವೇದಿಕೆಯಲ್ಲಿ ಹುಡುಕಾಟ ನಡೆಸಿದವರ ಸಂಖ್ಯೆಯಲ್ಲಿ ಶೇ 3,400ರಷ್ಟು ಹೆಚ್ಚಳ ಕಂಡುಬಂದಿದೆ ಎಂದು ಮೇಕ್ ಮೈ ಟ್ರಿಪ್ ಸಂಸ್ಥೆ ಹೇಳಿದೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಸಂಸ್ಥೆಯು, 'ಸಾಗರ ತೀರಗಳ ಕುರಿತ ಭಾರತೀಯರು ತೋರುತ್ತಿರುವ ಆಸಕ್ತಿಯು ನಮ್ಮ ವೇದಿಕೆಯಲ್ಲಿ 'ಬೀಚಸ್ ಆಫ್ ಇಂಡಿಯಾ' ಎಂಬ ಪ್ರಚಾರಾಂದೋಲನ ಆರಂಭಿಸುವುದಕ್ಕೆ ನಮಗೆ ಸ್ಫೂರ್ತಿ ನೀಡಿದೆ' ಎಂದು ಹೇಳಿದೆ.

'ಬೇಳೆಕಾಳು: ಮಾರುಕಟ್ಟೆ ವಿಸ್ತರಣೆ'

ನವದೆಹಲಿ(ಪಿಟಿಐ): ತೊಗರಿಯನ್ನು ಆನ್‌ಲೈನ್ ಮೂಲಕ ಮಾರಾಟ ಮಾಡಲು ಜಾರಿಗೊಳಿಸಲಾಗಿರುವ ವ್ಯವಸ್ಥೆಯನ್ನು ಇತರ ಬೇಳೆಕಾಳುಗಳನ್ನು ಮಾರಾಟ ಮಾಡುವುದಕ್ಕೆ ವಿಸ್ತರಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದರು.

'ಬೇಳೆ ಕಾಳುಗಳ ಖರೀದಿಗಾಗಿ ವ್ಯಯಿಸುವ ಹಣವು ಬೇರೆ ದೇಶಗಳಿಗೆ ಹೋಗದೇ, ಅದು ನಮ್ಮ ರೈತರಿಗೇ ಸಿಗಬೇಕು ಎಂಬುದು ಈ ಯೋಜನೆಯ ಉದ್ದೇಶವಾಗಿದೆ' ಎಂದು ಹೇಳಿದರು.

ದೇಶದ ವಿವಿಧೆಡೆ ಹಮ್ಮಿಕೊಂಡಿದ್ದ 'ವಿಕಸಿತ ಭಾರತ ಸಂಕಲ್ಪ ಯಾತ್ರೆ'ಯನ್ನು ವರ್ಚುವಲ್ ಆಗಿ ಉದ್ದೇಶಿಸಿ ಅವರು ಮಾತನಾಡಿದರು.

'ಓಪನ್‌ಹೈಮರ್' ಚಿತ್ರಕ್ಕೆ ಐದು ಪ್ರಶಸ್ತಿ

ಲಾಸ್ ಏಂಜಲೀಸ್ (ಎಎಫ್‌ಪಿ): 81ನೇ ವಾರ್ಷಿಕ ಗೋಲ್ಡನ್ ಗ್ಲೋಬ್ ಪ್ರಶಸ್ತಿ ಪ್ರಕಟವಾಗಿದ್ದು, 'ಓಪನ್‌ಹೈಮರ್' ಚಿತ್ರ ಅತ್ಯುತ್ತಮ ಸಿನಿಮಾ ಎನ್ನುವ ಶ್ರೇಯ ಗಿಟ್ಟಿಸಿಕೊಂಡು ಐದು ಪ್ರಶಸ್ತಿಗಳನ್ನು ಬಾಚಿಕೊಂಡಿದೆ.

ಅಣುಬಾಂಬ್ ಸೃಷ್ಟಿಕರ್ತನ ಜೀವನ ಚರಿತ್ರೆಯನ್ನು ಒಳಗೊಂಡ 'ಓಪನ್ ಹೈಮರ್' ಚಿತ್ರದ ನಿರ್ದೇಶಕ ಕ್ರಿಸ್ಟೋಫರ್ ನೋಲನ್ ಅವರಿಗೆ 'ಅತ್ಯುತ್ತಮ ನಿರ್ದೇಶಕ' ಹಾಗೂ ಈ ಚಿತ್ರದ ನಾಯಕ ಕಿಲಿಯನ್ ಮರ್ಫಿ ಅವರಿಗೆ 'ಅತ್ಯುತ್ತಮ ನಟ' ಹಾಗೂ ರಾಬರ್ಟ್ ಡೌನಿ ಜೂನಿಯರ್ ಅವರಿಗೆ ಅತ್ಯುತ್ತಮ ಪೋಷಕ ನಟ ಪ್ರಶಸ್ತಿ ಲಭಿಸಿದೆ.

ಪ್ರಶಸ್ತಿಯ ಒಂಬತ್ತು ವಿಭಾಗಗಳಿಗೆ ನಾಮನಿರ್ದೇಶನಗೊಂಡಿದ್ದ 'ಬಾರ್ಬಿ' ಚಿತ್ರವನ್ನು ಹಿಂದಿಕ್ಕಿ, 'ಪೂರ್ ಥಿಂಗ್ಸ್' ಅತ್ಯುತ್ತಮ ಹಾಸ್ಯ ಚಿತ್ರ ಪ್ರಶಸ್ತಿಗೆ ಭಾಜನವಾಗಿದೆ. ಈ ಚಿತ್ರದ ಅಭಿನಯಕ್ಕಾಗಿ ಅಮೆರಿಕದ ನಟಿ ಎಮ್ಮಾ ಸ್ಟೋನ್ ಅವರಿಗೆ 'ಅತ್ಯುತ್ತಮ ನಟಿ' ಪ್ರಶಸ್ತಿ ದೊರೆತಿದೆ.

'ಬಾರ್ಬಿ'ಗೆ ಅತ್ಯುತ್ತಮ ಗೀತೆ (ಬಿಲ್ಲೀ ಎಲಿಷ್ ಮತ್ತು ಆಕೆಯ ಸಹೋದರ ಫಿನ್ನಿಯಾಸ್ ಅವರು ರಾಗ ಸಂಯೋಜನೆ ಮಾಡಿರುವುದು) ಮತ್ತು ಗಲ್ಲಾಪೆಟ್ಟಿಗೆ ಗಳಿಕೆ ವಿಭಾಗಗಳಲ್ಲಿ ಎರಡು ಪ್ರಶಸ್ತಿಗಳು ಮಾತ್ರ ಒಲಿದವು. ಆರಂಭಿಸಲಾಗಿದೆ.



ಕ್ರಿಸ್ಟೋಫರ್ ನೋಲನ್

ಪ್ರಶಸ್ತಿ ಪಟ್ಟಿ ವಿವರ

ವಿಭಾಗ	ಚಿತ್ರದ ಹೆಸರು
ಅತ್ಯುತ್ತಮ ಚಿತ್ರ(ಡ್ರಾಮಾ)	ಓಪನ್‌ಹೈಮರ್
ಅತ್ಯುತ್ತಮ ಚಿತ್ರ (ಸಂಗೀತ ಅಥವಾ ಹಾಸ್ಯ)	ಪೂರ್ ಥಿಂಗ್ಸ್
ಅತ್ಯುತ್ತಮ ನಿರ್ದೇಶಕ	ಕ್ರಿಸ್ಟೋಫರ್ ನೋಲನ್ (ಓಪನ್‌ಹೈಮರ್)
ಅತ್ಯುತ್ತಮ ನಟ	ಕಿಲಿಯನ್ ಮರ್ಫಿ (ಓಪನ್‌ಹೈಮರ್)
ಅತ್ಯುತ್ತಮ ನಟಿ (ಡ್ರಾಮಾ)	ಲಿಲಿ ಗ್ಲಾಡ್‌ಸ್ಟೋನ್ (ಕಿಲ್ಲರ್ಸ್ ಆಫ್ ದಿ ಫ್ಲವರ್ ಮೂನ್)
ಅತ್ಯುತ್ತಮ ನಟ (ಸಂಗೀತ ಅಥವಾ ಹಾಸ್ಯ)	ಪೌಲ್ ಗಿಯಾಮಟ್ಟಿ (ದಿ ಹೊಲ್ಡೊವರ್ಸ್)
ಅತ್ಯುತ್ತಮ ನಟಿ (ಸಂಗೀತ ಅಥವಾ ಹಾಸ್ಯ)	ಎಮ್ಮಾ ಸ್ಟೋನ್ (ಪೂರ್ ಥಿಂಗ್ಸ್)
ಅತ್ಯುತ್ತಮ ಪೋಷಕ ನಟ	ರಾಬರ್ಟ್ ಡೌನಿ ಜೂನಿಯರ್ (ಓಪನ್‌ಹೈಮರ್)
ಅತ್ಯುತ್ತಮ ಪೋಷಕ ನಟಿ	ಡವೈನ್ ಜಾಯ್ ರ‍್ಯಾಂಡಾಲ್ಫ್ (ದಿ ಹೊಲ್ಡೊವರ್ಸ್)
ಅತ್ಯುತ್ತಮ ವಿದೇಶಿ ಭಾಷಾ ಚಿತ್ರ	ಅನಾಟಮಿ ಆಫ್ ಎ ಫಾಲ್ (ಫ್ರಾನ್ಸ್ ಚಿತ್ರ)
ಅತ್ಯುತ್ತಮ ಟಿ.ವಿ ಸರಣಿ– ಡ್ರಾಮಾ	ಸಕ್ಸೆಸನ್

ಚಲನಚಿತ್ರಗಳಿಗೆ ಸಬ್‌ಟೈಟಲ್ ಆಡಿಯೊ ವಿವರಣೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಥಿಯೇಟರ್‌ಗಳಲ್ಲಿ ಚಲನಚಿತ್ರಗಳ ಪ್ರದರ್ಶನ ದೃಷ್ಟಿ ಹಾಗೂ ಶ್ರವಣ ದೋಷವುಳ್ಳವರ ಸ್ನೇಹಿಯನ್ನಾಗಿಸುವುದಕ್ಕಾಗಿ ಕೇಂದ್ರ ಸರ್ಕಾರ ಮಾರ್ಗಸೂಚಿಗಳ ಕರಡನ್ನು ಸೋಮವಾರ ಬಿಡುಗಡೆ ಮಾಡಿದೆ.

ಈ ಮಾರ್ಗಸೂಚಿಗಳನ್ನು ಮುಂದಿನ ಆರು ತಿಂಗಳಿಂದ ಮೂರು ವರ್ಷಗಳ ಅವಧಿಯ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವ ಉದ್ದೇಶ ಹೊಂದಿರುವುದಾಗಿ ಹೇಳಿದೆ.

ಚಲಚಿತ್ರಗಳನ್ನು ಪ್ರದರ್ಶಿಸುವ ವೇಳೆ ಸಬ್‌ಟೈಟಲ್, ಶೀರ್ಷಿಕೆಗಳನ್ನು ಅಳವಡಿಸುವುದು, ಆಡಿಯೊ ವಿವರಣೆ ನೀಡುವುದು, ಸಂಜ್ಞೆ ಭಾಷೆ ಬಳಸುವುದು ಕಡ್ಡಾಯವಾಗಲಿದೆ.

ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಈ ಕರಡು ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ್ದು, ಫೆಬ್ರುವರಿ 8ರ ಒಳಗಾಗಿ ಎಲ್ಲ ಭಾಗೀದಾರರು ತಮ್ಮ ಅಭಿಪ್ರಾಯ/ಪ್ರತಿಕ್ರಿಯೆಗಳನ್ನು ಸಲ್ಲಿಸುವಂತೆ ಕೋರಿದೆ.

ಚಲನಚಿತ್ರಗಳಿಗೆ ಪ್ರಮಾಣಪತ್ರ ಪಡೆಯುವ ಸಂದರ್ಭದಲ್ಲಿ, ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿಗೆ (ಸಿಬಿಎಫ್‌ಸಿ) ನಿರ್ಮಾಪಕರು ಚಿತ್ರದ ಎರಡು ಪ್ರತಿಗಳನ್ನು ಸಲ್ಲಿಸಬೇಕು. ಒಂದು ಪ್ರತಿಯು ಸಾಮಾನ್ಯ ಜನರ ವೀಕ್ಷಣೆಗೆ ಹಾಗೂ ಮತ್ತೊಂದು ಪ್ರತಿಯು ದೃಷ್ಟಿ ಮತ್ತು ಶ್ರವಣ ದೋಷ ಉಳ್ಳವರಿಗಾಗಿ ಮಾರ್ಗಸೂಚಿಗಳಲ್ಲಿ ತಿಳಿಸಲಾದ ವೈಶಿಷ್ಟ್ಯಗಳನ್ನು ಹೊಂದಿರಬೇಕು ಎಂದು ಕರಡುವಿನಲ್ಲಿ ಹೇಳಲಾಗಿದೆ.

ಸಂಕ್ಷಿಪ್ತ ಸುದ್ದಿ

ಪ್ರಧಾನಿ–ಯುಎಇ ಅಧ್ಯಕ್ಷರ ರೋಡ್ ಶೋ ಇಂದು

ಅಹಮದಾಬಾದ್ (ಪಿಟಿಐ): 'ವೈಬ್ರಂಟ್ ಗುಜರಾತ್' ಜಾಗತಿಕ ಶೃಂಗಸಭೆಗೆ ಆಗಮಿಸಲಿರುವ ಯುಎಇ ಅಧ್ಯಕ್ಷ ಶೇಖ್ ಮೊಹಮದ್ ಬಿನ್ ಜಯೇದ್ ಅಲ್ ನಹ್ಯಾನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಇಲ್ಲಿ ಸರ್ದಾರ್ ವಲ್ಲಭಭಾಯ್ ಪಟೇಲ್ ವಿಮಾನನಿಲ್ದಾಣದಿಂದ ರೋಡ್ ಶೋ ನಡೆಸಲಿದ್ದಾರೆ.

ಪ್ರಧಾನಿ ಮೋದಿ ಸಂಜೆ ಯುಎಇ ಅಧ್ಯಕ್ಷರನ್ನು ಸ್ವಾಗತಿಸುವರು. ಬಳಿಕ, ಅಹಮದಾಬಾದ್ ಮತ್ತು ಗಾಂಧಿನಗರ ನಗರಕ್ಕೆ ಸಂಪರ್ಕ ಕಲ್ಪಿಸುವ ಇಂಡಿಯಾ ಬ್ರಿಡ್ಜ್‌ವರೆಗೂ, ಸುಮಾರು 3 ಕಿ.ಮೀ ದೂರ ರೋಡ್ ಶೋ ನಡೆಯಲಿದೆ ಎಂದು ಅಹಮದಾಬಾದ್ ನಗರದ ಸಂಚಾರ ವಿಭಾಗದ ಡಿಸಿಪಿ ಸಫಿನ್ ಹಸನ್ ಅವರು ತಿಳಿಸಿದ್ದಾರೆ.

ಜನವರಿ 8 ರಿಂದ 3 ದಿನ ಪ್ರಧಾನಿ ಗುಜರಾತ್ ಪ್ರವಾಸ ಕೈಗೊಂಡಿದ್ದು, ಶೃಂಗಸಭೆ ವೇಳೆ ವಿಶ್ವದ ವಿವಿಧ ನಾಯಕರು, ಪ್ರಮುಖ ಜಾಗತಿಕ ಕಂಪನಿಗಳ ಸಿಇಒಗಳ ಜೊತೆಗೆ ದ್ವಿಪಕ್ಷೀಯ ಮಾತುಕತೆ ನಡೆಸುವರು.

ಜಾರ್ಖಂಡ್: ವಿಗ್ರಹಗಳು ಭಗ್ನ

ರಾಂಚಿ (ಪಿಟಿಐ): ದುಷ್ಕರ್ಮಿಗಳು ದೇವಸ್ಥಾನವೊಂದರ ವಿಗ್ರಹಗಳನ್ನು ಭಗ್ನಗೊಳಿಸಿದ್ದು, ಅದನ್ನು ವಿರೋಧಿಸಿ ಸ್ಥಳೀಯರು ಪ್ರತಿಭಟನೆ ನಡೆಸಿದ ಘಟನೆ ಜಾರ್ಖಂಡ್‌ನ ರಾಜಧಾನಿ ರಾಂಚಿಯಲ್ಲಿ ನಡೆದಿದೆ ಎಂದು ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಬರಿಯಾತು ಎಂಬಲ್ಲಿ ಭಾನುವಾರ ರಾತ್ರಿ ಈ ಘಟನೆ ನಡೆದಿದೆ ಎಂದು ಅವರು ಹೇಳಿದ್ದಾರೆ. ದೇವಸ್ಥಾನದ ಒಳಗಗಿನ ಸುಮಾರು ಮೂರರಿಂದ 4 ವಿಗ್ರಹಗಳನ್ನು ಭಗ್ನಗೊಳಿಸಲಾಗಿದೆ ಎಂದು ಎಂದು ಉಪ ವಿಭಾಗಾಧಿಕಾರಿ ಉತ್ಕರ್ಷ್ ಕುಮಾರ್ ತಿಳಿಸಿದ್ದಾರೆ.

ಆರೋಪಿಗಳನ್ನು ಬಂಧಿಸಬೇಕೆಂದು ಒತ್ತಾಯಿಸಿ ಸ್ಥಳೀಯರು ಬರಿಯಾತು ಎಂಬಲ್ಲಿ ರಸ್ತೆಯನ್ನು ಬಂದ್ ಮಾಡಿ ಪ್ರತಿಭಟನೆ ನಡೆಸಿದರು ಎಂದರು.

ಮಣಿಪುರ: ಸಂಪಾದಕರಿಗೆ ಜಾಮೀನು

ಇಂಫಾಲ್(ಪಿಟಿಐ): ಸೂಕ್ಷ್ಮ ವಿವರಗಳನ್ನು ವರದಿಯಲ್ಲಿ ಪ್ರಕಟಿಸಿದ ಆರೋಪದಡಿ ಬಂಧನಕ್ಕೆ ಒಳಗಾಗಿದ್ದ ಸ್ಥಳೀಯ ಪತ್ರಿಕೆಯೊಂದರ ಸಂಪಾದಕರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

'ಹುಯೆನ್ ಲ್ಯಾನ್‌ಪಾವೊ' ಪತ್ರಿಕೆ ಸಂಪಾದಕ ಧನಬೀರ್ ಮೈಬಮ್ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. ಶುಕ್ರವಾರ ಬಂಧಿಸಲಾಗಿದ್ದ ಮೈಬಮ್ ಅವರಿಗೆ ಸ್ಥಳೀಯ ನ್ಯಾಯಾಲಯ ಭಾನುವಾರ ಜಾಮೀನು ನೀಡಿದೆ ಎಂದು ತಿಳಿಸಿದ್ದಾರೆ.

ಜನವರಿ 10 ಅಥವಾ 11ರಂದು ಎರಡನೇ ಸುತ್ತಿನ ಸಭೆ ಸಾಧ್ಯತೆ

ಕಾಂಗ್ರೆಸ್–ಎಎಪಿ 'ಮೈತ್ರಿ' ಮಾತುಕತೆ ಆರಂಭ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಗೆ ಸೀಟು ಹಂಚಿಕೆ ಕುರಿತು 'ಇಂಡಿಯಾ' ಮೈತ್ರಿಕೂಟದ ಪಕ್ಷಗಳಾದ ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಕ್ಷ (ಎಎಪಿ) ಸೋಮವಾರ ಮೊದಲ ಸುತ್ತಿನ ಸಭೆ ನಡೆಸಿದ್ದು, ಒಟ್ಟಾಗಿ ಚುನಾವಣೆ ಎದುರಿಸುವುದಾಗಿ ಹೇಳಿವೆ. ಈ ವಾರಾಂತ್ಯದೊಳಗೆ ಮತ್ತೆ ಸಭೆ ಸೇರಲು ಉಭಯ ಪಕ್ಷಗಳ ನಾಯಕರು ನಿರ್ಧರಿಸಿದ್ದಾರೆ.

ಕಾಂಗ್ರೆಸ್‌ನ 'ರಾಷ್ಟ್ರೀಯ ಮೈತ್ರಿ ಸಮಿತಿ'ಯ ಸದಸ್ಯರಾದ ಮುಕುಲ್ ವಾಸ್ನಿಕ್, ಅಶೋಕ್ ಗೆಹಲೋತ್, ಭೂಪೇಶ್ ಬಘೇಲ್, ಸಲ್ಮಾನ್ ಖುರ್ಷಿದ್, ಮೋಹನ್ ಪ್ರಕಾಶ್, ಪಕ್ಷದ ದೆಹಲಿ ಘಟಕದ ಅಧ್ಯಕ್ಷ ಅರವಿಂದರ್ ಸಿಂಗ್ ಲವ್ಲಿ ಹಾಗೂ ಎಎಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಸಂದೀಪ್ ಪಾಠಕ್, ದೆಹಲಿಯ ಸಚಿವರಾದ ಅತಿಶಿ ಮತ್ತು ಸೌರಭ್ ಭಾರದ್ವಾಜ್ ಅವರು ಸಭೆಯಲ್ಲಿ ಭಾಗಿಯಾಗಿದ್ದರು.


'ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಹಾಗೂ ಪಂಜಾಬ್‌ನ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಗುಜರಾತ್‌ನಲ್ಲಿ ಪ್ರಚಾರದಲ್ಲಿದ್ದಾರೆ. 'ಇಂಡಿಯಾ' ಮೈತ್ರಿಕೂಟದ ಸಭೆಗಳಲ್ಲಿ ಭಾಗವಹಿಸಿದ್ದ ರಾಜ್ಯಸಭಾ ಸದಸ್ಯ ರಾಘವ ಚಡ್ಡಾ ಅವರು ವಿದೇಶ ಪ್ರವಾಸದಲ್ಲಿದ್ದಾರೆ. ಹೀಗಾಗಿ, ಸೀಟು ಹಂಚಿಕೆ ಕುರಿತು ವಿಸ್ತೃತ ಚರ್ಚೆಗಳು ನಡೆದಿಲ್ಲ. ಜನವರಿ 10 ಅಥವಾ 11ರಂದು ಎರಡನೇ ಸುತ್ತಿನ ಸಭೆ ನಡೆಯುವ ಸಾಧ್ಯತೆ ಇದೆ' ಎಂದು ಎಎಪಿ ಮೂಲಗಳು ತಿಳಿಸಿವೆ.

'2019ರ ಲೋಕಸಭಾ ಚುನಾವಣೆಯಲ್ಲಿ ರಾಷ್ಟ್ರ ರಾಜಧಾನಿಯ ಏಳು ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗಿಂತ ಎಎಪಿ ಹೆಚ್ಚು ಮತಗಳನ್ನು ಪಡೆದಿತ್ತು. ಅಲ್ಲದೆ, ಪಕ್ಷದ ಸಂಘಟನೆ ಬಲವಾಗಿದೆ. ಹೀಗಾಗಿ, ಪಕ್ಷಕ್ಕೆ ನಾಲ್ಕು ಕ್ಷೇತ್ರಗಳನ್ನು ಬಿಟ್ಟುಕೊಡಬೇಕು' ಎಂದು ಎಎಪಿ ಪಟ್ಟು ಹಿಡಿದಿದೆ. ಇನ್ನೊಂದೆಡೆ, ಎಎಪಿ ಜತೆಗಿನ ಮೈತ್ರಿಗೆ ಕಾಂಗ್ರೆಸ್‌ನ ದೆಹಲಿ ಹಾಗೂ ಪಂಜಾಬ್ ಘಟಕಗಳು ಒಲವು ಹೊಂದಿಲ್ಲ. ಎರಡೂ ರಾಜ್ಯಗಳಲ್ಲಿ ಹೊಂದಾಣಿಕೆ ಮಾಡಿಕೊಂಡು ಮೈತ್ರಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಯಲು ಉಭಯ ಪಕ್ಷಗಳ ರಾಷ್ಟ್ರೀಯ ನಾಯಕರು ಉತ್ಸುಕರಾಗಿದ್ದಾರೆ. ಇದರೊಂದಿಗೆ, ಗುಜರಾತ್, ಗೋವಾ ಮತ್ತಿತರ ರಾಜ್ಯಗಳಲ್ಲೂ ಸೀಟು ಹೊಂದಾಣಿಕೆ ಆಗಬೇಕು ಎಂಬುದು ಎಎಪಿ ನಾಯಕರ ಅಪೇಕ್ಷೆ.

ಎರಡೂವರೆ ಗಂಟೆಗಳ ಸಭೆಯ ಬಳಿಕ ಮುಕುಲ್ ವಾಸ್ನಿಕ್, 'ನಾವು ಒಟ್ಟಾಗಿ ಚುನಾವಣೆ ಎದುರಿಸುತ್ತೇವೆ ಹಾಗೂ ಬಿಜೆಪಿಯನ್ನು ಸೋಲಿಸುತ್ತೇವೆ' ಎಂದರು.

ಬಿಹಾರದಲ್ಲಿ ಸೀಟು ಹಂಚಿಕೆ ಸಂಬಂಧ ಆರ್‌ಜೆಡಿ ನಾಯಕರ ಜತೆಗೆ ಕಾಂಗ್ರೆಸ್ ನಾಯಕರು ಭಾನುವಾರ ಮಾತುಕತೆ ನಡೆಸಿದ್ದರು. ಪಕ್ಷಕ್ಕೆ 10 ಕ್ಷೇತ್ರಗಳನ್ನು ಬಿಟ್ಟುಕೊಡಬೇಕು ಎಂಬುದು ಕಾಂಗ್ರೆಸ್‌ನ ಬೇಡಿಕೆ. ಆದರೆ, ತಲಾ 17 ಕ್ಷೇತ್ರಗಳಲ್ಲಿ ತಮ್ಮ ಪಕ್ಷಗಳ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿ ಕಾಂಗ್ರೆಸ್‌ಗೆ ಐದು ಕ್ಷೇತ್ರಗಳನ್ನು ಬಿಟ್ಟುಕೊಡಲು ಜೆಡಿಯು ಹಾಗೂ ಆರ್‌ಜೆಡಿ ನಾಯಕರು ಒಲವು ಹೊಂದಿದ್ದಾರೆ. ಶಿವಸೇನಾ (ಯುಬಿಟಿ) ಹಾಗೂ ಎನ್‌ಸಿಪಿ (ಶರದ್ ಪವಾರ್ ಬಣ) ನಾಯಕರೊಂದಿಗೆ ಕಾಂಗ್ರೆಸ್‌ನ ಸಮಿತಿ ಮಂಗಳವಾರ ಸಭೆ ನಡೆಸಲಿದೆ. ಮಹಾರಾಷ್ಟ್ರದ ಹಿರಿಯ ಕಾಂಗ್ರೆಸ್ ನಾಯಕರು ಸಭೆಯಲ್ಲಿ ಭಾಗವಹಿಸಲಿದ್ದಾರೆ.

ದೆಹಲಿ ಚುನಾವಣೆ: 2019ರ ಮತ ಪ್ರಮಾಣ



ರಣಜಿ ಟ್ರೋಫಿ: ಪಂಜಾಬ್ ವಿರುದ್ಧ ಮಯಂಕ್ ಅಗರ್‌ವಾಲ್ ಬಳಗದ ಶುಭಾರಂಭ

ಕರ್ನಾಟಕ ತಂಡಕ್ಕೆ ನಿರೀಕ್ಷಿತ ಜಯ

• ಸತೀಶ ಬಿ.

ಹುಬ್ಬಳ್ಳಿ: ಕೊನೆಯ ದಿನ ಪಂಜಾಬ್ ತಂಡಕ್ಕೆ ಇನಿಂಗ್ಸ್ ಸೋಲು ತಪ್ಪಿಸಿಕೊಂಡಿದ್ದೊಂದೇ ಸಮಾಧಾನವಾಯಿತು. ಕರ್ನಾಟಕ ತಂಡ ರಣಜಿ ಟ್ರೋಫಿ ಪ್ರಸಕ್ತ ಋತುವಿನ ಮೊದಲ ಪಂದ್ಯವನ್ನು ಪಂಜಾಬ್ ವಿರುದ್ಧ ಸೋಮವಾರ ಏಳು ವಿಕೆಟ್‌ಗಳಿಂದ ಗೆದ್ದುಕೊಂಡು ಶುಭಾರಂಭ ಮಾಡಿತು.

ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ನಾಲ್ಕನೇ ದಿನವಾದ ಸೋಮವಾರ ಪಂಜಾಬ್ ತಂಡ ಲಂಚ್ ನಂತರ ಎರಡನೇ ಇನಿಂಗ್ಸ್‌ನಲ್ಲಿ 413 ರನ್‌ಗಳಿಗೆ ಆಲೌಟ್ ಆಯಿತು. ಮೊದಲ ಇನಿಂಗ್ಸ್‌ನಲ್ಲಿ 362 ರನ್‌ಗಳ ಭಾರಿ ಮುನ್ನಡೆ ಪಡೆದಿದ್ದ ಮಯಂಕ್ ಬಳಗ ಗೆಲುವಿಗೆ ಬೇಕಾಗಿದ್ದ 52 ರನ್‌ಗಳ ಅಲ್ಪ ಗುರಿಯನ್ನು 3 ವಿಕೆಟ್ ಕಳೆದುಕೊಂಡು ಮುಟ್ಟಿತು.

ಕರ್ನಾಟಕ ಮುಂದಿನ ಪಂದ್ಯವನ್ನು ಗುಜರಾತ್ ವಿರುದ್ಧ ಅಹಮದಾಬಾದಿನಲ್ಲಿ ಜನವರಿ 12 ರಿಂದ ಆಡಲಿದೆ.

ನಾಯಕ ಮಯಂಕ್ ಅಗರ್‌ವಾಲ್ (0) ಎರಡನೇ ಇನಿಂಗ್ಸ್‌ನಲ್ಲಿಯೂ ಖಾತೆ ತೆರೆಯಲಿಲ್ಲ. ಉಪನಾಯಕ ನಿಕಿನ್ ಜೋಸ್ ಕೂಡ ಮತ್ತೊಮ್ಮೆ ವಿಫಲರಾಗಿ ಎಡಗೈ ಸ್ಪಿನ್ನರ್ ಪ್ರೇರಿತ್ ದತ್ತಾ ಬೌಲಿಂಗ್‌ನಲ್ಲಿ ನಿರ್ಗಮಿಸಿದರು. ಈ ಹಂತದಲ್ಲಿ ಆರ್.ಸಮರ್ಥ್ (21) ಮತ್ತು ಎಸ್.ಶರತ್ (ಔಟಾಗದೇ 21) ಕುಸಿತ ತಡೆದರು. ಶರತ್ ಶ್ರೀನಿವಾಸ್ ಜೊತೆಗೂಡಿ ಮನೀಷ್ ಪಾಂಡೆ 17ನೇ ಓವರ್‌ನಲ್ಲಿ ಗೆಲುವಿನ ವಿಧಿ ಪೂರೈಸಿದರು.

ಮೊದಲ ಇನಿಂಗ್ಸ್‌ನಲ್ಲಿ 193 ರನ್ ಗಳಿಸಿದ್ದ ಬ್ಯಾಟರ್ ದೇವದತ್ತ ಪಡಿಕ್ಕಲ್ ಹೊಟ್ಟೆ ಕೆಟ್ಟಿದ್ದ ಕಾರಣ ಎರಡನೇ ಇನಿಂಗ್ಸ್‌ನಲ್ಲಿ ಬ್ಯಾಟಿಂಗ್ ಮಾಡಲಿಲ್ಲ. ಅವರು ಫೀಲ್ಡಿಂಗ್‌ಗೂ ಬಂದಿರಲಿಲ್ಲ.

ಇದಕ್ಕೂ ಮುನ್ನ 3 ವಿಕೆಟ್‌ಗೆ 238 ರನ್‌ಗಳಿಂದ ಬೆಳಿಗ್ಗೆ ಆಟ ಮುಂದುವರಿಸಿದ ಪಂಜಾಬ್ ತಂಡ ಕರ್ನಾಟಕ ಸ್ಪಿನ್ನರ್‌ಗಳ ಶಿಸ್ತಿನ ದಾಳಿಗೆ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು.


ಮನದೀಪ್ ಸಿಂಗ್ (27; 96ಎ, 4X2) ಅವರನ್ನು ಎಡಗೈ ಸ್ಪಿನ್ನರ್ ರೋಹಿತ್ ಕುಮಾರ್ ಬೌಲ್ಡ್ ಮಾಡಿದರು. ನಂತರ ಇನ್ನೊಬ್ಬ ಸ್ಪಿನ್ನರ್ ಶುಭಾಂಗ್ ಹೆಗ್ಡೆ ಪೆಟ್ಟು ನೀಡಿದರು. ನೇಹಲ್ ವಧೇರಾ (26; 79ಎ, 4X4) ಅವರನ್ನು ತಮ್ಮದೇ ಬೌಲಿಂಗ್‌ನಲ್ಲಿ ಕ್ಯಾಚ್ ಹಿಡಿದ ಶುಭಾಂಗ್, ನಂತರ ಪ್ರೇರಿತ್ ದತ್ತಾ ಅವರನ್ನು ಎಲ್‌ಬಿ ಬಲೆಗೆ ಕೆಡವಿದರು. ಅನುಭವಿ ಬ್ಯಾಟರ್ ಗೀತಾಂಶ್ ಖೇರಾ (43, 81 ಎಸೆತ) ಮತ್ತು ಮಯಂಕ್ ಮಾರ್ಕಂಡೆ (36) ಏಳನೇ ವಿಕೆಟ್ ಜತೆಯಾಟದಲ್ಲಿ 61 ರನ್ ಸೇರಿಸಿ ಆತಿಥೇಯ ತಂಡಕ್ಕೆ ಕೆಲಕಾಲ ಪ್ರತಿರೋಧ ಒಡ್ಡಿದರು. ರೋಹಿತ್‌ಕುಮಾರ್ ಈ ಜೋಡಿಯನ್ನು ಬೇರ್ಪಡಿಸಿದರು.

ಅರ್ಷದೀಪ್ ಸಿಂಗ್, ಎರಡು ಸಿಕ್ಸರ್ ಸಹಿತ 14 ರನ್ ಗಳಿಸಿ ತಂಡವನ್ನು ಇನಿಂಗ್ಸ್ ಸೋಲಿನಿಂದ ಪಾರು ಮಾಡಿದರು. ಅವರು ವೇಗವಾಗಿ 36 (34ಎ, 4X3, 6X3) ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ರೋಹಿತ್ ಕುಮಾರ್ ಎಸೆತದಲ್ಲಿ ಮುನ್ನುಗ್ಗಿ ಹೊಡೆಯಲು ಯತ್ನಿಸಿದ ಮಯಂಕ್ ಮಾರ್ಕಂಡೆ (36; 67ಎ, 4x6) ಸ್ಟಂಪ್ಡ್ ಆಗಿ ಕೊನೆಯವರಾಗಿ ನಿರ್ಗಮಿಸಿದರು.



ಪಂಜಾಬ್ ತಂಡವನ್ನು ಆಲೌಟ್ ಮಾಡಿದ ಕರ್ನಾಟಕದ ಆಟಗಾರರ ಸಂಭ್ರಮ ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ತಂಡಕ್ಕೆ ವಾಪಸಾದ ಪ್ರಸಿದ್ಧ ಕೃಷ್ಣ



ಬೆಂಗಳೂರು: ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಸರಣಿಯಲ್ಲಿ ಭಾರತ ತಂಡದಲ್ಲಿದ್ದ ವೇಗದ ಬೌಲರ್ ಪ್ರಸಿದ್ಧ ಕೃಷ್ಣ ಕರ್ನಾಟಕ ರಣಜಿ ತಂಡಕ್ಕೆ ಮರಳಿದ್ದಾರೆ.

ಇದೇ 12ರಿಂದ 15ರವರೆಗೆ ಅಹಮದಾಬಾದ್‌ನಲ್ಲಿ ಗುಜರಾತ್ ವಿರುದ್ಧ ನಡೆಯುವ ರಣಜಿ ಟೂರ್ನಿಯ ಪಂದ್ಯಕ್ಕೆ ಕರ್ನಾಟಕ ತಂಡವನ್ನು ಕೆಎಸ್‌ಸಿಎ ಪ್ರಕಟಿಸಿದ್ದು, ಒಂದು ಬದಲಾವಣೆ ಮಾತ್ರ ಮಾಡಿದೆ.

ಪಂಜಾಬ್ ವಿರುದ್ಧದ ಮೊದಲ ಪಂದ್ಯದಲ್ಲಿ ಕರ್ನಾಟಕ ತಂಡದಲ್ಲಿ ಆಡಿದ್ದ ವೇಗದ ಬೌಲರ್ ವಿದ್ವತ್ ಕಾವೇರಪ್ಪ ಅವರು ಇಂಗ್ಲೆಂಡ್ ಲಯನ್ಸ್ ವಿರುದ್ಧ ಭಾರತ 'ಎ' ತಂಡಕ್ಕೆ ಆಯ್ಕೆಯಾಗಿದ್ದು, ಈ ಪಂದ್ಯಕ್ಕೆ ಲಭ್ಯರಿಲ್ಲ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಪಂಜಾಬ್ 152 (46.5 ಓವರ್) ಕರ್ನಾಟಕ: 8ಕ್ಕೆ 514 ಡಿಕ್ಲೇರ್ (140 ಓವರ್); ಎರಡನೇ ಇನಿಂಗ್ಸ್: ಪಂಜಾಬ್ 413 (114.4 ಓವರ್) (ಭಾನುವಾರ; 68 ಓವರ್‌ಗಳಲ್ಲಿ 3ಕ್ಕೆ 238)

ಮನದೀಪ್ ಬಿ ರೋಹಿತ್ 27 (96ಎ, 4X2)
ನೇಹಲ್ ಸಿ ಮತ್ತು ಬಿ ಶುಭಾಂಗ್ 26 (79ಎ, 4X2)
ಗೀತಾಂಶ್ ಬಿ ರೋಹಿತ್ 43 (81ಎ, 4X6)
ಪ್ರೇರಿತ್ ಎಲ್‌ಬಿಡಬ್ಲು ಶುಭಾಂಗ್ 0 (5ಎ)
ಮಾರ್ಖಂಡೆ ಸ್ಟಂಪ್ ಶರತ್ ಬಿ ರೋಹಿತ್ 36 (67ಎ, 4X6)
ಸಿದ್ಧಾರ್ಥ್ ಸಿ ಶರತ್ ಬಿ ವಿದ್ವತ್ 0 (6ಎ)
ಅರ್ಷದೀಪ್ ಸಿ ಮಯಂಕ್ ಬಿ ವೈಶಾಕ್ 36 (34ಎ, 4X3, 6X3)
ಬಲ್ತೇಜ್ ಔಟಾಗದೆ 22 (10ಎ, 4X2, 6X2)
ಇತರೆ: 12 (ಬೈ1, ಲೆಬ್‌ಬೈ 8, ನೋಬಾಲ್ 3)
ವಿಕೆಟ್ ಪತನ: 4–268 (ಮನದೀಪ್ ಸಿಂಗ್, 80.2), 5–273 (ನೇಹಲ್ ವಧೇರಾ, 81.4), 6–285 (ಪ್ರೇರಿತ್ ದತ್ತಾ, 83.6), 7–346 (ಗೀತಾಂಶ್ ಖೇರಾ, 104.1), 8–347 (ಸಿದ್ಧಾರ್ಥ್ ಕೌಲ್, 105.2), 9–389 (ಅರ್ಷದೀಪ್ ಸಿಂಗ್, 11.6), 10–413 (ಮಯಂಕ್ ಮಾರ್ಕಂಡೆ, 114.4)
ಬೌಲಿಂಗ್: ವಿದ್ವತ್ ಕಾವೇರಪ್ಪ 24–3–59–2, ವಿ.ಕೌಶಿಕ್ 20–6–45–0, ವಿ.ವೈಶಾಕ್ 21–3–93–1, ರೋಹಿತ್‌ಕುಮಾರ್ 22.4–3–101–3, ಶುಭಾಂಗ್ ಹೆಗ್ಡೆ 18–1–89–3, ಆರ್. ಸಮರ್ಥ್ 9–3–17–1

ಕರ್ನಾಟಕ 3ಕ್ಕೆ 52 (17 ಓವರ್)
ಸಮರ್ಥ್ ಸಿ ಪ್ರಭಸಿಮ್ರನ್ ಬಿ ಪ್ರೇರಿತ್ 21 (38ಎ, 4x4)
ಮಯಂಕ್ ಸಿ ನಮನ್ ಬಿ ಬಲ್ತೇಜ್ 0 (1ಎ)
ನಿಕಿನ್ ಸಿ ನೇಹಲ್ ಬಿ ಪ್ರೇರಿತ್ 0 (7ಎ)
ಶರತ್ ಔಟಾಗದೆ 21 (47ಎ, 4X1, 6X1)
ಮನೀಷ್ ಔಟಾಗದೆ 10 (9ಎ, 4X2)
ಇತರೆ: 0
ವಿಕೆಟ್ ಪತನ: 1–8 (ಮಯಂಕ್ ಅಗರ್‌ವಾಲ್, 1.1), 2–9 (ನಿಕಿನ್ ಜೋಸ್, 2.3), 3–31 (ಆರ್. ಸಮರ್ಥ್, 13.5)
ಬೌಲಿಂಗ್: ಅರ್ಷದೀಪ್ ಸಿಂಗ್ 1–0–8–0, ಬಲ್ತೇಜ್ ಸಿಂಗ್ 4–2–12–1, ಪ್ರೇರಿತ್ ದತ್ತಾ 7–3–10–2, ಅಭಿಷೇಕ್ ಶರ್ಮಾ 1–0–2–0, ನಮನ್ ಧೀರ್ 4–0–20–0
ಪಂದ್ಯಶ್ರೇಷ್ಠ: ದೇವದತ್ತ ಪಡಿಕ್ಕಲ್

ಫಲಿತಾಂಶ: ಕರ್ನಾಟಕಕ್ಕೆ 7 ವಿಕೆಟ್ ಜಯ

ರಣಜಿ: ರಿಯಾನ್ 2ನೇ ವೇಗದ ಶತಕ



ಪಟ್ನಾ (ಪಿಟಿಐ): ಪ್ರಸಕ್ತ ಸಾಲಿನ ರಣಜಿ ಟ್ರೋಫಿ ಟೂರ್ನಿಯ ಪಂದ್ಯದಲ್ಲಿ ಅಸ್ಸಾಂ ತಂಡದ ನಾಯಕ ರಿಯಾನ್ ಪರಾಗ್ ಎರಡನೇ ಅತಿ ವೇಗದ ಶತಕ ದಾಖಲಿಸಿದರು.

ಪರಾಗ್ 56 ಎಸೆತಗಳಲ್ಲಿ ಶತಕ ಗಳಿಸಿದರು. ಈ ಪಂದ್ಯದಲ್ಲಿ ಒಟ್ಟಾರೆ 87 ಎಸೆತಗಳಲ್ಲಿ 155 (6x12, 4X11) ರನ್ ಗಳಿಸಿದರು.

ರಣಜಿ ಕ್ರಿಕೆಟ್‌ನಲ್ಲಿ ವೇಗದ ಶತಕ ಗಳಿಸಿದ ದಾಖಲೆ ರಿಷಭ್ ಪಂತ್ ಹೆಸರಿನಲ್ಲಿದೆ.

2016ರಲ್ಲಿ ಜಾರ್ಖಂಡ್ ವಿರುದ್ಧದ ಪಂದ್ಯದಲ್ಲಿ ದೆಹಲಿ ತಂಡದಲ್ಲಿದ್ದ ಪಂತ್ 48 ಎಸೆತಗಳಲ್ಲಿ ಶತಕ ಬಾರಿಸಿದ್ದರು.

ಪರಾಗ್ ಶತಕದ ಹೊರತಾಗಿಯೂ ಅಸ್ಸಾಂ ತಂಡವು ಛತ್ತೀಸಗಢ ವಿರುದ್ಧ ಹತ್ತು ವಿಕೆಟ್‌ಗಳಿಂದ ಸೋತಿತು.

'ತವರಿನಲ್ಲಿ ಗೆಲುವು ಹೆಮ್ಮೆಯ ಕ್ಷಣ'

ಹುಬ್ಬಳ್ಳಿ: 'ತವರು ನೆಲದಲ್ಲಿ ತಂಡದ ಗೆಲುವಿಗೆ ಕಾಣಿಕೆ ನೀಡಿದ್ದು ಹೆಮ್ಮೆಯ ಕ್ಷಣ. ಹಿರಿಯ ಆಟಗಾರರ ಮಾರ್ಗದರ್ಶನದಿಂದ ಉತ್ತಮ ಪ್ರದರ್ಶನ ನೀಡಲು ಸಾಧ್ಯವಾಯಿತು'

ಇದು ರಣಜಿ ಟೂರ್ನಿಯ ಪಂದ್ಯದಲ್ಲಿ ಕರ್ನಾಟಕದ ಪರ 4 ವಿಕೆಟ್ ಪಡೆದ ಎಡಗೈ ಸ್ಪಿನ್ನರ್ ಎ.ಸಿ. ರೋಹಿತ್‌ಕುಮಾರ್ ಅವರ ಮಾತು. ಇದು ಅವರಿಗೆ ಪದಾರ್ಪಣೆ ಪಂದ್ಯವಾಗಿತ್ತು.

ಸೂಕ್ತ ನಡೆಯೇ, ಹಿಂಜರಿಕೆಯೇ?

ಟಿ20 ತಂಡಕ್ಕೆ ಮರಳಿದ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ಒಂದು ಹೆಜ್ಜೆ ಮುಂದಿಡುವಾಗ, ಭಾರತದ ಕ್ರಿಕೆಟ್ ಆಯ್ಕೆಗಾರರು ಎರಡು ಹೆಜ್ಜೆ ಹಿಂದೆಯಿಟ್ಟು ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ಕಾಣುತ್ತಿದೆ. ಅಫ್ಗಾನಿಸ್ತಾನ ವಿರುದ್ಧ ಮೂರು ಟಿ20 ಪಂದ್ಯಗಳ ಸರಣಿಗೆ ಅನುಭವಿಗಳಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರಿಗೆ ಅವಕಾಶ ಮಾಡಿರುವುದು ಇತ್ತೀಚಿನ ಒಂದು ನಿದರ್ಶನ.


2002ರ ನವೆಂಬರ್‌ನಲ್ಲಿ ಟಿ20 ವಿಶ್ವಕಪ್ ಸೆಮಿಫೈನಲ್‌ನಲ್ಲಿ ಭಾರತ ಮುಖಭಂಗ ಅನುಭವಿಸಿದ ನಂತರ ಸುಮಾರು 14 ತಿಂಗಳ ಕಾಲ ಇವರಿಬ್ಬರು ತಂಡದಿಂದ ಹೊರಗಿದ್ದರು. ನಂತರ ಹಾರ್ದಿಕ್ ಪಾಂಡ್ಯ ಅವರಿಗೆ ನಾಯಕತ್ವ ವಹಿಸಲಾಯಿತು. ಅವರು ಗಾಯಾಳಾದಾಗ, ಸೂರ್ಯಕುಮಾರ್ ಯಾದವ್ ಅವರಿಗೆ (ತವರಿನಲ್ಲಿ ಆಸ್ಟ್ರೇಲಿಯಾ ವಿರುದ್ಧ ಮತ್ತು ಹೊರಗಡೆ ದಕ್ಷಿಣ ಆಫ್ರಿಕಾ ವಿರುದ್ಧ) ತಂಡದ ನೇತೃತ್ವ ವಹಿಸಲಾಯಿತು.

ಈಗ ಹಾರ್ದಿಕ್ ಮತ್ತು ಸೂರ್ಯ ಅವರಿಬ್ಬರೂ ಗಾಯಾಳಾಗಿ ತಂಡಕ್ಕೆ ಲಭ್ಯರಿಲ್ಲ. ಋತುರಾಜ್ ಗಾಯಕವಾಡ ಅವರಿಗೆ ಬೆರಳಿನ ಗಾಯವಾಗಿದೆ. ಆದರೆ ಇತರ ಆಟಗಾರರಿದ್ದರೂ, ಈ ಇಬ್ಬರು ಏಕದಿನ ಮಾದರಿಯ ಅನುಭವಿಗಳನ್ನು ತಂಡಕ್ಕೆ ಮರಳಿ ಕರೆತರಲಾಗಿದೆ. ರೋಹಿತ್ ಮತ್ತು ಕೊಹ್ಲಿ ಅವರಿಗೂ ಕೊನೆಯದಾಗಿ ಆಡಬೇಕೆಂಬ ಬಯಕೆಯಿರುವುದು ಸಹಜ. ಅಜಿತ್ ಅಗರಕರ್ ನೇತೃತ್ವದ ಆಯ್ಕೆ ಸಮಿತಿ ಅವರಿಗೆ ಅವಕಾಶ ನೀಡಿದೆ. ಈ ಸರಣಿಯಲ್ಲಿ ಮತ್ತು ಐಪಿಎಲ್‌ನಲ್ಲಿ ಗಳಿಸುವ ಯಶಸ್ಸಿನ ಮೇಲೆ ವಿಶ್ವಕಪ್ ತಂಡಕ್ಕೆ ಅವರ ಆಯ್ಕೆ ಅವಲಂಬಿಸಿದೆ. ಆದರೆ ಈ ಆಯ್ಕೆಯಿಂದ ಅವರಿಗೆ ಬಾಗಿಲು ಮುಚ್ಚಿಲ್ಲ ಎಂಬ ಸಂದೇಶವಂತೂ ರವಾನೆಯಾಗಿದೆ.

ಕಳೆದ ಟಿ20 ವಿಶ್ವಕಪ್ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ಎದುರು ಸೋಲಿನ ನಂತರ, ಭಾರತದ ಅಗ್ರ ಕ್ರಮಾಂಕದ ಬ್ಯಾಟಿಂಗ್ ವೈಖರಿ ಬದಲಾಗಬೇಕೆಂದು ನಾಯಕ ರೋಹಿತ್ ಶರ್ಮಾ ಸ್ಪಷ್ಟಮಾತುಗಳಲ್ಲಿ ಹೇಳಿದ್ದರು. ನಿರ್ಭೀತ ಆಟ ಅಗತ್ಯವಿರುವ ಮಾದರಿಯಲ್ಲಿ ಭಾರತ ಸಾಂಪ್ರದಾಯಿಕ ರೀತಿಯ ಆಡುತ್ತಿದೆ ಎಂಬುದು ಅವರ ಇಂಗಿತವಾಗಿತ್ತು. ಟೆಸ್ಟ್ ಕ್ರಿಕೆಟ್‌ನಲ್ಲೂ ಆಕ್ರಮಣಕಾರಿ ಆಟ ಕಾಣುತ್ತಿರುವಾಗ ಭಾರತ ಟಿ20 ಮಾದರಿಯಲ್ಲಿ ಇತರ ತಂಡಗಳಿಗಿಂತ ಹಿಂದುಳಿದಿದೆ ಎಂಬ ಭಾವನೆ ಮೂಡಿತ್ತು. ಆದರೆ ರೋಹಿತ್ ಏಕದಿನ ವಿಶ್ವಕಪ್‌ನಲ್ಲಿ 126 ರನ್ ಸರಾಸರಿಯಲ್ಲಿ ರನ್ ಸಂಗ್ರಹಿಸಿದ್ದರು. ಮ್ಯಾಕ್ಸ್‌ವೆಲ್ (150.37), ಕ್ಲಾಸೆನ್ (133) ಮತ್ತು ಟ್ರಾವಿಸ್ ಹೆಡ್ (127) ಮಾತ್ರ ಅವರಿಗಿಂತ ಮುಂದಿದ್ದರು. ಅವರು ಟಿ20ಗೂ ಸಲ್ಲುವ ಆಟಗಾರ ಎಂಬ ಭಾವನೆ ಮೂಡಿತು. ಆದರೆ ಕೊಹ್ಲಿ ವಿಷಯದಲ್ಲಿ ಇದನ್ನು ಒಪ್ಪುವಂತಿದೆಯೇ?



ರೋಹಿತ್ ಶರ್ಮಾ



ವಿರಾಟ್ ಕೊಹ್ಲಿ

ವಿಶ್ವಕಪ್‌ನಲ್ಲಿ ರೋಹಿತ್ ಅವರ ಬಿರುಸಿನ ಆಟದಿಂದ ಕೊಹ್ಲಿ ಅವರಿಗೆ ಆಟಕ್ಕೆ ಹೊಂದಿಕೊಳ್ಳಲು ಅವಕಾಶ ವಿರುತಿತ್ತು. ಆದರೆ ಪ್ರಸ್ತುತ ಟಿ20 ಆಟದಲ್ಲಿ ಇಂಥ ಅವಕಾಶ ಕಡಿಮೆ. ಚುಟುಕು ಕ್ರಿಕೆಟ್ ಮಾದರಿಯಲ್ಲಿ ಅವರ ಅಂಕಿಅಂಶ ಉತ್ತಮವಾಗಿದೆ. ಆದರೆ ಹೆಚ್ಚಿನ ರನ್‌ಗಳು ಈಗಿನ ಆಟದ ರೀತಿ ಬಂದಿಲ್ಲ. ಮ್ಯಾಕ್ಸ್‌ವೆಲ್, ಸೂರ್ಯಕುಮಾರ್ ರೀತಿ ಅವರು 'ಪವರ್ ಹಿಟ್ಟರ್' ಅಲ್ಲ. ಕೆರಿಬಿಯನ್‌ನ ನಿಧಾನಗತಿಯ ಪಿಚ್‌ಗಳೂ ಅವರ ಆಟಕ್ಕೆ ಹೊಂದುವುದೂ ಸುಲಭವಲ್ಲ.

ಭಾರತ ಟಿ20 ವಿಶ್ವಕಪ್ ಗೆಲ್ಲಬಹುದು ಅಥವಾ ಗೆಲ್ಲದಿರಬಹುದು. ಆದರೆ ಆಯ್ಕೆಗಾರರ ಹೆಜ್ಜೆ ಹಿಂಜರಿಯಕೆಯದ್ದೇ ಆಗಿದೆ. ಸೂಪರ್‌ಸ್ಟಾರ್ ಆಟಗಾರರಿಲ್ಲದೇ ತಂಡ ರೂಪಿಸುವುದು ಕಷ್ಟ ಎಂಬ ಮನೋಭಾವ ಇರಬಹುದು. ಆದರೆ ಐಪಿಎಲ್, ವಾಣಿಜ್ಯ ಹಿತಾಸಕ್ತಿ ಗಣನೆಗೆ ತೆಗೆದುಕೊಂಡರೆ, ಈ ತಾರಾ ವರ್ಚಸ್ಸಿನ ಆಟಗಾರರನ್ನು ಕೈಬಿಡುವ ನಿರ್ಧಾರವೂ ಸುಲಭವೂ ಅಲ್ಲ ಎಂಬುದು ಆಯ್ಕೆಗಾರರಿಗೆ ಗೊತ್ತಿಲ್ಲದ ವಿಷಯವೇನಲ್ಲ.

ಬೆಂಗಳೂರು ಬುಲ್ಸ್‌ಗೆ ರೋಚಕ ಜಯ

ಮುಂಬೈ: ಸಚಿನ್ ನರ್ವಾಲ್ ಅವರ ರೈಡಿಂಗ್ ಮತ್ತು ಸುರ್ಜಿತ್ ಸಿಂಗ್ ಅವರ ಕ್ಯಾಚಿಂಗ್ ಬಲದಿಂದ ಬೆಂಗಳೂರು ಬುಲ್ಸ್ ತಂಡ, ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಸೋಮವಾರ ಪಟ್ನಾ ಪೈರೇಟ್ಸ್ ವಿರುದ್ಧ ರೋಚಕ ಗೆಲುವು ಸಾಧಿಸಿತು.


ಸರ್ದಾರ್ ವಲ್ಲಭಭಾಯಿ ಪಟೇಲ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 35–33 ರಿಂದ ಪಟ್ನಾ ವಿರುದ್ಧ ಗೆದ್ದಿತು. ತಂಡವು ರೈಡಿಂಗ್‌ನಿಂದ 15 ಮತ್ತು ಟ್ಯಾಕಲ್‌ನಿಂದ 16 ಪಾಯಿಂಟ್ಸ್ ಸಂಗ್ರಹಿಸಿತು. ಪಂದ್ಯದ ಮೊದಲಾರ್ಧದಲ್ಲಿ ಪಟ್ನಾ ತಂಡವು 20–12ರಿಂದ ಮುನ್ನಡೆ ಸಾಧಿಸಿತ್ತು. ಆದರೆ, ವಿರಾಮದ ಬಳಿಕ ಚುರುಕಾದ ಆಟ ಪ್ರದರ್ಶಿಸಿದ ಬೆಂಗಳೂರು ತಂಡ ಮುನ್ನಡೆ ಸಾಧಿಸಿತು.

ರೇಡರ್ ಸಚಿನ್ ನರ್ವಾಲ್, ಡಿಫೆಂಡರ್ ಸುರ್ಜಿತ್ ಸಿಂಗ್ ಕ್ರಮವಾಗಿ 9 ಮತ್ತು 8 ಅಂಕ ಗಳಿಸಿದರು. ಇವರಿಗೆ ಸಹ ಆಟಗಾರರಾದ ರಣ ಸಿಂಗ್, ಸುಶೀಲ್ ತಲಾ 4 ಅಂಕ ಗಳಿಸಿ ಬೆಂಬಲ ನೀಡಿದರು.

ಟೂರ್ನಿಯಲ್ಲಿ ಬೆಂಗಳೂರು ತಂಡವು ಒಟ್ಟು ಹನ್ನೆರಡು ಪಂದ್ಯಗಳನ್ನು ಆಡಿ ಐದರಲ್ಲಿ ಜಯಿಸಿದೆ. 31 ಪಾಯಿಂಟ್‌ಗಳೊಂದಿಗೆ ಏಳನೇ ಸ್ಥಾನದಲ್ಲಿದೆ. ಒಟ್ಟು 11 ಪಂದ್ಯಗಳನ್ನು ಆಡಿರುವ ಪಟ್ನಾ ಪೈರೇಟ್ಸ್ ತಂಡ, ಐದರಲ್ಲಿ ಗೆದ್ದು ಎಂಟನೇ ಸ್ಥಾನದಲ್ಲಿದೆ.

ದಬಾಂಗ್ ಡೆಲ್ಲಿಗೆ ಗೆಲುವು: ಮತ್ತೊಂದು ಪಂದ್ಯದಲ್ಲಿ ಆತಿಥೇಯ ಯು ಮುಂಬಾ ತಂಡವು 34–40 ರಿಂದ ದಬಾಂಗ್ ಡೆಲ್ಲಿ ವಿರುದ್ಧ ಪರಾಭವಗೊಂಡಿತು. ದಬಾಂಗ್ ಪರ ರೈಡರ್ ಅಶು ಮಲ್ಲಿಕ್ 13 ಅಂಕದೊಂದಿಗೆ 'ಸೂಪರ್ ಟೆನ್' ಸಾಧನೆ ಮಾಡಿದರು. ಆಲ್‌ರೌಂಡ್ ಆಟಗಾರ ಅಮೀರ್ ಮೊಹಮ್ಮದ್ ಜಫರ್ ದಾನೇಶ್ (11) ಮತ್ತು ರೈಡರ್ ಗುಮಾನ್ ಸಿಂಗ್ (9) ಮುಂಬೈ ಪರ ಹೆಚ್ಚು ಅಂಕ ತಂದುಕೊಟ್ಟರು.

ಇಂದಿನ ಪಂದ್ಯ
ತೆಲುಗು ಟೈಟನ್ಸ್–ಬೆಂಗಾಲ್ ವಾರಿಯರ್ಸ್ (ರಾತ್ರಿ 8)



ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ಮತ್ತು ಪಟ್ನಾ ಪೈರೇಟ್ಸ್ ತಂಡಗಳ ನಡುವೆ ಹಣಾಹಣಿ

ಕೂಚ್ ಬಿಹಾರ್ ಟ್ರೋಫಿ: ಕರ್ನಾಟಕ ಫೈನಲ್‌ಗೆ

ಬೆಳಗಾವಿ: ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ತೋರಿದ ಆತಿಥೇಯ ಕರ್ನಾಟಕ ತಂಡ, ಇಲ್ಲಿ ನಡೆದ 19 ವರ್ಷದೊಳಗಿನವರ ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ನಿರೀಕ್ಷೆಯಂತೆ ತಮಿಳುನಾಡು ವಿರುದ್ಧ 9 ವಿಕೆಟ್‌ಗಳ ಸುಲಭ ಜಯ ಸಾಧಿಸಿ ಫೈನಲ್ ಪ್ರವೇಶಿಸಿತು.

ಭಾನುವಾರ ಮೂರನೇ ದಿನದಾಟದ ಅಂತ್ಯಕ್ಕೆ ತಮಿಳುನಾಡು ಎರಡನೇ ಇನ್ನಿಂಗ್ಸ್‌ನಲ್ಲಿ 70.5 ಓವರ್‌ಗಳಲ್ಲಿ 302ಕ್ಕೆ ಆಲೌಟ್ ಆಗಿ, ಕರ್ನಾಟಕಕ್ಕೆ 11 ರನ್‌ಗಳ ಗುರಿ ನೀಡಿತ್ತು. ಸೋಮವಾರ ಕರ್ನಾಟಕ ತಂಡವು ಈ ಔಪಚಾರಿಕ ವಿಧಿಯನ್ನು 1.1 ಓವರ್‌ಗಳಲ್ಲಿ 12 ರನ್ ಹೊಡೆಯಿತು.

ಶಿವಮೊಗ್ಗದಲ್ಲಿ ಜ.12ರಿಂದ 15ರವರೆಗೆ ನಡೆಯಲಿರುವ ಫೈನಲ್‌ನಲ್ಲಿ ಕರ್ನಾಟಕ ತಂಡವು, ಮಹಾರಾಷ್ಟ್ರವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರು: ತಮಿಳುನಾಡು ಮೊದಲ ಇನ್ನಿಂಗ್ಸ್: 126; ಕರ್ನಾಟಕ ಮೊದಲ ಇನ್ನಿಂಗ್ಸ್: 418; ತಮಿಳುನಾಡು ಎರಡನೇ ಇನ್ನಿಂಗ್ಸ್: 302. ಕರ್ನಾಟಕ ಎರಡನೇ ಇನ್ನಿಂಗ್ಸ್: 1.1 ಓವರ್‌ಗಳಲ್ಲಿ 12.

ಟೆಸ್ಟ್ ಕ್ರಿಕೆಟ್‌ಗೆ ಕ್ಲಾಸೆನ್ ವಿದಾಯ



ಹೆನ್ರಿಚ್ ಕ್ಲಾಸೆನ್

ಪ್ರಿಟೋರಿಯಾ (ಪಿಟಿಐ): ದಕ್ಷಿಣ ಆಫ್ರಿಕಾದ ವಿಕೆಟ್ ಕೀಪರ್–ಬ್ಯಾಟರ್ ಹೆನ್ರಿಚ್ ಕ್ಲಾಸೆನ್ ಅವರು ಅಲ್ಪಾವಧಿಯ ಟೆಸ್ಟ್ ಕ್ರಿಕೆಟ್‌ಗೆ ಸೋಮವಾರ ವಿದಾಯ ಹೇಳಿದ್ದಾರೆ.

2019ರಲ್ಲಿ ರಾಂಚಿಯಲ್ಲಿ ಭಾರತ ವಿರುದ್ಧ ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದ ಕ್ಲಾಸೆನ್ ನಾಲ್ಕು ಟೆಸ್ಟ್‌ಗಳನ್ನಷ್ಟೇ ಆಡಿದ್ದಾರೆ. ಕಳೆದ ವರ್ಷ ಜೊಹಾನೆಸ್‌ಬರ್ಗ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಕೊನೆಯ ಪಂದ್ಯ ಆಡಿದ್ದರು. 32 ವರ್ಷದ ಕ್ಲಾಸೆನ್ 13ರ ಸರಾಸರಿಯಲ್ಲಿ 104 ರನ್ ಗಳಿಸಿದ್ದು, ಆಸ್ಟ್ರೇಲಿಯಾ ವಿರುದ್ಧ ಸಿಡ್ನಿಯಲ್ಲಿ ಗಳಿಸಿದ್ದ 35 ರನ್ ಅತ್ಯಧಿಕವಾಗಿದೆ.

ಫುಟ್‌ಬಾಲ್ ದಿಗ್ಗಜ ಫ್ರಾಂಜ್ ಬೆಕೆನ್‌ಬಾರ್ ಇನ್ನಿಲ್ಲ

ಬರ್ಲಿನ್ (ಎಎಫ್‌ಪಿ): ಜರ್ಮನಿಯ ಫುಟ್‌ಬಾಲ್ ದಿಗ್ಗಜ ಫ್ರಾಂಜ್ ಬೆಕೆನ್‌ಬಾರ್ (78) ಅನಾರೋಗ್ಯದಿಂದ ಭಾನುವಾರ ನಿಧನರಾದರು ಎಂದು ಜರ್ಮನ್ ಫುಟ್‌ಬಾಲ್ ಸಂಸ್ಥೆ ಸೋಮವಾರ ತಿಳಿಸಿದೆ.

1974ರ ಫುಟ್‌ಬಾಲ್ ವಿಶ್ವಕಪ್ ಗೆದ್ದ ಪಶ್ಚಿಮ ಜರ್ಮನಿ ತಂಡದ ನಾಯಕರಾಗಿದ್ದ ಬೆಕೆನ್‌ಬಾರ್, 1990ರ ವಿಶ್ವಕಪ್ ವಿಜೇತ ಇಟಲಿ ತಂಡದ ತರಬೇತುದಾರನಾಗಿಯೂ ಕಾರ್ಯ ನಿರ್ವಹಿಸಿದ್ದರು.



ಸೊಗಸಾದ ಆಟದ ಶೈಲಿ ಮತ್ತು ನಾಯಕತ್ವ ಗುಣಗಳಿಂದಾಗಿ ಅವರನ್ನು 'ಕೈಸರ್' (ಸಾಮ್ರಾಟ) ಎಂದು ಕರೆಯಲಾಗುತ್ತಿತ್ತು. ಆಟಗಾರನಾಗಿ ಮತ್ತು ತರಬೇತುದಾರನಾಗಿ ವಿಶ್ವಕಪ್ ಗೆದ್ದ ವಿಶ್ವದ ಕೇವಲ ಮೂರನೇ ಆಟಗಾರ ಬೆಕೆನ್‌ಬಾರ್. (ಉಳಿದ ಇಬ್ಬರು– ಫ್ರಾನ್ಸ್‌ನ ಡಿಡಿಯರ್ ದೆಶ್ಚಾಂಪ್ಸ್ ಮತ್ತು ಈಚೆಗೆ ನಿಧನರಾದ ಬ್ರೆಜಿಲ್‌ನ ಮಾರಿಯೊ ಝಗಾಲೊ)

ಟೆನಿಸ್: ಪ್ರಧಾನ ಸುತ್ತಿಗೆ ಫೈಸಲ್

ಪ್ರಜಾವಾಣಿ ವಾರ್ತೆ

ಮಂಡ್ಯ: ಭಾರತದ ಫೈಸಲ್ ಖಮರ್ ಹಾಗೂ ಶಿವಾಂಕ್ ಭಟ್ನಾಗರ್ ಇಲ್ಲಿನ ಪಿಇಟಿ ಟೆನಿಸ್ ಅಂಕಣದಲ್ಲಿ ನಡೆಯುತ್ತಿರುವ ಮಂಡ್ಯ ಪಿಇಟಿ ಓಪನ್ ಪುರುಷರ ಐಟಿಎಫ್ ಟೂರ್ನಿಯ ಅರ್ಹತಾ ಸುತ್ತಿನಲ್ಲಿ ಗೆಲುವು ದಾಖಲಿಸಿ ಪ್ರಧಾನ ಸುತ್ತಿಗೆ ಅರ್ಹತೆ ಪಡೆದರು.

ಸೋಮವಾರ ನಡೆದ ಅರ್ಹತಾ ಸುತ್ತಿನ ಅಂತಿಮ ಪಂದ್ಯದಲ್ಲಿ ಫೈಸಲ್ 1 ಗಂಟೆ 49 ನಿಮಿಷದ ದೀರ್ಘ ಹಣಾಹಣಿಯಲ್ಲಿ ಎಂಟನೇ ಶ್ರೇಯಾಂಕದ ಜಿಯಾಂಗ್ ಡೊಂಗ್ (ಆಸ್ಟ್ರೇಲಿಯಾ) ಅವರನ್ನು 6-4, 4-6, 10-5 ರಿಂದ ಹಿಮ್ಮೆಟ್ಟಿಸಿದರು. ಅನಾರೋಗ್ಯದಿಂದ ಚೇತರಿಸಿಕೊಂಡು ಕಣಕ್ಕೆ ಇಳಿದಿದ್ದ ಫೈಸಲ್ ಮೊದಲ ಸೆಟ್‌ನ ಆರಂಭದಲ್ಲಿ 0-3ರಿಂದ ಹಿನ್ನಡೆ ಅನುಭವಿಸಿದರು. ನಂತರ ಲಯ ಕಂಡುಕೊಂಡು ಸೆಟ್ ತಮ್ಮದಾಗಿಸಿಕೊಂಡರು.

ಫೈಸಲ್, ಮಂಗಳವಾರ ನಡೆಯುವ ಪ್ರಧಾನ ಹಂತದ ಮೊದಲ ಸುತ್ತಿನ ಹಣಾಹಣಿಯಲ್ಲಿ ಅಗ್ರ ಶ್ರೇಯಾಂಕದ ಕ್ರಿಸ್ ವಾನ್ ವೈಕ್ (ದಕ್ಷಿಣ ಆಫ್ರಿಕಾ) ಎದುರು ಸೆಣಸಲಿದ್ದಾರೆ.

ಅರ್ಹತಾ ಸುತ್ತಿನ ಮತ್ತೊಂದು ಪಂದ್ಯದಲ್ಲಿ ಭಾರತದ ಶಿವಾಂಕ್ ಭಟ್ನಾಗರ್ ಐದನೇ ಶ್ರೇಯಾಂಕದ ಆರೊನ್ ಕೊಹೆನ್ (ಇಸ್ರೇಲ್) ಎದುರು 7-5, 3-6, 10-6 ಸೆಟ್‌ಗಳಿಂದ ಅಚ್ಚರಿಯ ಗೆಲುವು ದಾಖಲಿಸಿದರು.

12ನೇ ಶ್ರೇಯಾಂಕದ ವಿಷ್ಣುವರ್ಧನ್ ಎರಡು ಗಂಟೆಗೂ ಅಧಿಕ ಹೋರಾಟದ ಪಂದ್ಯದಲ್ಲಿ ದ್ವಿತೀಯ ಶ್ರೇಯಾಂಕದ ಕೊರಿಯಾದ ವೂಬಿನ್ ಶಿನ್ ಅವರನ್ನು 6-3, 6-7(5), 10-4 ಸೆಟ್‌ಗಳಿಂದ ಮಣಿಸಿದರು.

ಮಂಗಳವಾರದಿಂದ ಪ್ರಧಾನ ಸುತ್ತಿನ ಸಿಂಗಲ್ಸ್ ಹಾಗೂ ಡಬಲ್ಸ್ ಪಂದ್ಯಗಳು ಆರಂಭ ಆಗಲಿವೆ.

ಇಂದಿನಿಂದ ಮಲೇಷ್ಯಾ ಓಪನ್

ಕ್ವಾಲಾಲಂಪುರ (ಪಿಟಿಐ): ಭಾರತದ ಅಗ್ರ ಆಟಗಾರರಾದ ಎಚ್.ಎಸ್. ಪ್ರಣಯ್ ಮತ್ತು ಲಕ್ಷ್ಯ ಸೇನ್ ಸೇರಿದಂತೆ ಪ್ರಮುಖರು ಮಂಗಳವಾರ ಇಲ್ಲಿ ಆರಂಭವಾಗಲಿರುವ ಮಲೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭದ ನಿರೀಕ್ಷೆಯಲ್ಲಿದ್ದಾರೆ.

ವಿಶ್ವದ 8ನೇ ಕ್ರಮಾಂಕದ ಪ್ರಣಯ್ ಒಲಿಂಪಿಕ್ಸ್ ರೇಸ್‌ನಲ್ಲಿ ಮುಂಚೂಣಿಯಲ್ಲಿದ್ದಾರೆ. ಅವರು ಡೆನ್ಮಾರ್ಕ್‌ನ ಆ್ಯಂಡರ್ಸ್ ಆಂಟೊನ್ಸೆನ್ ಅವರನ್ನು ಎದುರಿಸುವರು. ಲಕ್ಷ್ಯ ಸೇನ್ ಮತ್ತು ಕಿದಂಬಿ ಶ್ರೀಕಾಂತ್ ಅವರ ಮೇಲೂ ಎಲ್ಲರ ಕಣ್ಣು ನೆಟ್ಟಿದೆ.

ಉತ್ತಮ ಮೊತ್ತದತ್ತ ಕರ್ನಾಟಕ

ಪ್ರಜಾವಾಣಿ ವಾರ್ತೆ

ಮೈಸೂರು: ಆತಿಥೇಯ ಕರ್ನಾಟಕ ತಂಡವು ಇಲ್ಲಿ ನಡೆಯುತ್ತಿರುವ ಸಿ.ಕೆ. ನಾಯ್ಡು ಟ್ರೋಫಿ (23 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧ ಉತ್ತಮ ಮೊತ್ತದತ್ತ ಹೆಜ್ಜೆ ಇಟ್ಟಿದೆ.

ಇಲ್ಲಿನ ಶ್ರೀಕಂಠದತ್ತ ಚಾಮರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ 2ನೇ ದಿನವಾದ ಸೋಮವಾರ ದಿನದಾಟ ಮುಗಿದಾಗ ಕರ್ನಾಟಕ 3 ವಿಕೆಟ್ ಕಳೆದುಕೊಂಡು 182 ರನ್ ಗಳಿಸಿತು. ಮೊದಲ ಮೂವರು ಆಟಗಾರರನ್ನು ಬೇಗನೇ ಕಳೆದುಕೊಂಡು ಆತಿಥೇಯ ತಂಡ ಆಘಾತ ಅನುಭವಿಸಿತ್ತು. ಈ ವೇಳೆ ಕೆ.ವಿ. ಅನೀತ್ (ಔಟಾಗದೇ 89) ಹಾಗೂ ಅನೀಶ್ವರ ಗೌತಮ್ (ಔಟಾಗದೇ 70) 4ನೇ ವಿಕೆಟ್‌ಗೆ 130 ರನ್‌ಗಳ ಮುರಿಯದ ಜೊತೆಯಾಟವಾಡಿದರು.

ಇದಕ್ಕೂ ಮುನ್ನ, ಬೆಳಿಗ್ಗೆ ಎರಡನೇ ದಿನದಾಟ ಮುಂದುವರಿಸಿದ ಹೈದರಾಬಾದ್ ತಂಡವು 294 ರನ್‌ಗಳಿಗೆ ಆಲೌಟ್ ಆಯಿತು. ಮಧ್ಯಮ ಕ್ರಮಾಂಕದಲ್ಲಿ ತಂಡಕ್ಕೆ ಆಸರೆಯಾದ ಇಲ್ಯಾನ್ ಸಥಾನಿ ಶತಕ (120) ಬಾರಿಸಿ ಔಟಾದರು. ಕರ್ನಾಟಕ ಪರ ಮೈಸೂರಿನ ವೇಗಿ ಎಲ್. ಮನ್ವಂತ್ ಕುಮಾರ್ 5 ವಿಕೆಟ್ ಪಡೆದು ಸಂಭ್ರಮಿಸಿದರು. ಸ್ಪಿನ್ನರ್ ಶಶಿಕುಮಾರ್ 3 ವಿಕೆಟ್ ಉರುಳಿಸುವ ಮೂಲಕ ಸಾಥ್ ನೀಡಿದರು.

ಸಂಕ್ಷಿಪ್ತ ಸ್ಕೋರ್: ಹೈದರಾಬಾದ್: ಮೊದಲ ಇನಿಂಗ್ಸ್: 107.3 ಓವರ್‌ಗಳಲ್ಲಿ 294 (ಇಲ್ಯಾನ್ ಸಥಾನಿ 120, ಸಿ.ಟಿ.ಎಲ್. ರಕ್ಷಣ್ 44. ಎಲ್. ಮನ್ವಂತ್‌ಕುಮಾರ್ 67ಕ್ಕೆ 5, ಕೆ.ಶಶಿಕುಮಾರ್ 85ಕ್ಕೆ 3); ಕರ್ನಾಟಕ: 56 ಓವರ್‌ಗಳಲ್ಲಿ 3 ವಿಕೆಟ್‌ಗೆ 182ಕ್ಕೆ (ಕೆ.ವಿ. ಅನೀಶ್ ಔಟಾಗದೇ 89, ಅನೀಶ್ವರ್ ಗೌತಮ್ ಔಟಾಗದೇ 70; ನಿತಿನ್ ಸಾಯಿಯಾದವ್ 42ಕ್ಕೆ 2)



ವಿಜಯಪುರ –ಸೋಲಾಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ಕರ್ನಾಟಕದ ಸೈಕ್ಲಿಸ್ಟ್‌ಗಳು ಸೋಮವಾರ ತಾಲೀಮು ನಡೆಸಿದರು –ಪ್ರಜಾವಾಣಿ ಚಿತ್ರ

'ಗುಮ್ಮಟನಗರಿ'ಯಲ್ಲಿ ಸೈಕ್ಲಿಸ್ಟ್‌ಗಳ ಕಲರವ

• ಬಸವರಾಜ್ ಸಂಪಳ್ಳಿ

ವಿಜಯಪುರ: 'ಸೈಕ್ಲಿಸ್ಟ್‌ಗಳ ಕಾಶಿ' ಎಂದೇ ಪ್ರಸಿದ್ಧವಾಗಿರುವ ವಿಜಯಪುರ ನಗರ 28ನೇ ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ಗೆ ಸಜ್ಜಾಗಿದೆ.

1998ರಲ್ಲಿ 4ನೇ ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್ ಮತ್ತು 2006ರಲ್ಲಿ ರಾಷ್ಟ್ರೀಯ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್ ಅನ್ನು ಯಶಸ್ವಿಯಾಗಿ ಸಂಘಟಿಸಿದ್ದ, 'ಗುಮ್ಮಟನಗರಿ' ಇದೀಗ ಮತ್ತೊಮ್ಮೆ ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ಗೆ ಆತಿಥ್ಯ ವಹಿಸಿದೆ.

ವಿಜಯಪುರದಲ್ಲಿ 1998ರಲ್ಲಿ 4ನೇ ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್ ನಡೆದಾಗ 19ರಲ್ಲಿ 16 ಚಿನ್ನದ ಪದಕಗಳನ್ನು ಆತಿಥೇಯ ಕರ್ನಾಟಕ ತಂಡವೇ ಮುಡಿಗೇರಿಸಿಕೊಂಡಿತ್ತು. ದೇಶದ ವಿವಿಧ ರಾಜ್ಯ ಮತ್ತು ಸರ್ವಿಸಸ್‌ಗಳಿಂದ 33 ತಂಡಗಳಿಂದ ಸುಮಾರು 850 ರಾಷ್ಟ್ರೀಯ, ಅಂತರರಾಷ್ಟ್ರೀಯ ಖ್ಯಾತಿಯ ಸೈಕ್ಲಿಸ್ಟ್‌ಗಳು, ವ್ಯವಸ್ಥಾಪಕರು, ತರಬೇತುದಾರರು, ಸಿ.ಎಫ್.ಐ. ಕ್ರೀಡಾಧಿಕಾರಿಗಳು ಗುಮ್ಮಟನಗರಿಗೆ ಬಂದಿದ್ದಾರೆ.

ಕರ್ನಾಟಕ ಅಮೆಚೂರ್ ಸೈಕ್ಲಿಂಗ್ ಸಂಸ್ಥೆ, ನವದೆಹಲಿಯ ಭಾರತೀಯ ಸೈಕ್ಲಿಂಗ್ ಫೆಡರೇಷನ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಶ್ರಯದಲ್ಲಿ ಜ. 9ರಿಂದ 12ರವರೆಗೆ ಪ್ರತಿದಿನ ಬೆಳಿಗ್ಗೆ 8 ರಿಂದ ಸಂಜೆ 6ರ ವರೆಗೆ ನಗರದ ಹೊರವಲಯದ ಸೋಲಾಪುರ ರಾಷ್ಟ್ರೀಯ ಹೆದ್ದಾರಿ 52ರಲ್ಲಿ ರಾಘವೇಂದ್ರ ಪೆಟ್ರೋಲ್ ಪಂಪ್ ಹತ್ತಿರದಿಂದ ಸ್ಪರ್ಧೆಗಳು ಆರಂಭವಾಗಲಿವೆ.

ಸಂಕ್ಷಿಪ್ತ ಸುದ್ದಿ

28 ಬ್ಯಾಡ್ಮಿಂಟನ್ ಆಟಗಾರರಿಗೆ ಆರ್ಥಿಕ ನೆರವು

ನವದೆಹಲಿ (ಪಿಟಿಐ): ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ಈ ವರ್ಷ ಅಂತರರಾಷ್ಟ್ರೀಯ ಟೂರ್ನಿಗಳಿಗೆ ಸೀನಿಯರ್ ರಾಷ್ಟ್ರೀಯ ಪುರುಷರ ಚಾಂಪಿಯನ್ ಚಿರಾಗ್ ಸೇನ್ ಮತ್ತು ಮಹಿಳಾ ಚಾಂಪಿಯನ್ ಅನ್ಮೋಲ್ ಖಾರ್ಬ್ ಸೇರಿದಂತೆ 28 ಆಟಗಾರರಿಗೆ ಧನಸಹಾಯ ನೀಡಲಿದೆ.

ಬಿಡಬ್ಲ್ಯುಎಫ್ ವಿಶ್ವ ಶ್ರೇಯಾಂಕದಲ್ಲಿ 26 ರಿಂದ 75 ನೇ ಸ್ಥಾನದಲ್ಲಿರುವ ಭಾರತದ ಆಟಗಾರರು ಮತ್ತು ರಾಷ್ಟ್ರೀಯ ಶಿಬಿರದ ಭಾಗವಲ್ಲದ ಸೀನಿಯರ್ ನ್ಯಾಷನಲ್ ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ಪ್ರದರ್ಶನ ನೀಡುವವರು ಇದರ ಪ್ರಯೋಜನ ಪಡೆಯಲಿದ್ದಾರೆ.

ಗ್ರಾಮೀಣ ವಿದ್ಯುದ್ದೀಕರಣ ನಿಗಮ (ಆರ್‌ಇಸಿ)ದೊಂದಿಗಿನ ಬಿಎಐ ಸಹಭಾಗಿತ್ವದ ಭಾಗವಾಗಿ ಈ ನಿಧಿ ನೀಡಲಾಗುತ್ತಿದೆ. ಅಬುಧಾಬಿ ಮಾಸ್ಟರ್ಸ್ ಚಾಂಪಿಯನ್ ಉನ್ನತಿ ಹೂಡಾ ಮತ್ತು 2023ರ ಬ್ಯಾಡ್ಮಿಂಟನ್ ಏಷ್ಯಾ (17 ವರ್ಷದೊಳಗಿನ) ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ವಿಜೇತೆ ತನ್ವಿ ಶರ್ಮಾ ಸೇರಿದಂತೆ ಸಿಂಗಲ್ಸ್ ಮತ್ತು ಡಬಲ್ಸ್ ವಿಭಾಗಗಳಲ್ಲಿ ಆಟಗಾರರನ್ನು ಆಯ್ಕೆ ಮಾಡಲಾಗಿದೆ.

ವರುಣ್, ಇಶಾಗೆ ಚಿನ್ನ

ಜಕಾರ್ತ (ಪಿಟಿಐ): ಭಾರತದ ಯುವ ಶೂಟರ್‌ಗಳಾದ ವರುಣ್ ತೋಮರ್ ಮತ್ತು ಇಶಾ ಸಿಂಗ್ ಸೋಮವಾರ ಇಲ್ಲಿ ನಡೆದ ಏಷ್ಯನ್ ಕ್ವಾಲಿಫೈಯರ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಗಳಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ.

ಈ ಗೆಲುವಿನೊಂದಿಗೆ ಇಬ್ಬರು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ. ಪ್ಯಾರಿಸ್‌ಗೆ ತೆರಳುವ ಭಾರತೀಯ ಶೂಟರ್‌ಗಳ ಸಂಖ್ಯೆ 15 ತಲುಪಿದೆ.

ಚುನಾವಣೆಯಲ್ಲಿ ಗೆದ್ದ ಶಕೀಬ್ ಅಲ್ ಹಸನ್



ಢಾಕಾ (ಪಿಟಿಐ): ಬಾಂಗ್ಲಾದೇಶ ಕ್ರಿಕೆಟ್ ತಂಡದ ನಾಯಕ ಶಕೀಬ್ ಅಲ್ ಹಸನ್ ಅವರು ಬಾಂಗ್ಲಾದೇಶ ಸಂಸತ್ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಾರೆ. ಅವರು ಆಡಳಿತಾರೂಢ ಪ್ರಧಾನಿ ಶೇಖ್ ಹಸೀನಾ ಅವರ ಅವಾಮಿ ಲೀಗ್ ಪಕ್ಷದಿಂದ ಸ್ಪರ್ಧಿಸಿದ್ದರು.

ಶಕೀಬ್ ಅವರು ಮಗುರಾ ಪಶ್ಚಿಮ ಕ್ಷೇತ್ರದಲ್ಲಿ ತಮ್ಮ ಸಮೀಪದ ಪ್ರತಿಸ್ಪರ್ಧಿ ಖಾಜಿ ರೆಜಾಲ್ ಹುಸೇನ್ ವಿರುದ್ಧ 1,50,000 ಮತಗಳ ಅಂತರದಿಂದ ಮೇಲುಗೈ ಸಾಧಿಸಿದ್ದಾರೆ.

ಚುನಾವಣಾ ಪ್ರಚಾರಕ್ಕಾಗಿ ಶಕೀಬ್ ಅವರು ಕ್ರಿಕೆಟ್‌ನಿಂದ ರಜೆ ಪಡೆದಿದ್ದರು. ಕಳೆದ ಏಕದಿನ ವಿಶ್ವಕಪ್‌ನಲ್ಲಿ ಅವರು ಬಾಂಗ್ಲಾದೇಶ ತಂಡವನ್ನು ಮುನ್ನಡೆಸಿದ್ದರು.

36 ವರ್ಷದ ಶಕೀಬ್ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾಗಿಲ್ಲ. ಕ್ರಿಕೆಟ್‌ನ ಜೊತೆಗೆ ರಾಜಕೀಯದಲ್ಲಿ ಹೊಸ ಇನಿಂಗ್ಸ್ ಆರಂಭಿಸಿದ್ದಾರೆ.